

ಸಂಪುಟ 21 ಸಂಚಿಕೆ 24 ಜೂನ್ 7-13, 1999 ರೂ 3.00 ದುಡಿವ ಜನರ ಪ್ರಾಣಮಿತ್ರ

ಐಕ್ಯರಂಗ



ರಕ್ಷಣಾ ಮಂತ್ರಿಯಿಂದಲೇ ದೇಶವನ್ನು ರಕ್ಷಿಸಬೇಕಾಗಿದೆಯೇ!

ರಾಜಕೀಯ ವಿಶ್ಲೇಷಣೆಗಳಲ್ಲಿ ವ್ಯಕ್ತಿನಿಷ್ಟತೆ





ಗುಂಡೋರಿ ನಾಲಾ ಹೋರಾಟ

ದೊಡ್ಡಪ್ಪನಿಗೇ 'ಬೆದರಿಕೆ' ಪತ್ರ

(ಜ್ಯೋತಿಬಸುರವರ ಆತ್ಮಕಥನದಿಂದ)

ಸಂಕಲ್ಪ ಜಾತ್ರೆಯ ನಂತರ ಪಾಂಚಜನ್ಯಯಾತ್ರೆ!

ಸಂಪಾದಕೀಯ

"ಅಲಲ ಕೀಹಾ" ಎಂದು ಅಬ್ಬರ ಮಾಡುತ್ತಾ ಕರ್ನಾಟಕವನ್ನು ಸುತ್ತಿ ಹುಬ್ಬಳಿಯಲ್ಲಿ ಮಹಾ ಜಾತ್ರೆಯಲ್ಲಿ ಕೊನೆಗೊಂಡ ಬಿಜೆಪಿಯ ಸಂಕಲ್ಪ ಯಾತ್ರೆಯ ಬಗ್ಗೆ "ಐಕ್ಯರಂಗದ ಅಭಿಪ್ರಾಯವನ್ನು ನೀವೆಲ್ಲಾ ಓದಿದ್ದೀರಿ. ಭಾಗವಹಿಸಿದ ಲಕ್ಷಗಟ್ಟಲೆ ಜನಕ್ಕೆಲ್ಲಾ ಅದ್ದೂರಿ ಅನ್ನ ಸಮರ್ಪಣೆ, ಅದರ ಮೇಲೊಂದಿಷ್ಟು ದಕ್ಷಿಣೆ, ವಾಹನದ ಏರ್ಪಾಡುಗಳೊಂದಿಗೆ ಕೇವಲ ಕೆಲವೇ ಕೆಲವು ಕೋಟಿ ರೂಗಳು ಮಾತ್ರ ಖರ್ಚಾಗಿರಬಹುದಾದ ಈ ಭಾರಿ ಭಾಷಣ ಮೇಳ, ಸಮೃದ್ಧ ಕರ್ನಾಟಕಕ್ಕಾಗಿ ಸಂಕಲ್ಪಯಾತ್ರೆಯ ಅಂತಿಮ ಶಿಖರ. ಆದರೆ ಈ ಭಾಷಣಗಳ ಮಳೆಯಲ್ಲಿ ಶಬ್ದಗಳ ಮಹಾಪೂರದಲ್ಲಿ ಸಮೃದ್ಧ ಕರ್ನಾಟಕ ಎಂಬ ಮೂಲ ಉದ್ದೇಶ ಕೊಚ್ಚಿ ಹೋಗಿಯೇ ಬಿಟ್ಟಿತು. ಹಿನ್ನೆಲೆಯಲ್ಲಿ ರಂಜಿಸುತ್ತಿದ್ದ ಬಟ್ಟೆಯ ಬ್ಯಾನರ್ ಮೇಲೆ ಬಿಟ್ಟರೆ ಈ ಮಹತ್ವದ ಉದ್ದೇಶ ಯಾರ ಎದೆಗೂಡಿನಲ್ಲಿಯೂ ಗೂಡು ಕಟ್ಟಿದಂತೆ ಕಾಣಲಿಲ್ಲ. ಸಮೃದ್ಧ ಕರ್ನಾಟಕವನ್ನು ಕಟ್ಟುವುದು ಹೇಗೆ, ಬಿಜೆಪಿಯಿಂದ ಅದು ಸಾಧ್ಯವೇ? ಹಾಗೇಯೇ ಭಾರತದ ಇತರ ರಾಜ್ಯಗಳ ಬದುಕು, ಸಂಸ್ಕೃತಿ ಅರಳುವಂತೆ ಮಾಡುವುದರ ಉದ್ದೇಶ ಬಿ.ಜೆ.ಪಿ.ಯ ಅಖಿಲ ಭಾರತ ನಾಯಕರಿಗಂತೂ ಇಲ್ಲ ಎಂಬುದು ಇದರಿಂದ ಸಿದ್ಧವಾಯಿತು. ಈಗಾಗಲೇ ಅವರು ಆಳಿದ ಆಳುತ್ತಿರುವ ರಾಜ್ಯಗಳಾದ -ರಾಜಸ್ತಾನ, ದೆಹಲಿ, ಉತ್ತರ ಪ್ರದೇಶ, ಮಧ್ಯಪ್ರದೇಶ, ಹಿಮಾಚಲ ಪ್ರದೇಶಗಳನ್ನು ಅವರು ಹೇಗೆ ಸಮೃದ್ಧಿಮಾಡಿದ್ದಾರೆ? ಅಲ್ಲಿಯ ಜನಸಾಮಾನ್ಯರ ಬದುಕು ಅರಳಿದೆಯೇ? ಹಾಗಿದ್ದರೆ ಈ ರಾಜ್ಯಗಳಲ್ಲಿ ಜನತೆ ಬಿಜೆಪಿಯನ್ನೇಕೆ ಇತ್ತೀಚೆಗೆ ತಿರಸ್ಕರಿಸದರು ಎಂಬುದಕ್ಕೆ ಅಲ್ಲಿ ಜನರಿಂದ ತಿರಸ್ಕೃತವಾದ ಬಿಜೆಪಿಯನ್ನು ಕರ್ನಾಟಕದ ಜನರೇಕೆ ಸ್ವಾಗತಿಸಬೇಕು ಎಂಬುದಕ್ಕೆ ಅಲ್ಲಿ ಉತ್ತರಗಳಿರಲಿಲ್ಲ.

ಯಾವ ಸಂಕಲ್ಪದಿಂದ ಬಿಜೆಪಿ ಯಾತ್ರೆ ಆರಂಭವಾಯಿತೋ ಅದು ಜಾತ್ರೆಯಾಗುವ ವೇಳೆಗೆ ಮರೆತೇ ಹೋಯಿತು. ಕರ್ನಾಟಕವನ್ನು ಕರ್ನಾಟಕದ ಜನರ ಬದುಕನ್ನು ಹೇಗೆ ಸಮೃದ್ಧಗೊಳಿಸುತ್ತೇವೆ ಎಂದು ಹೇಳಲೇ ಇಲ್ಲ. ಕಾಂಗ್ರೆಸ್ ಅಧ್ಯಕ್ಷರೂ ಇದುವರೆಗೂ ಕರ್ನಾಟಕದ ಜನತೆಯ ಬವಣೆಗಳ ಬಗ್ಗೆ, ಅದರ ನಿವಾರಣೆಗಳ ಬಗ್ಗೆ ತಮ್ಮ ಕಣ್ಣೋಟ ಬಿಚ್ಚಲ್ಲಿ.

ರಾಷ್ಟ್ರ ಮಟ್ಟದ ನಾಯಕರಿರಲಿ ರಾಜ್ಯಮಟ್ಟದ ನಾಯಕರೂ ಕೂಡ ಆ ವೇದಿಕೆಯ ಮೇಲಿಂದ ಕರ್ನಾಟಕವನ್ನು ತಾವು ಹೇಗೆ ಸಮೃದ್ಧವಾಗಿಸುತ್ತೇವೆ ಎಂದು ವಿವರಿಸಲಿಲ್ಲ. ಯಾವ ಸಂಕಲ್ಪದಿಂದ ಯಾತ್ರೆ ಆರಂಭವಾಯಿತೋ ಅದು ಜಾತ್ರೆಯಾಗುವ ವೇಳೆಗೆ ಅದು ಮರೆತೇಹೋಯಿತು.ಕರ್ನಾಟಕದಲ್ಲಿ ೧೦.೦೦೦ ಕ್ಕಿಂತ ಹೆಚ್ಚು ಕಿ.ಮೀ. ಪ್ರವಾಸ ಮಾಡಿ ಲಕ್ಷಕ್ಕಿಂತ ಹೆಚ್ಚು ಜನರನ್ನು ಭೇಟಿ ಮಾಡಿದ ಅನುಭವ ಈ ಜಾಥಾ ನಾಯಕರ ಮಾತಿನಲ್ಲಿ ಮೂಡಲಿಲ್ಲ. ಬಿಜೆಪಿಗೆ ಓಟು. ಓಟು ಮತ್ತು ಓಟು ಅಷ್ಟೇ ಆಯಿತು. ಈಗ ಜಾತ್ರೆ ಮುಗಿದಿದೆ. ಕರ್ನಾಟಕದ ಜನತೆ ತಮ್ಮ ರಾಜ್ಯವನ್ನು ತಮ್ಮ ಬದುಕನ್ನು ಇಂತಹ ಮಂದಿ ಅರಳಿಸಬಲ್ಲರೇ ಎಂದು ಚಿಂತಿಸುವ ಕಾಲಬಂದಿದೆ. ಅದಕ್ಕೆ ಇನ್ನೂ ಸಾಕಷ್ಟು ಸಮಯ ಇದೆ. ಈ ಅವಧಿಯನ್ನು ಕರ್ನಾಟಕದ ಜನ ಸದುಪಯೋಗ ಮಾಡಿಕೊಳ್ಳಲಿ.

ಈಗ ಮತ್ತೊಂದು ಯಾತ್ರೆ- ಕಾಂಗ್ರೆಸ್‌ನ ಅಧ್ಯಕ್ಷ ಎಸ್.ಎಂ. ಕೃಷ್ಣರ ಪಾಂಚಜನ್ಯ ಯಾತ್ರೆ ಆರಂಭವಾಗಿದೆ. ಕಾಂಗ್ರೆಸ್‌ನ ಅಧ್ಯಕ್ಷರಾಗಿ ಅವರ ಪಕ್ಷದ ಪದ್ಧತಿಯಂತೆ ಹೈ ಕಮಾಂಡಿನಿಂದ ನೇಮಕವಾದ ಮೇಲೆ ಕರ್ನಾಟಕವನ್ನು ಒಮ್ಮೆ ಸುತ್ತಿದ್ದಾರೆ. ಇವರು ಚುರುಕಾಗಿ ಪ್ರಾರಂಭಿಸಿದ ಈ ಪ್ರವಾಸವನ್ನು ಅನುಕರಿಸಿಯೇ ಯಡಿಯೂರಪ್ಪನವರ ಸಂಕಲ್ಪಯಾತ್ರೆ ಆರಂಭವಾಗಿದ್ದು, ಈಗ ಮತ್ತೊಮ್ಮೆ ಅಧಿಕೃತ ಯಾತ್ರೆಯಾಗಿ ಪಾಂಚಜನ್ಯ ಕರ್ನಾಟಕದ ರಸ್ತೆಗಳ ಕೆಟ್ಟ ಪರಿಸ್ಥಿತಿಯ ಅನುಭವ ಮಾಡಿಕೊಳ್ಳಲಿದೆ. ಆದರೆ ಇಲ್ಲಿಯವರೆಗು ಎಸ್.ಎಂ. ಕೃಷ್ಣ ತಮ್ಮ ಭಾಷಣ ಹಾಗೂ ಪತ್ರಿಕಾ ಸಂದರ್ಶನಗಳಲ್ಲಿ ಎಲ್ಲಿಯೂ ಕರ್ನಾಟಕದ ಜನರ ಬದುಕಿನ ಬವಣೆಯ ಬಗ್ಗೆ, ಅದರ ನಿವಾರಣೋಪಾಯಗಳ ಬಗ್ಗೆ ತಮ್ಮ ಕಣ್ಣೋಟವನ್ನು ಬಿಚ್ಚಿಲ್ಲ. ಅವರ ಪಕ್ಷ ಇಡೀ ದೇಶದ ಜನರ ಮೇಲೆ ಆರಂಭಿಸಿದ ಹೊಸ ಆರ್ಥಿಕ ನೀತಿಯ ಧಾಳಿಯ ಬಗ್ಗೆ ಒಂದು ಮಾತೂ ಆಡಿಲ್ಲ. ಕೋಮುವಾದದ ಸೋಲು-ಜಾತ್ಯಾತೀತತೆಯ ವಿಜಯ ಪ್ರಧಾನ ಪ್ರಶ್ನೆಯಾಗಿರುವ ಈ ನಿರ್ಣಾಯಕ ಗಳಿಗೆಯಲ್ಲಿ ಕಾಂಗ್ರೆ ಪಕ್ಷದ ನಡೆನುಡಿಗಳನ್ನು ಕರ್ನಾಟಕದ ಜಾತ್ಯಾತೀತ ಮನೋಭಾವದ ಜನತೆ ಎಚ್ಚರದಿಂದ ಪರೀಶೀಲಿಸುತ್ತದೆ ಎಂಬ ಅರಿವು ಅವರ, ಅವರ ಪಕ್ಷದ ನುಡಿ, ನಡೆಗಳನ್ನು ಪ್ರಭಾವಿಸಲಿ.

ಸಿಪಿಐ(ಎಂ) ರಾಜ್ಯ ಸಮಿತಿ ಸದಸ್ಯರ ಗಮನಕ್ಕೆ

ಜೂನ್ 11 ರಂದು ಸಿಪಿಐ(ಎಂ) ರಾಜ್ಯಸಮಿತಿ ಸಭೆ ಇರುವುದಿಲ್ಲ, ಜೂನ್ 10 ಮತ್ತು 11 ರಂದು ರಾಜ್ಯ ಕಾರ್ಯದರ್ಶಿ ಮಂಡಳಿ ಸಭೆ ಮಾತ್ರ ಇರುತ್ತದೆ ಎಂದು ತಿಳಿಸಲಾಗಿದೆ.

ನಿಮ್ಮ ಪ್ರಶ್ನೆ ? ನಮ್ಮ ಉತ್ತರ

ಜಾತಿ ಮತ್ತು ಅಸ್ಪೃಶ್ಯತೆ ಬಗೆಗಿನ ಸಂಚಿಕೆಯಲ್ಲಿ ಬಂದಂತಹ ಹಲವಾರು ಲೇಖನಗಳನ್ನು ಓದಿದೆ, ಅದೇ ರೀತಿಯಲ್ಲಿ ಸಾಮಾನ್ಯವಾಗಿ ಐಕ್ಯರಂಗ ಪತ್ರಿಕೆಯಲ್ಲಿ ದುಡಿಯುವ ವರ್ಗ ಎನ್ನುವ ಮಾತುಗಳು ಬರುತ್ತಿರುತ್ತವೆ. ನಿಮ್ಮ ಪತ್ರಿಕೆಯ ಮುಖ ಪುಟದ ಘೋಷಣೆ ಕೂಡ 'ದುಡಿವ ಜನರ ಪ್ರಾಣ ಮಿತ್ರ' ಅಂತಾ ಇದೆ. ಹಾಗೆಲ್ಲಾ ನೀವು ದುಡಿವ ಜನರು ಅಂತ ಹೇಳುವಾಗ, ದಲಿತರು ಮತ್ತು ದಲಿತೇತರರ ನಡುವೆ ವ್ಯತ್ಯಾಸವೇ ಇಲ್ಲವೇನೊ ಅನ್ನುವ ರೀತಿಯಲ್ಲಿ ನೀವು ಹೇಳುತ್ತಿರಿ ಎನ್ನಿಸುತ್ತದೆ. ಹೀಗಾಗಿ ನೀವು ದಲಿತ, ದಲಿತೇತರ ದುಡಿವ ಜನರ ನಡುವೆ ಇರುವ ವ್ಯತ್ಯಾಸವನ್ನು ಲೆಕ್ಕಕ್ಕೆ ತೆಗೆದುಕೊಳ್ಳುವುದಿಲ್ಲವೆ? ದಯವಿಟ್ಟು ಉತ್ತರಿಸಿ?

ಬಿ.ಆರ್.ಎಸ್.ಮೂರ್ತಿ

ದುಡಿಯುವ ಜನರೆಲ್ಲಾ ಒಗ್ಗಟ್ಟಾಗಬೇಕು. ಅವರು ಪ್ರಜ್ಞಾವಂತರಾಗಬೇಕು ಮತ್ತು ಆಳುವ ವರ್ಗದ ಶೋಷಣೆಯನ್ನು ಎದುರಿಸಬೇಕು. ಅಂತಿಮವಾಗಿ ದುಡಿಯುವ ವರ್ಗವೇ ಆಳುವ ವರ್ಗವಾಗಿ ರೂಪುಗೊಳ್ಳಬೇಕು. ಆಗ ಮಾತ್ರ ದುಡಿಯುವ ಎಲ್ಲಾ ಜನರ ಬದುಕು ಅರಳಲು ಸಾಧ್ಯ ಎಂಬುದು ನಮ್ಮ ಪತ್ರಿಕೆಯ ಆಳವಾದ ನಂಬಿಕೆ. ಆದರೆ ದುಡಿವ ಜನ ಸಮಾಜದಲ್ಲಿ ವಿವಿಧ ವಿಭಾಗಗಳು ಇವೆ ಎಂಬುದನ್ನು ಮತ್ತು ಅವರ ಜೀವನ ಪರಿಸ್ಥಿತಿ, ಸಮಸ್ಯೆಗಳು ಹಾಗೂ ಭಾವನೆಗಳು ಬೇರೆ ಬೇರೆಯಾಗಿರುತ್ತವೆ. ಅವರ ಮೇಲಿನ ಶೋಷಣೆಯ ಸ್ವರೂಪವು ಬೇರೆ ಬೇರೆಯೇ ಆಗಿರುತ್ತದೆ ಎಂಬುದು ಸ್ಪಷ್ಟ. ಈ ವಾಸ್ತವತೆಯನ್ನು ಪರಿಗಣಿಸಿದರೆ ಮಾತ್ರ ದುಡಿವ ಜನರ ಒಗ್ಗಟ್ಟನ್ನು ಸಾಧಿಸುವುದು ಸಾಧ್ಯ ಮತ್ತು ಆಳುವ ವರ್ಗದ ದಮನ ದಬ್ಬಾಳಿಕೆಗಳನ್ನು ಎದುರಿಸಿ ಗೆಲ್ಲುವುದು ಸಾಧ್ಯ. ಉದಾಹರಣೆಗೆ ಕಾರ್ಮಿಕರು, ರೈತರು, ಕೂಲಿಕಾರರು ಎಲ್ಲರೂ ಶೋಷಣೆಗೆ ಒಳಗಾದವರೆ. ಆದರೆ ಅವರ ಶೋಷಣೆಯ ಸ್ವರೂಪ ಮತ್ತು ಶೋಷಕರು ಬೇರೆ ಬೇರೆ. ಅದೇ ರೀತಿಯಲ್ಲೇ ಜಾತಿಬದ್ಧವಾದ ಭಾರತದಲ್ಲಿ ಅಸ್ಪೃಶ್ಯ ಶೋಷಣೆ ಉಳಿದ ದುಡಿಯುವ ವರ್ಗಗಳ ಶೋಷಣೆಗಿಂತ ಕ್ರೂರವಾದದ್ದು ಹಾಗೂ ಅಮಾನವೀಯವಾದದ್ದು. ಇಂದು ಭಾರತದಲ್ಲಿ ದುಡಿಯುವ ಜನರು ಬಂಡವಾಳಶಾಹಿಯ ವಿವಿಧ ರೂಪದ ಶೋಷಣೆಗೆ ತುತ್ತಾಗಿದ್ದಾರೆ. ಆದರೆ ದಲಿತರು ಮತ್ತು ಕೆಳಜಾತಿಯ ಜನರು ಈ ಬಂಡವಾಳಶಾಹಿ ಶೋಷಣೆಗೆ ತುತ್ತಾಗುವುದರ ಜೊತೆಗೆ ಅದಕ್ಕಿಂತಲೂ ಕ್ರೂರವಾದ ಪಾಳೇಗಾರಿ ಶೋಷಣೆಗೆ ಒಳಗಾಗಿದ್ದಾರೆ. ಭೂಮಿಯ ಮೇಲೆ ಅಪಾರ ಹಿಡಿತವನ್ನು ಸಾಧಿಸಿಕೊಂಡು ಹಳ್ಳಿಯ ಬದುಕಿನಲ್ಲಿ ದರ್ಪ ದಬ್ಬಾಳಿಕೆಗಳಿಗೆ ಮತ್ತೊಂದು ಹೆಸರಾಗಿರುವ ಭೂಮಾಲಿಕರು ಸಾವಿರಾರು ವರ್ಷಗಳಿಂದಲೂ ತಮ್ಮ ಜಮೀನುಗಳಲ್ಲಿ ದುಡಿಯುವುದಕ್ಕೆ ಅಗ್ಗವಾದ ಅಥವಾ ಯಾವುದೇ ರೀತಿಯ ಪ್ರತಿಫಲವನ್ನು ನೀಡದೆ ಶ್ರಮವನ್ನು ಪಡೆಯುವುದಕ್ಕೆ ಸೃಷ್ಟಿಸಿದ ವ್ಯವಸ್ಥೆಯೇ ಅಸ್ಪೃಶ್ಯತೆ. ಪಾಳೇಗಾರಿ (feudal) ವ್ಯವಸ್ಥೆಯ ಅಂಗಗಳಾದ ರಾಜರು ಹಾಗೂ ಪುರೋಹಿತರು ಸೃಷ್ಟಿಸಿದ ಈ ವ್ಯವಸ್ಥೆ ಭಾರತದ ಗ್ರಾಮೀಣ ಪ್ರದೇಶದಲ್ಲಿ ಇನ್ನೂ ತೀವ್ರವಾಗಿ ಆಚರಣೆಯಲ್ಲಿದೆಯೆಂದರೆ ಅತ್ಯಂತ ಅಗ್ಗವಾಗಿ ಈ ಜನರ ಶ್ರಮವನ್ನು ಪಡೆಯಲು ಭಾರತದಲ್ಲಿ ಇನ್ನೂ ಜೀವಂತವಾಗಿರುವ ಪಾಳೇಗಾರಿ ವ್ಯವಸ್ಥೆ ಮತ್ತು ಅದರ ವರ್ಣಾಶ್ರಮ, ಧರ್ಮ, ಜಾತಿ ಪದ್ಧತಿಯ ಸಿದ್ಧಾಂತಗಳೇ ಕಾರಣ. ಆದುದರಿಂದ ದಲಿತೇತರರೆಲ್ಲರೂ ಹೆಚ್ಚಾಗಿ ಬಂಡವಾಳಶಾಹಿ ಶೋಷಣೆಯಿಂದ ಭಾದಿತರಾಗಿದ್ದರೆ ದಲಿತರು ಪಾಳೇಗಾರಿ ಹಾಗೂ ಬಂಡವಾಳಶಾಹಿಗಳೆರಡರಿಂದಲೂ ಏಕ ಕಾಲಕ್ಕೆ ಶೋಷಣೆಗೆ ಒಳಗಾಗಿದ್ದಾರೆ. ಆದ್ದರಿಂದ ದಲಿತ ಮತ್ತು ದಲಿತೇತರರ ನಡುವೆ ಶೋಷಣೆಯ ಸ್ವರೂಪ ಹಾಗೂ ತೀವ್ರತೆಯ ಈ ಬೇಧವನ್ನು ನಮ್ಮ ಪತ್ರಿಕೆ ಸ್ಪಷ್ಟವಾಗಿ ಗುರುತಿಸುತ್ತದೆ. ಇದನ್ನು ಬಿಚ್ಚಿಡಲೆಂದೇ ಜಾತಿ ಪದ್ಧತಿ ಮತ್ತು ಅಸ್ಪೃಶ್ಯತೆ ಬಗೆಗಿನ ಲೇಖನಗಳನ್ನು ಪ್ರಕಟಿಸಿದ್ದು ಮೇ ದಿನಾಚರಣೆ ಮತ್ತು ಜಾತಿಭೇದ ಹಾಗೂ ಅಸ್ಪೃಶ್ಯತೆಯ ಸಮಸ್ಯೆ ಎಂಬ ಬರಹದಲ್ಲಿ ಹೇಳಲಾದಂತೆ ಅಸ್ಪೃಶ್ಯತೆಯ ವಿರುದ್ಧ ಹೋರಾಡದೆ ಭಾರತದ ಕಾರ್ಮಿಕ ವರ್ಗಕ್ಕೆ ಮುಕ್ತಿ ಇಲ್ಲ ಎಂಬುದನ್ನು ಮತ್ತೆ ನಿಮಗೆ ನೆನಪಿಸಿಕೊಡಬಯಸುತ್ತೇನೆ.

ಹಾಗೆಯೇ ದಲಿತರಲ್ಲಿ ದಲಿತ ಸಂಘಟನೆಗಳು ಹಾಗೂ ನಾಯಕರು ಇಡೀ ಭಾರತದಲ್ಲಿ ಶೋಷಣೆಗೆ ಒಳಗಾದವರೆಂದರೆ ದಲಿತರು ಮಾತ್ರ, ದಲಿತರು ಮಾತ್ರವೆ ತಮ್ಮ ಶೋಷಣೆಯ ವಿರುದ್ಧ ಹೋರಾಡಬೇಕು ಎಂಬ ಪ್ರತ್ಯೇಕತ ಭಾವನೆಯನ್ನು ಬಿತ್ತುತ್ತಿದ್ದಾರೆ. ಇದರಿಂದ ದಲಿತರ ಪ್ರಶ್ನೆಗಳು, ಅವರ ಮೇಲಿನ ಪಾಳೇಗಾರಿ ಹಾಗೂ ಬಂಡವಾಳಶಾಹಿ ಶೋಷಣೆಯ ಎರಡು ಪಟ್ಟು ಹೊರೆಯಿಂದ ವಿಮೋಚನೆಗೊಳ್ಳುವುದಕ್ಕೆ ಅಡ್ಡಿಯಾಗಿದೆ. ದಲಿತ ಮತ್ತು ದಲಿತೇತರರ ನಡುವೆ ಭೇದ ಭಾವ ಬಿತ್ತಿ ಆಳುವ ವರ್ಗಗಳು ತಮ್ಮ ದಬ್ಬಾಳಿಕೆ ದಮನಗಳನ್ನು ದಲಿತರ ಶೋಷಣೆಯನ್ನು ಮತ್ತಷ್ಟು ತೀವ್ರವಾಗಿ ಮುಂದುವರೆಸಲು ಅವಕಾಶ ನೀಡುತ್ತಿದೆ. ಇದನ್ನು ದಲಿತ ಸೋದರ ಸೋದರಿಯರು, ಅವರ ಸಂಘಟನೆಗಳು ಮನಗಾಣಬೇಕು.

ದಲಿತೇತರರು ದಲಿತರ ನೋವನ್ನು, ಮನೋಭಾವನೆಗಳನ್ನು, ಸಮಸ್ಯೆಗಳನ್ನು ಅರ್ಥ ಮಾಡಿಕೊಂಡು ಅವನ್ನು ತಮ್ಮದಾಗಿಸಿಕೊಂಡು ಸ್ಪಂದಿಸಿದರೆ ಮಾತ್ರ ದಲಿತರ ನಡುವೆ ದಲಿತೇತರ ದುಡಿವ ವರ್ಗದ ಬಗ್ಗೆ ಇವರು ನಮ್ಮ ಬಂಧುಗಳು ಹೋರಾಟದ ಜೊತೆಗಾರರು ಎಂಬ ನೆಚ್ಚಿಕೆ ಮಾಡಬಲ್ಲರು. ಅದೇ ರೀತಿಯಲ್ಲಿ ದಲಿತರು ಎಲ್ಲಾ ದುಡಿಯುವ ವರ್ಗದ ಜೊತೆಗೂಡಿ ಒಗ್ಗಟ್ಟಾಗಿ ಹೋರಾಡುವುದರಲ್ಲಿಯೇ ತಮ್ಮ ವಿಮೋಚನೆ ಅಡಗಿದೆ ಎಂಬುದನ್ನು ತುರ್ತಾಗಿ ಅರಿತುಕೊಳ್ಳಬೇಕು.

ನಿಮ್ಮ ಪತ್ರ

ಮಾನ್ಯರೇ,

ದುಡಿವ ವರ್ಗದ ಮಿತ್ರನಾದ 'ಐಕ್ಯರಂಗ'ವು ಈಗ ಆಕರ್ಷಕವಾಗಿ ಮೂಡಿ ಬರುತ್ತಿದೆ. ಬರೇ ವರದಿಗಳನ್ನು ಕೊಡುವುದಕ್ಕಿಂತಲೂ ಸಮಸ್ಯೆಯ ಮೂಲ, ಹೋರಾಟದ ಬಗೆಗೆ ಪ್ರಾಶಸ್ತ್ಯ ಕೊಡುವುದು ಉತ್ತಮ ಅಂಶ ಓದುಗರಲ್ಲಿ ವೈಚಾರಿಕತೆ ಬೆಳೆಸುವ ಸಲುವಾಗಿ ವರ್ತಮಾನದ ಸಮಸ್ಯೆಗಳ ಸವಾಲುಗಳ ಬಗ್ಗೆ ಉತ್ತಮ ಲೇಖನಗಳು ಸದಾ ಪ್ರಕಟವಾಗಲಿ. ಇಂದಿಗೆ ಮಾರ್ಗದರ್ಶಕವಾಗಬೇಕಾದ ಹಿಂದಿನ ಚರಿತ್ರೆ, ಕ್ರಾಂತಿಗಳ ಬಗ್ಗೆಯೂ ಇಂದಿನ ಓದುಗರಿಗೆ ತಿಳುವಳಿಕೆ ಮೂಡಿಸಬೇಕು. ಈ ರೀತಿ ಸಾಮಾಜಿಕ ನ್ಯಾಯಕ್ಕಾಗಿನ ಹೋರಾಟದ ಮುಂಚೂಣಿಯನ್ನು ಪತ್ರಿಕೆ ಹೊರಬೇಕಾಗಿದೆ.

ಮೇ. 10-16ರ ಸಂಚಿಕೆಯಲ್ಲಿನ ಟಿಪ್ಪುವಿನ ತ್ಯಾಗ ಬಲಿದಾನಗಳ ಬಗ್ಗೆ ವಸ್ತುನಿಷ್ಠ ಬೆಳಕು ಚೆಲ್ಲಿದ್ದೀರಿ. ಪತ್ರಿಕೆ ಇನ್ನೂ ಯಶಸ್ವಿಯಾಗಲೆಂದು ಹಾರೈಕೆ.

ಬಿ.ಶ್ರೀಧರ ಭಟ್,
ಪೈವಳಿಕೆ, ಕಾಸರಗೋಡು

ಐಕ್ಯರಂಗ ಪುರವಣಿ

'ಕರ್ನಾಟಕದಲ್ಲಿ ಪ್ರಾದೇಶಿಕ ಅಸಮಾನತೆ ಹಾಗೂ ಪ್ರತ್ಯೇಕತಾವಾದ'

ಜೂನ್ 14 ರಂದು 'ಐಕ್ಯ ಕೇರಳ' ದ ಧೀಮಂತ ಹೋರಾಟಗಾರರಾದ ಇ.ಎಂ.ಎಸ್.ನಂಬೂದರಿಪಾಡ್‌ರವರ ಜನ್ಮದಿನದ ಸಂದರ್ಭದಲ್ಲಿ ಐಕ್ಯರಂಗದ ಮೊದಲ ಮಾಸಿಕ ಪುರವಣಿ ಬರಲಿದೆ. ಪ್ರತಿ ತಿಂಗಳೂ ಬರಲಿರುವ ಈ ಮಾಸಿಕ ಪುರವಣಿ ಜನರ ಮನಸ್ಸನ್ನು ಕಾಡುತ್ತಿರುವ ಪ್ರಶ್ನೆಗಳ ಮೇಲೆ ಆಳವಾದ ವಿಶ್ಲೇಷಣೆ, ವಿಶೇಷ ಬರಹ ಮಾಹಿತಿಗಳ ಗಣಿ. ಸಂಗ್ರಹಯೋಗ್ಯವಾಗಿ ಪುಸ್ತಿಕೆಯ ರೂಪದಲ್ಲಿ ನಿಮ್ಮ ಕೈ ಸೇರುತ್ತದೆ. ಪುರವಣಿ ಬರುವ ಐಕ್ಯರಂಗ ಸಂಚಿಕೆಯ ಬೆಲೆ 5 ರೂ.

ಕರ್ನಾಟಕವನ್ನು ಕಾಡುತ್ತಿರುವ ಪ್ರಾದೇಶಿಕ ವಾದ ಅದರ ಹಿನ್ನಲೆಯಲ್ಲಿರುವ ಪ್ರಾದೇಶಿಕ ಅಸಮಾನತೆ, ಪ್ರಾದೇಶಿಕ ಅಸಮಾನತೆಯ ಕಾರಣ, ಹಿನ್ನಲೆಗಳು, ಹೈದರಾಬಾದ್ ಕರ್ನಾಟಕ, ಬಾಂಬೆ ಕರ್ನಾಟಕ, ಕೊಡಗು ಇವುಗಳ ಪ್ರತ್ಯೇಕತಾ ಚಳುವಳಿಗಳ ಬಗ್ಗೆ ಅಪರೂಪದ ಸಂಶೋಧನೆ, ಆಸಕ್ತಿಕರ ಮಾಹಿತಿಗಾಗಿ ಕಾದು ನೋಡಿ.

ವಿಶೇಷ ಸಂಚಿಕೆಯ ಹೆಚ್ಚು ಪ್ರತಿ ಬೇಕಾದವರು ತಕ್ಷಣವೇ ಪ್ರತಿಗಳನ್ನು ಕಾದಿರಿಸಬೇಕು. ಪುರವಣಿಯ ಪ್ರತ್ಯೇಕ ಬೆಲೆ 2 ರೂ.

- ಸಂಪಾದಕರು.

ರಕ್ಷಣಾಮಂತ್ರಿಯಿಂದಲೇ ದೇಶವನ್ನು ರಕ್ಷಿಸಬೇಕಾಗಿದೆಯೋ?

ಇದೆಂತಹಾ 'ಸಮರ್ಥ' ಸರಕಾರ! ಭಾರತೀಯ ಭೂಸೈನಿಕರು, ವೈಮಾನಿಕರು ಕಾಶ್ಮೀರದ ಕಾರ್ಗಿಲ್, ಬೆತಾಲಿಕ್, ದ್ರಾಸ್‌ಗಳಲ್ಲಿ ಅತಿಕ್ರಮಣಕೋರರನ್ನು ಹಿಂದಕ್ಕಟ್ಟುವ ತೀವ್ರ ಕಾರ್ಯಾಚರಣೆಗಳಲ್ಲಿ ಮಗ್ನರಾಗಿರುವಾಗ,ತಮ್ಮ ಪ್ರಾಣಾರ್ಪಣೆಯನ್ನೇ ಮಾಡುತ್ತಿರುವಾಗ ಕಾಶ್ಮೀರ ಕಣಿವೆಯ ಸಾವಿರಾರು ಜನ ಕಂಗಾಲಾಗಿರುವಾಗ ಇಡೀ ದೇಶ ಎಲ್ಲಾ ಭಿನ್ನಾಬಿಪ್ರಾಯಗಳನ್ನು ಬದಿಗೊತ್ತಿ ಅವರ, ಸರಕಾರದ ಬೆಂಬಲಕ್ಕೆ ನಿಂತಿರುವಾಗ ದೇಶದ ಪ್ರಧಾನಮಂತ್ರಿಗಳು, ರಕ್ಷಣಾ ಮಂತ್ರಿಗಳು ಮತ್ತು ಗೃಹಮಂತ್ರಿಗಳು ತಲೆಗೊಂದರಂತೆ ಮಾತನಾಡುತ್ತಾ ಗೊಂದಲ ಹರಡಿಸುತ್ತಿದ್ದಾರೆ.

ಕೇಂದ್ರ ಗೃಹ ಮಂತ್ರಾಲಯದ ಅಧೀನದಲ್ಲಿರುವ ಗಡಿ ಭದ್ರತಾ ಪಡೆ (ಬಿ.ಎಸ್.ಎಫ್)ಗಳ ಒಂದು ಗುಪ್ತ ವರದಿಯನ್ನು ಉಲ್ಲೇಖಿಸುತ್ತಾ ಭಾರತದ ಪ್ರಮುಖ ಪತ್ರಿಕೆಯೊಂದು ಪಾಕಿಸ್ತಾನೀ ಬೆಂಬಲಿತ ಅತಿಕ್ರಮಣಕೋರರು ಹಾಗೂ ಪಾಕ್ ಸೈನಿಕರು ಕಾರ್ಗಿಲ್‌ನ ಎತ್ತರ ಪ್ರದೇಶಗಳನ್ನು ಜನವರಿ 1999 ರವೇಳೆಗಾಗಲೇ ಆಕ್ರಮಿಸಿಕೊಂಡಿದ್ದರು, ಆದರೆ ನಾಲ್ಕು ವಾರಗಳ ಹಿಂದಿನವರೆಗೂ ಭಾರತ ಸರಕಾರದ ಗಮನಕ್ಕೆ ಇದು ಬಂದಿರಲಿಲ್ಲ ಎಂದು ಪ್ರಕಟಿಸಿದೆ. ಹೀಗೆ ಕಾಶ್ಮೀರದ ಗಡಿಯಲ್ಲಿ ಉಂಟಾಗಿರುವ ಗಂಭೀರ ಪರಿಸ್ಥಿತಿಗೆ ಕಾರಣವಾದ ತನ್ನ ಗಂಭೀರ ವಿಫಲತೆಯಿಂದಲೂ ಈ ಸರಕಾರ ತೃಪ್ತವಾದಂತಿಲ್ಲ! ಸರಕಾರಿ ಮುಖಂಡರು ವಿರುದ್ಧವಾದ ಹೇಳಿಕೆಗಳನ್ನು ನೀಡುತ್ತಾ ಪರಿಸ್ಥಿತಿಯನ್ನು ಇನ್ನಷ್ಟು ಗಂಭೀರಗೊಳಿಸುತ್ತಿದ್ದಾರೆ. ರಕ್ಷಣಾಮಂತ್ರಿಗಳು ಎಂದಿನಂತೆ ತನ್ನ ದೊಡ್ಡ ಬಾಯಿ ಬಿಡುತ್ತಾ ವಿವಾದಗಳನ್ನು ಸೃಷ್ಟಿಸುತ್ತಿದ್ದಾರೆ. 'ಸಮರ್ಥ' ಪ್ರಧಾನಮಂತ್ರಿಗಳು ಅದನ್ನು ತನ್ನದೇ ಅಸಮರ್ಥ ರೀತಿಯಲ್ಲಿ ಪುನರುಚ್ಛರಿಸುತ್ತಿದ್ದಾರೆ, ಗೃಹಮಂತ್ರಿಗಳು ಅದಕ್ಕೆ ಪ್ರತಿಕ್ರಿಯೆಯಾಗಿ ಇನ್ನೇನೋ ಹೇಳುತ್ತಾರೆ. ಕೊನೆಗೆ ಪತ್ರಿಕೆಗಳು ತಮ್ಮ ಹೇಳಿಕೆಗಳನ್ನೆಲ್ಲಾ ತಪ್ಪಾಗಿ ಪ್ರಕಟಿಸುತ್ತಿವೆ ಎಂದು ಎಲ್ಲರೂ ಸುಣುಚಿಕೊಳ್ಳುವ ಪ್ರಯತ್ನ ಮಾಡುತ್ತಾರೆ.

ತಾನು ಅಧಿಕಾರ ವಹಿಸಿಕೊಂಡ ಕೂಡಲೇ ಚೀಣಾ-ವಿರೋಧಿ ಅಪಪ್ರಚಾರದಲ್ಲಿ ತೊಡಗಿದ, ನಂತರ ಭಾಗವತ್ ಪ್ರಕರಣದಲ್ಲಿ ಸಿಲುಕಿಕೊಂಡ ರಕ್ಷಣಾ ಮಂತ್ರಿ ಜಾರ್ಜ್ ಫರ್ನಾಂಡೀಸ್ ತನ್ನ ವಿವೇಚನಾಶೂನ್ಯತೆಯನ್ನು ಈ ಗಂಭೀರ ಪರಿಸ್ಥಿತಿಯಲ್ಲೂ ನಿರ್ಭಿಡೆಯಿಂದ ಮುಂದುವರೆಸುತ್ತಿರುವಂತೆ ಕಾಣುತ್ತದೆ. ಮೇ 29 ರಂದು ಅವರೊಂದು ಹೇಳಿಕೆ ನೀಡಿದರು - ಪಾಕಿಸ್ತಾನದ ಪ್ರಧಾನ ಮಂತ್ರಿ ನವಾಜ್ ಶರೀಫ್ ಹಾಗೂ ಅವರ ಗುಪ್ತಚರ ಸಂಸ್ಥೆ ಐ.ಎಸ್.ಐ. ಗೆ ಕಾರ್ಗಿಲ್ ವಲಯದಲ್ಲಿ ಪಾಕಿಸ್ತಾನೀ ಸೇನೆಯ ಕಾರ್ಯಾಚರಣೆಗಳ ಬಗ್ಗೆ ತಿಳಿದಿರಲಿಲ್ಲ ಎಂದು ಸೂಚಿಸುವ ಮಾಹಿತಿಗಳು ಸರ್ಕಾರದ ಬಳಿಯಿವೆ ಎಂದರು.

ಈ ಹೇಳಿಕೆ ಇಡೀ ದೇಶದಲ್ಲಿ ವಿವಾದ ಎಬ್ಬಿಸಿತು. ದೇಶದ ರಕ್ಷಣಾ ಮಂತ್ರಿಯೇ ಗಡಿಯಲ್ಲಿ ನಿರಂತರ ಕಿರುಕುಳ ಕೊಡುವ ನೆರೆದೇಶದ ಸರಕಾರವನ್ನು, ಪ್ರಧಾನಿಯನ್ನು ರಕ್ಷಿಸಲು ಧಾವಿಸುವ ಅವಶ್ಯಕತೆಯಾದರೂ ಏನಿತ್ತು ಎಂದು ಇಡಿ ದೇಶ ಪ್ರಶ್ನಿಸಿತು. ಇಷ್ಟೊಂದು ಸಂಖ್ಯೆಯಲ್ಲಿ ಅತಿಕ್ರಮಣಕಾರರು ನುಗ್ಗಿದ್ದನ್ನು, ಮೂರು ವಾರಗಳಾದರೂ ಅವರನ್ನು ಹೊರಗಟ್ಟಲಾಗದ. ವಿಫಲತೆಯನ್ನು ವಿವರಿಸಲಾಗದ ರಕ್ಷಣಾಮಂತ್ರಿಗಳು ಈ ಹೇಳಿಕೆ ನೀಡಿದ್ದಾರೆ, ಒಬ್ಬ ರಕ್ಷಣಾ ಮಂತ್ರಿ ಇಂತಹ ಹೇಳಿಕೆ ನೀಡುತ್ತಾರೆ ಎಂದು ನಂಬಲೂ ಸಾಧ್ಯವಿಲ್ಲ ಎಂದು ಖಂಡಿಸಿದ ಸಿಪಿಐ(ಎಂ)ಪೊಲಿಟ್‌ಬ್ಯೂರೋ ಉಸ್ತುವಾರಿ ಕೆಲಸ ನಡೆಸಬೇಕಾದ ವಾಜಪೇಯಿ ಸರಕಾರ ಫರ್ನಾಂಡೀಸರ ಈ ನಿಲುವನ್ನು ಸಾರ್ವಜನಿಕವಾಗಿ ನಿರಾಕರಿಸಬೇಕು, ಇಲ್ಲವೇ ಅಂತರ್‌ರಾಷ್ಟ್ರೀಯವಾಗಿ ಭಾರತದ ಪ್ರತಿಷ್ಠೆಗೆ ಮಸಿ ಬಳಿಯುವ ಈ ಟಿಪ್ಪಣಿಗೆ ಸರಿಯಾದ ವಿವರಣೆ ನೀಡಬೇಕು ಎಂದು ಆಗ್ರಹಪಡಿಸಿತು.

ಆದರೆ ಈ ಅಸಮರ್ಥ ಸರಕಾರದ ಬಳಿ ಉತ್ತರವಿರಲಿಲ್ಲ. ಫಜೀತಿಗೊಳಗಾದ ಪ್ರಧಾನಿಗಳು 'ನವಾಜ್ ಶರೀಫ್‌ರಿಗೆ ಗೊತ್ತಿತ್ತೊ ಇಲ್ಲವೋ, ನನಗಂತೂ ಗೊತ್ತಿರಲಿಲ್ಲ" ಎಂದು ಹಾರಿಕೆಯ ಉತ್ತರ ನೀಡಿದರು. ಆದರೆ ಅವರ ಪ್ರಮುಖ ಸಲಹೆಗಾರಿಗೆ ಗೊತ್ತಿದ್ದ ವಿಷಯವೇ ಬಹುಶಃ ಬೇರೆ. ಪ್ರಧಾನಿಗಳು ಲಾಹೋರ್‌ಗೆ ಬಸ್ ಪ್ರಯಾಣ ಮಾಡುತ್ತಿದ್ದಾಗಲೇ ಕಾರ್ಗಿಲ್‌ಗೆ ನುಗ್ಗುವ ತಯಾರಿ ನಡೆದಿತ್ತು ಎಂದಿದ್ದಾರೆ ಅವರು. ಗೃಹಮಂತ್ರಿಗಳು ಇಂತಹುದೇ ಪ್ರತಿಕ್ರಿಯೆ ನೀಡಿದರು. ಈ 'ಮಾಹಿತಿ'ಯನ್ನು ಕೆಲವು ಆರಿಸಿದ ಪತ್ರಿಕೆಗಳಿಗೆ ಉದ್ದೇಶಪೂರ್ವಕವಾಗಿ 'ಸೋರಿಹೋಗುವಂತೆ' ಮಾಡಬೇಕು ಎಂದು ಕೇಂದ್ರ ಸಂಪುಟ ನಿರ್ಧರಿಸಿತ್ತು ಎಂದು ಇನ್ನೊಂದು ಪತ್ರಿಕೆ ವರದಿ ಮಾಡಿದೆ.

ಇನ್ನೊಂದು ವಿವಾದ

ಅದೇನೇ ಇರಲಿ, ಈ ಸರಕಾರದ ಅಸಮರ್ಥತೆ ಇಲ್ಲಿಗೇ ನಿಲ್ಲಲಿಲ್ಲ. ಈ ವಿವಾದದ ಬಿಸಿ ಆರುವಷ್ಟರಲ್ಲೇ ಇನ್ನೊಂದು ವಿವಾದವನ್ನು ಈ ಉಸ್ತುವಾರಿ ಸರಕಾರ ಸೃಷ್ಟಿಸಿತು. ಇದೇ ರಕ್ಷಣಾಮಂತ್ರಿಗಳು ಸೇನಾಪಡೆಗಳ ಇಬ್ಬರು ಹಿರಿಯಅಧಿಕಾರಿಗಳನ್ನು - ಮಿಲಿಟರಿ ಕಾರ್ಯಾಚರಣೆಗಳ ಮಹಾ ನಿರ್ದೇಶಕ ಲೆಫ್ಟಿನೆಂಟ್ ಜನರಲ್ ಎನ್.ಸಿ.ವಿಜ್ ಹಾಗೂ ವೈಮಾನಿಕ ಪಡೆಯ ಸಹಾಯಕ ಅಡಿಶನಲ್ ಮುಖ್ಯಸ್ಥ ಏರ್ ಮಾರ್ಷಲ್ ಎಸ್.ಕೆ.ಮಲಿಕರನ್ನು ಬಿಜೆಪಿಯ ರಾಷ್ಟ್ರೀಯ ಕಾರ್ಯಕಾರಿಣಿ ಸಮಿತಿಯ ತುರ್ತುಸಭೆಗೆ ಕರೆದೊಯ್ದು ಅವರಿಂದ ವಿವರಣೆ ಕೊಡಿಸಿದರು! ಒಂದು ರಾಜಕೀಯ ಪಕ್ಷದ ಸಭೆಯಲ್ಲಿ ದೇಶದ ಹಿರಿಯ ಸೇನಾಧಿಕಾರಿಗಳಿಂದ ವಿವರಣೆ ಕೊಡಿಸುವ ಈ ಕ್ರಮ ಪ್ರಜಾಪ್ರಭುತ್ವದಲ್ಲಿ ಒಂದು ಅಭೂತಪೂರ್ವ ಕ್ರಮ. ಕೇವಲ ಬಿಜೆಪಿಯಂತಹ ಪ್ರಜಾಪ್ರಭುತ್ವ ವಿರೋಧಿ ಪಕ್ಷದ ನೇತೃತ್ವದಲ್ಲಿರುವ ಜಾರ್ಜ್ ಫರ್ನಾಂಡೀಸ್‌ರಂತವರು ಮಂತ್ರಿಗಳಾಗಿರುವ ಅಸಮರ್ಥ ಸರಕಾರ ಮಾತ್ರವೇ ಇದನ್ನು ಮಾಡಬಲ್ಲದು.

ದೇಶದ ಜನತೆ ಸೇನಾಪಡೆಗಳ ದೇಶಪ್ರೇಮದ ಬಗ್ಗೆ, ಸಾಮರ್ಥ್ಯದ ಬಗ್ಗೆ ಅಪಾರ ಗೌರವ ಹೊಂದಿದೆ. ಇಷ್ಟು ವರ್ಷಗಳ ಕಾಲ ಸೇನಾಪಡೆಗಳ ರಾಜಕೀಯ ತಾಟಸ್ಥ್ಯ ಹಾಗೂ ನಿಷ್ಪಕ್ಷಪಾತದ ನಿಲುವಿನಿಂದಾಗಿಯೇ ಇದು ಸಾಧ್ಯವಾಗಿದೆ. ಭಾರತದಂತಹ ವಿಶಾಲವಾದ, ವೈವಿಧ್ಯಮಯ ದೇಶದಲ್ಲಿ ಸೇನಾಧಿಕಾರಿಗಳನ್ನು ಒಂದು ರಾಜಕೀಯ ಪಕ್ಷದ ಸಭೆಯಲ್ಲಿ ಹಾಜರಾಗುವಂತೆ ಮಾಡಿ ಸೇನಾಪಡೆಗಳ ಸ್ವತಂತ್ರ ಅಧಿಕಾರವನ್ನು ಬುಡಮೇಲು ಮಾಡುವ ಈ ಪ್ರಯತ್ನ ಬಹಳ ಅಪಾಯಕಾರಿ, ಆದರೆ ಬಿಜೆಪಿ ನೇತೃತ್ವದ ಸರಕಾರ ಅದೇ ಅಪಾಯಕಾರಿ ದಾರಿಯಲ್ಲಿ ಹೆಜ್ಜೆಯಿಟ್ಟಿದೆ, ಈ ಮೂಲಕ ಸೇನಾ ಪಡೆಗಳ ವಿಶ್ವಾಸಾರ್ಹತೆಯನ್ನು ಧ್ವಂಸ ಮಾಡುವ ಇನ್ನೊಂದು ಕುಕೃತ್ಯಕ್ಕೆ ಕೈಹಾಕಿದೆ.

..... ಮತ್ತೊಂದು ವಿವಾದ

ಜೂನ್ 1 ರಂದು ಈ ರಕ್ಷಣಾ ಮಂತ್ರಿಗಳ ಬಾಯಿಯಿಂದ ಇನ್ನೊಂದು ಹೇಳಿಕೆ - ಪಾಕಿಸ್ತಾನೀ ಬೆಂಬಲಿತ ಉಗ್ರಗಾಮಿಗಳಿಗೆ



"ಸುರಕ್ಷಿತ ವಾಪಸಾತಿ"ಗೆ ದಾರಿ ಒದಗಿಸುವುದನ್ನು ಪರಿಶೀಲಿಸಬಹುದು ಎಂದು. ಮುಂಬೈಯಲ್ಲಿದ್ದ ಪ್ರಧಾನಮಂತ್ರಿಗಳನ್ನು ಈ ಬಗ್ಗೆ ಕೇಳಿದಾಗ ಯಥಾ ಪ್ರಕಾರ ಫರ್ನಾಂಡೀಸ್ ಹೇಳಿದ್ದನ್ನು ತಮ್ಮದೇ ಅಸ್ಪಷ್ಟ ರೀತಿಯಲ್ಲಿ ಪುನರುಚ್ಛರಿಸಿದರು. ಆದರೆ ಪಣಜಿಯಲ್ಲಿದ್ದ ಕೇಂದ್ರ ಗೃಹ ಮಂತ್ರಿಗಳು "ನನಗೆ ಈ ಬಗ್ಗೆ ಏನೂ ತಿಳಿಯದು... ಫರ್ನಾಂಡೀಸರನ್ನು ಭೇಟಿಯಾಗುವವರೆಗೆ ನಾನೇನೂ ಹೇಳಲಾರೆ" ಎಂದರು. ಅತ್ತ ದಿಲ್ಲಿಯಲ್ಲಿ "ನಮ್ಮ ಗಡಿಗಳನ್ನು ಉಲ್ಲಂಘಿಸಿದ ಶತ್ರುಗಳು ನಮ್ಮ ಸೈನಿಕರ ಪ್ರತಿತೊಟ್ಟು ರಕ್ತಕ್ಕೂ ಬೆಲೆ ಕೊಡಬೇಕಾಗುತ್ತದೆ" ಎಂದು ಬಡಾಯಿಕೊಚ್ಚಿಕೊಂಡ ಬಿಜೆಪಿ ವಕ್ತಾರ ನರೇಂದ್ರ ಮೋದಿಯರನ್ನು ಪ್ರಧಾನಮಂತ್ರಿಗಳ ಹೇಳಿಕೆಯ ಬಗ್ಗೆ ಕೇಳಿದಾಗ "ಯಾವುದೇ ಸ್ಪಷ್ಟೀಕರಣವನ್ನು ಪ್ರಧಾನಮಂತ್ರಿಗಳ ಕಛೇರಿಯಿಂದ ಕೇಳಬೇಕು" ಎಂದು ನುಣುಚಿಕೊಂಡರು.

ರಕ್ಷಣಾ ತಜ್ಞರು ಹಾಗೂ ಮಾಜಿ ಸೇನಾಧಿಕಾರಿಗಳು ಈ 'ಸುರಕ್ಷಿತ ವಾಪಸಾತಿ'ಯ ಹೇಳಿಕೆಯನ್ನು ಖಂಡಿಸಿದರು, ಇದು ಕಾಶ್ಮೀರ ವಿವಾದವನ್ನು ಅಂತರ್‌ರಾಷ್ಟ್ರೀಯಗೊಳಿಸುವ ಪಾಕಿಸ್ತಾನದ ಪ್ರಯತ್ನಕ್ಕೆ ತಲೆಬಾಗುವ ದಿಕ್ಕಿನಲ್ಲಿದೆ ಎಂದರು.

ಮತ್ತೆ ಫಜೀತಿಗಿಟ್ಟುಕೊಂಡ ಸರಕಾರದ ವಿದೇಶಾಂಗ ಇಲಾಖೆಯ ಅಧಿಕಾರಿಯಿಂದ ಹೇಳಿಕೆ ಬಂತು - 'ಆಕ್ರಮಣ ನಡೆಸಿದ ಸಶಸ್ತ್ರ ಅತಿಕ್ರಮಣಕೋರರಿಗೆ ಸುರಕ್ಷಿತ ವಾಪಸಾತಿಯ ಪ್ರಶ್ನೆಯೇ ಇಲ್ಲ..... ಪ್ರಧಾನಮಂತ್ರಿಗಳನ್ನು ತಪ್ಪಾಗಿ ಉದ್ಧರಿಸಲಾಗಿದೆ. ರಕ್ಷಣಾಮಂತ್ರಿಗಳ ಹೇಳಿಕೆಯನ್ನು ಸಂದರ್ಭಬಾಹಿರವಾಗಿ ಉದ್ಧರಿಸಲಾಗಿದೆ ಎಂದು ತಿಳಿಸಲು ಸರಕಾರ ನನಗೆ ಅಧಿಕಾರ ನೀಡಿದೆ"!

ಎಂತಹಾ ಸರಕಾರ! ದೇಶದಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಹಾಗೂ ನಂತರ ಜನಾಂದೋಲನಗಳ ಮೂಲಕ ಸ್ಥಾಪನೆಗೊಂಡ ಪ್ರಜಾಪ್ರಭುತ್ವ ಮೌಲ್ಯಗಳನ್ನೆಲ್ಲಾ ಬುಡಮೇಲು ಮಾಡಲು 'ಸಮರ್ಥ' ವಾದ ಸರಕಾರ!! ಆದರೆ ದೇಶವನ್ನು, ದೇಶದ ಸಾರ್ವಭೌಮತೆಯನ್ನು, ದೇಶದ ಭದ್ರತೆಯನ್ನು ಕಾಪಾಡುವಲ್ಲಿ ಸಂಪೂರ್ಣ ಅಸಮರ್ಥವಾದ ಸರಕಾರ!!!

ಆದ್ದರಿಂದಲೇ ಪರಿಸ್ಥಿತಿಯನ್ನು ಎದುರಿಸಲು ಸರಕಾರಕ್ಕೆ ಸಂಪೂರ್ಣ ಬೆಂಬಲ ನೀಡುತ್ತಲೇ ಸಿಪಿಐ(ಎಂ) ಮತ್ತು ಇತರ ಪ್ರತಿಪಕ್ಷಗಳು ಸರಕಾರದ ಅಜಾಗರೂಕತೆ, ವಿಳಂಬವನ್ನು ಖಂಡಿಸಿದೆ. ಇದು ಬಿಜೆಪಿ ಮುಖಂಡರಿಗೆ ಅಪಥ್ಯವಾಗಿದೆ. ಅವರ ವಿವಿಧ ವಕ್ತಾರರು ಈ ವಿಷಯದಲ್ಲಿ ರಾಜಕೀಯ ಲಾಭ ಪಡೆಯುವ ಪ್ರಯತ್ನವನ್ನೇ ಮಾಡುತ್ತಿದ್ದಾರೆ. ಆದರೆ ಹಾಗೆ ಮಾಡುತ್ತಾ ತಮ್ಮ ವಿಫಲತೆಯನ್ನು ಮುಚ್ಚಿಕೊಳ್ಳಲು ಇತರರ ಮೇಲೆ ಹರಿಹಾಯುತ್ತಿದ್ದಾರೆ.

ಈಗ ದೇಶದ ಮುಂದಿರುವ ಪ್ರಥಮ ಕರ್ತವ್ಯವೆಂದರೆ ಅತಿಕ್ರಮಣಕೋರರನ್ನು ಸಂಪೂರ್ಣವಾಗಿ ಹಿಮ್ಮೆಟ್ಟಿಸುವುದು. ಇದಕ್ಕಾಗಿ ಸರ್ವಪ್ರಯತ್ನ ನಡೆಸುತ್ತಲೇ ಎರಡು ದೇಶಗಳ ನಡುವಿನ ಈ ಘರ್ಷಣೆ ವಿಸ್ತರಿಸದಂತೆ ಮುನ್ನೆಚ್ಚರಿಕೆ ವಹಿಸಬೇಕು. ಸಾಮ್ರಾಜ್ಯಶಾಹಿಗಳ ಆಟವನ್ನು ಎಂದೂ ಮರೆಯಬಾರದು. ಎರಡನೆಯದಾಗಿ, ಕಾಶ್ಮೀರ ಪ್ರಶ್ನೆಯನ್ನು ಮತ್ತೊಮ್ಮೆ ಪುನರುಜ್ಜೀವನಗೊಳಿಸಲು ಬಿಡಬಾರದು. ಏಕೆಂದರೆ ಕಾಶ್ಮೀರದ ಜನತೆ ಈಗಾಗಲೇ ಹಲವು ಸಂದರ್ಭಗಳಲ್ಲಿ ತಮ್ಮ ತೀರ್ಪು ನೀಡಿದ್ದಾರೆ. ಮೂರನೆಯದಾಗಿ, ಶಾಂತಿ ಸ್ಥಾಪನೆಗೊಳ್ಳುವಂತೆ ಎಲ್ಲಾ ಪ್ರಯತ್ನ ನಡೆಸಬೇಕು. ಈ ಪ್ರಶ್ನೆಯನ್ನು ಅಂತರ್‌ರಾಷ್ಟ್ರೀಯಗೊಳಿಸುವ ಯಾವುದೇ ಪ್ರಯತ್ನ ಈ ಪ್ರದೇಶದಲ್ಲಿ ಶಾಂತಿ ಭಂಗ ಉಂಟು ಮಾಡುತ್ತದೆ ಎಂದು ಅಂತರ್‌ರಾಷ್ಟ್ರೀಯ ಸಮುದಾಯಕ್ಕೆ ನಾವು ಮನವರಿಕೆ ಮಾಡಿಕೊಡಬೇಕಾಗಿದೆ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಶನ್ ಸಿಂಗ್ ಸುರ್ಜಿತ್ ಹೇಳಿದ್ದಾರೆ.

- ಕೆ.ವಿ



ದ್ರಾಸ್ ವಲಯದಲ್ಲಿನ ಕಾರ್ಯಾಚರಣೆಯಿಂದಾಗಿ ಮನೆಗಳನ್ನು ಬಿಟ್ಟು ಒಂದೆಡೆ ಸೇರಿಸಲ್ಪಟ್ಟ ದಾನ್‌ಚುಕ್ ಗ್ರಾಮ ವಾಸಿಗಳು ನಡುಗುವ ಚಳಿಯಲ್ಲಿ ಕಾಯುತ್ತಿದ್ದಾರೆ.

ಕಲಘಟಗಿಯಲ್ಲಿ ಕೃಷಿ ಕೂಲಿಕಾರರ ಮೇಲೆ ಅರಣ್ಯ ಅಧಿಕಾರಿಗಳ ದೌರ್ಜನ್ಯಗಳು ನಿಲ್ಲದಿದ್ದರೆ ಉಗ್ರ ಹೋರಾಟ

ಶಾಸಕ ಶ್ರೀರಾಮ ರೆಡ್ಡಿ

ಹುಬ್ಬಳ್ಳಿ: 1-6-99: ಧಾರವಾಡ ಜಿಲ್ಲೆಯ ಕಲಘಟಗಿ ತಾಲೂಕಿನ ಕೆಲವು ಗ್ರಾಮಗಳಲ್ಲಿ ಇತ್ತೀಚೆಗೆ ಅರಣ್ಯ ಅಧಿಕಾರಿಗಳು ಬಡ ಕೃಷಿ ಕೂಲಿಕಾರರ ಮೇಲೆ ನಡೆಸುತ್ತಿರುವ ಅಮಾನುಷ ದೌರ್ಜನ್ಯಗಳನ್ನು ಕೂಡಲೇ ನಿಲ್ಲಿಸದಿದ್ದರೆ, ತಪ್ಪಿತಸ್ಥ ಅರಣ್ಯ ಅಧಿಕಾರಿಗಳನ್ನು ಅಮಾನತ್ತಿನಲ್ಲಿಟ್ಟು ವಿಚಾರಣೆಗೆ ಒಳಪಡಿಸಿ ಶಿಕ್ಷಿಸದಿದ್ದರೆ, ಕೃಷಿ ಕೂಲಿಕಾರರು ದೀರ್ಘಕಾಲದಿಂದ ವ್ಯವಸಾಯ ಮಾಡಿಕೊಂಡು ಬಂದಿರುವ ಭೂಮಿಯಿಂದ ಹೊರ ದಬ್ಬಲ್ಪಡದೇ ಅವರಿಗೆ ಭೂಮಿ ಪಟ್ಟಾ ಸಕಾಲದಲ್ಲಿ ಕೊಡಿಸದಿದ್ದರೆ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಆಶ್ರಯದಲ್ಲಿ ಉಗ್ರ ಹೋರಾಟ ನಡೆಯಲಿದೆ ಎಂದು ಸಿಪಿಐ(ಎಂ) ಶಾಸಕ ಹಾಗೂ ರಾಜ್ಯ ರೈತ ಮುಖಂಡರಾದ ಜಿ.ವಿ.ಶ್ರೀರಾಮ ರೆಡ್ಡಿ ಇಂದು ಪತ್ರಿಕಾಗೋಷ್ಠಿಯಲ್ಲಿ ಅರಣ್ಯ ಇಲಾಖೆಗೆ ಮತ್ತು ರಾಜ್ಯ ಸರಕಾರಕ್ಕೆ ಎಚ್ಚರಿಕೆ ನೀಡಿದರು. ಈ ಹೋರಾಟಕ್ಕೆ ಕರ್ನಾಟಕ ಪ್ರಾಂತ ರೈತ ಸಂಘ ಮತ್ತು ಸಿಪಿಐ(ಎಂ) ರಾಜ್ಯ ಸಮಿತಿ ಸಂಪೂರ್ಣ ಬೆಂಬಲ ನೀಡುತವೆ ಎಂದು ಶ್ರೀರಾಮ ರೆಡ್ಡಿ ತಿಳಿಸಿದರು.

ಪತ್ರಿಕಾ ಗೋಷ್ಠಿಯಲ್ಲಿ ಹಾಜರಿದ್ದ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಅಧ್ಯಕ್ಷರಾದ ಜಿ.ಎನ್. ನಾಗರಾಜ ಕಲಘಟಗಿ ತಾಲೂಕಿನ ಗ್ರಾಮಗಳಲ್ಲಿ ಕೃಷಿ ಕೂಲಿಕಾರರ ಮೇಲೆ ಅರಣ್ಯ ಅಧಿಕಾರಿಗಳು ನಡೆಸಿದ ದೌರ್ಜನ್ಯಗಳನ್ನು ಪತ್ರಕರ್ತರಿಗೆ ವಿವರಿಸಿ ತಿಳಿಸಿದರು. ದೌರ್ಜನ್ಯಕ್ಕೆ ಒಳಗಾದವರೆಲ್ಲಿ ಒಬ್ಬರಾದ ಕೃಷಿ ಕೂಲಿಕಾರರ ಸಂಘದ ತಾಲೂಕ ಮುಖಂಡರಾದ ಬಲವಂತ ಗಂಗಪ್ಪ ಘೇವಡೆ ಅವರನ್ನು ಪತ್ರ ಕರ್ತರಿಗೆ ಪರಿಚಯಿಸಿದರು. ಕೃಷಿ ಕೂಲಿಕಾರರ ಸಂಘದ ಧಾರವಾಡ ಜಿಲ್ಲಾ ಅಧ್ಯಕ್ಷರಾದ ನಿತ್ಯಾನಂದ ಸ್ವಾಮಿ ಪತ್ರಕರ್ತರೊಂದಿಗೆ ಮಾತನಾಡುತ್ತಾ, ಕೃಷಿ ಕೂಲಿಕಾರರು ಬಿತ್ತಿ ಬೆಳೆಸಿದ ಭತ್ತದ ಸಸಿಗಳನ್ನು ಅರಣ್ಯ ಅಧಿಕಾರಿಗಳು ನಾಶಗೊಳಿಸಿರುವುದನ್ನು ಪತ್ಯಕ್ಷ ಪ್ರಮಾಣದಿಂದ ಸಾಬೀತು ಪಡಿಸಿದರು. ಇದೇ ತಿಂಗಳ 14 ರಂದು ಕಲಘಟಗಿ ತಾಲೂಕ ಅರಣ್ಯ ಅಧಿಕಾರಿಗಳ ಕಚೇರಿ ಮುಂದೆ ತಾಲೂಕಿನ ಎಲ್ಲಾ ಕೃಷಿಕೂಲಿಕಾರರು ತಮ್ಮ ಮೇಲೆ ನಡೆಸಿದ ದೌರ್ಜನ್ಯವನ್ನು ಪ್ರತಿಭಟಿಸಿ ಬೃಹತ್ ಮೆರವಣಿಗೆ ನಡೆಸುವ ಮೂಲಕ ಮುಂದಿನ ಹೋರಾಟ ಪ್ರಾರಂಭಿಸುವುದಾಗಿ ತಿಳಿಸಿದರು.

ಶಾಸಕ ಶ್ರೀರಾಮ ರೆಡ್ಡಿ, ಕೃಷಿ ಕೂಲಿಕಾರರ ಧುರೀಣರಾದ ಜಿ.ಎನ್. ನಾಗರಾಜ, ನಿತ್ಯಾನಂದ ಸ್ವಾಮಿ, ಹಕ್ಕಲಗೌಡ ಪಾಟೀಲ ಮತ್ತು ಕಾರ್ಮಿಕ ಧುರೀಣರಾದ ಸಿ.ಆರ್. ಭಟ್ ಕೃಷಿಕೂಲಿಕಾರರು ದೌರ್ಜನ್ಯಕ್ಕೆ ಒಳಗಾದ ಸುಳೀಕಟ್ಟೆ ಗ್ರಾಮ ಪಂಚಾಯತ್‌ಗೆ ಸೇರಿದ ಡುಮಗಳ್ಳಿ, ಬೈಚವಾಡ, ಕಂದ್ಲಿ, ಮಸಳಿಕಟ್ಟೆ ಸಂಗಮೇಶ್ವರ ಗ್ರಾಮಗಳಿಗೆ ಭೇಟ್ಟಿ ನೀಡಿದರು. ಬಡ ಕೃಷಿ ಕೂಲಿಕಾರರು ಈ ವರ್ಷ ಬಿತ್ತಿ ಬೆಳೆದ ಭತ್ತದ ಸಸಿಗಳನ್ನು ಮತ್ತು ಹತ್ತಿ ಬೆಳೆಗೆ ತಯಾರಿಸಿದ್ದ ಹೊಲಗಳನ್ನು ಅರಣ್ಯ ಅಧಿಕಾರಿಗಳು ಎರಡು ವಾರಗಳಿಂದ ಬುಲ್‌ಡೋಸರ್‌ಗಳಿಂದ ಹಾಳುಗೆಡವಿದುದನ್ನು ಪ್ರತ್ಯಕ್ಷವಾಗಿ ಕಂಡರು. ನೊಂದ ಕೃಷಿ ಕೂಲಿಕಾರರಿಗೆ ಸಾಂತ್ವನ ಹೇಳಿದರು.

ಶಾಸಕ ಶ್ರೀರಾಮ ರೆಡ್ಡಿ ತಾನು ಈಗಾಗಲೇ ಅರಣ್ಯ ಸಚಿವರನ್ನು ಸಂಪರ್ಕಿಸಿ ಇಲ್ಲಿಯ ಕೃಷಿ ಕೂಲಿಕಾರರ ಮೇಲೆ ನಡೆಸುತ್ತಿರುವ ದೌರ್ಜನ್ಯಗಳನ್ನು ನಿಲ್ಲಿಸಲು ಅರಣ್ಯ ಅಧಿಕಾರಿಗಳಿಗೆ ಆದೇಶಿಸಲು ಒತ್ತಾಯಿಸಿರುವುದಾಗಿ ತಿಳಿಸಿದರು. ತಾನು ಈ ವಿಷಯವನ್ನು ಪುನಃ ಜೂನ್ 23 ರಿಂದ ಪ್ರಾರಂಭವಾಗಲಿರುವ ವಿಧಾನ ಸಭಾ ಅಧಿವೇಶನದಲ್ಲಿ ಎತ್ತುವುದಾಗಿ ಭರವಸೆ ಇತ್ತರು. ಭೂಮಿ ಸಂಬಂಧ ನ್ಯಾಯ ಸಿಗಲು ಕೃಷಿ ಕೂಲಿಕಾರರು ಮತ್ತು ಬಡ ರೈತರು ಸಂಘಟಿತರಾಗಿ ತೀವ್ರ ಹೋರಾಟ ನಡೆಸುವುದೊಂದೇ ಸರಿಯಾದ ದಾರಿ ಎಂದರು. ಕೋರ್ಟು ಕಚೇರಿಗಳಿಗೆ ಅಲೆಯುವುದರಿಂದ ಮಾತ್ರ ಏನೂ ಸಾಧನೆ ಆಗಲಾರದೆಂದರು. 1970ರ ದಶಕದಲ್ಲಿ ಕೋಲಾರ ಜಿಲ್ಲೆಯಲ್ಲಿ 11 ಲಕ್ಷ ಎಕರೆ ಕಾಡು ಕಡಿದು ವ್ಯವಸಾಯ ಭೂಮಿಯನ್ನಾಗಿಸಲು ಮತ್ತು ಅದರ ಪಟ್ಟಾ ಪಡೆಯಲು ಮಹಿಳೆಯರೂ ಸೇರಿದಂತೆ ದೀರ್ಘ ಕಾಲದ ಉಗ್ರ ಹೋರಾಟ ನಡೆಸಿರುವುದನ್ನು, ಜೈಲು ವಾಸ ಹಾಗೂ ಕೋರ್ಟ್ ಮೊಕದ್ದಮೆಗಳನ್ನು ಎದುರಿಸಿರುವುದನ್ನು ಮತ್ತು ಅಂತಿಮವಾಗಿ ಸಾವಿರಾರು ಬಡ ರೈತ ಕುಟುಂಬದವರು ಜಯಗಳಿಸಿರುವುದನ್ನು ಶ್ರೀರಾಮ ರೆಡ್ಡಿ ತನ್ನ ಸ್ವಂತ ಅನುಭವಗಳಿಂದ ತಿಳಿಸಿದರು. ರಾಜ್ಯಕ್ಕಾಗಿ, ಭೂಮಿಗಾಗಿ ಪುರಾಣ ಕಾಲದಲ್ಲಿಯೂ ನಡೆದ ಮಹಾಭಾರತದ ಕುರುಕ್ಷೇತ್ರದಂತಹ ಯುದ್ಧಗಳನ್ನು ಜಿ.ಎನ್. ನಾಗರಾಜ ನೆನಪಿಸಿಕೊಟ್ಟರು. ಕಳೆದ ಕೆಲವು ವರ್ಷಗಳಿಂದ ಕರ್ನಾಟಕದಲ್ಲಿ ಹಾನಗಲ್, ಗಂಗಾವತಿ ಮುಂತಾದ ಪ್ರದೇಶಗಳಲ್ಲಿ ಭೂಮಿಗಾಗಿ ನಡೆದ ಉಗ್ರ ಹೋರಾಟಗಳನ್ನು ಪರಿಚಯಿಸಿದರು.

ಸ್ಥಳೀಯವಾಗಿ ಕೆಲವು ದಿನಗಳಿಂದ ಈ ಗ್ರಾಮಗಳಲ್ಲಿ ಡೇರೆ ಹೂಡಿಕೊಂಡು, ಬೆಳೆಯುತ್ತಿರುವ ಭತ್ತದ ಸಸಿಗಳ ಮೇಲೆ ಬುಲ್ಡೋಸರ್ ಹಾಯಿಸುವ ಹಾಗೂ ಬಡವರ ಗುಡಿಸಲುಗಳನ್ನು ಕೆಡೆಯುವ ದುಃಸ್ಸಾಹಸಕ್ಕಿಳಿದ ಅರಣ್ಯ ಅಧಿಕಾರಿಗಳನ್ನು ಶಾಸಕ ಶ್ರೀರಾಮ ರೆಡ್ಡಿ, ಜಿ.ಎನ್. ನಾಗರಾಜ, ನಿತ್ಯಾನಂದ ಸ್ವಾಮಿ ತರಾಟೆಗೆ ತೆಗೆದುಕೊಂಡರು. ಅದರ ಪರಿಣಾಮವಾಗಿ ಬಡ ಕೂಲಿಕಾರರು ಸಿಟ್ಟಿಗೆದ್ದು ಅರಣ್ಯ ಅಧಿಕಾರಿಗಳ ಮೇಲೆ ಎರಗಿ ಪ್ರತಿಕಾರ ನಡೆಸಿದರೆ, ಅದಕ್ಕೆ ಅರಣ್ಯ ಅಧಿಕಾರಿಗಳೇ ಜವಾಬ್ದಾರರಾಗುವರು ಎಂದು ಎಚ್ಚರಿಕೆ ನೀಡಿದರು. ನರಗುಂದ- ನವಲಗುಂದ ರೈತ ಬಂಡಾಯದ ಸಂದರ್ಭ ದುಷ್ಟ ಅಧಿಕಾರಿಗಳ ಅವಸ್ಥೆ ಏನಾಯಿತು ಎಂದು ನೆನಪಿಸಿಕೊಟ್ಟರು. ಮುಂದೆ, ಅರಣ್ಯ ಅಧಿಕಾರಿಗಳು ನೆಲಸಮ ಮಾಡಿದ್ದ ಹೊಲಗಳಲ್ಲಿ ಗಿಡ ನೆಡುವಾಗ ಮತ್ತು ಉಳಿದ ಹೊಲಗಳ ಮೇಲೆ ಬುಲ್ಡೋಸರ್ ಹರಿಸುವಾಗ ಕೃಷಿ ಕೂಲಿಕಾರರು ಧೈರ್ಯದಿಂದ ಎದುರಿಸಿ ತಡೆಗಟ್ಟಬೇಕೆಂದು ಕರೆಕೊಟ್ಟರು. ಇಷ್ಟು ವರ್ಷಗಳಿಂದ ಅವರ ಭೂಮಿ ಸಮಸ್ಯೆಯನ್ನು ಬಗೆಹರಿಸದ ಸ್ಥಳೀಯ ಶಾಸಕರಿಗೆ ಮುಂದಿನ ಚುನಾವಣೆಯಲ್ಲಿ ತಕ್ಕ ಪಾಠ ಕಲಿಸಬೇಕೆಂದುರು. ಮುಖಂಡರು ಸ್ಥಳ ಪರೀಕ್ಷೆ ನಡೆಸುತ್ತಿದ್ದಾಗ ಬಲವಂತ ಗಂಗಪ್ಪ ಘೇವಡೆ, ರಂಗಪ್ಪ ದಾವಲ್‌ಸಾಬ್, ಬಾಬು ಜನುಗೊಳಿ ಮುಂತಾದವರೂ ಸೇರಿದಂತೆ ನೂರಾರು ಕೃಷಿ ಕೂಲಿಕಾರರು ಜೊತೆಗಿದ್ದು, ತಮ್ಮ ಅಳಲನ್ನು ತೋಡಿಕೊಂಡರು.

ಕಲಘಟಗಿಯಲ್ಲಿ ನಡೆದದ್ದೇನು?

ಇಲ್ಲಿನ ಅರಣ್ಯ ಪ್ರದೇಶಗಳ ಮಧ್ಯದಲ್ಲಿ 3000 ಎಕರೆ ಭೂಮಿಯಲ್ಲಿ ಕೃಷಿ ಕೂಲಿಕಾರರೂ ಮತ್ತು ಬಡರೈತರೂ ಆದ ಮತ್ತು ಹೆಚ್ಚಾಗಿ ಬುಡಕಟ್ಟು ಜನಾಂಗಗಳಿಗೆ ಸೇರಿದ ಗಾಳಿಗರ ಹಾಗೂ ಸಿದ್ಧಿಗಳ 800 ಕುಟುಂಬಗಳು ಕಳೆದ 25-30 ವರ್ಷಗಳಿಂದ ಭತ್ತ ಮತ್ತು ಹತ್ತಿ ಬೆಳೆಸಿಕೊಂಡು ತಮ್ಮ ಬದುಕು ಸಾಗಿಸುತ್ತಿದ್ದರು ಎಂದು ತಿಳಿದುಬಂದಿದೆ. 1930 ರ ಮತ್ತು 1940 ರ ದಶಕಗಳ ಭೀಕರ ಬರಗಾಲದ ಹಾಗೂ ಎರಡನೇ ಜಾಗತಿಕ ಯುದ್ಧದ ಸಂದರ್ಭಗಳಲ್ಲಿ "ಹೆಚ್ಚು ಆಹಾರ ಬೆಳೆಸಿರಿ, ಕಾಡು ಕಡಿದು ಧಾನ್ಯ ಬೆಳೆಸಿರಿ" ಎಂಬ ಘೋಷಣೆಗಳೊಂದಿಗೆ ಆಗಿನ ಬ್ರಿಟೀಷ್ ಸರಕಾರ ರಾಜ್ಯದ ಇತರ ಕಡೆಗಳಲ್ಲಿ ಮಾಡಿದಂತೆ, ಈ ತಾಲೂಕಿನ ಅರಣ್ಯ ಪ್ರದೇಶಗಳಲ್ಲಿಯೂ ಗುಡ್ಡಗಾಡಿನ ಬಡ ಜನರಿಗೆ ಭೂಮಿ ಕೊಟ್ಟರು. ಅರಣ್ಯ ಅಧಿಕಾರಿಗಳಿಗೆ ವರ್ಷ ವರ್ಷವೂ ತಮ್ಮ ಬೆಳೆಗಳಲ್ಲಿ ಪಾಲು ಕೊಡುತ್ತ ಬರುತ್ತಿದ್ದರು! ಆದರೆ, ಇದುವರೆಗೂ ವ್ಯವಸಾಯ ಮಾಡುತ್ತಿದ್ದ ಭೂ ಹಿಡುವಳಿಗಳ ಪಟ್ಟಾ ಬಡ ರೈತರಿಗೆ ಯಾರೂ

ಪುಟ 8ಕ್ಕೆ



ಮಹಿಳಾ ಸಮ್ಮೇಳನದಲ್ಲೊಂದು ಕರುಳಿನ ಕೂಗು

ಕೊಟೇಶ್ವರಿ 9 ವರ್ಷದ ಮಗು. ಒಂದು ದಿನ ಸಂಜೆ ಸಾರಣೆ ಮಾಡಲು ಸಗಣಿ ತರುತ್ತೇನೆಂದು ಮನೆಯಿಂದ ಹೊರಗೆ ಹೊದಳು. ರಾತ್ರಿಯಾಯಿತು, ಬೆಳಗಾಯಿತು-ಕೋಟೇಶ್ವರಿ ಬರಲೇ ಇಲ್ಲ. ಇಡೀ ದಿನ ಮನೆಮಂದಿಯೆಲ್ಲಾ ಹುಡುಕಾಡಿದರೂ ಮಗು ಪತ್ತೆಯಾಗಲಿಲ್ಲ. ಮಾರನೆ ದಿನವೂ ಸಹ ಹುಡುಕಾಟ ಮುಂದುವರೆಯಿತು. ಆ ದಿನ ಅದೇ ಪ್ರದೇಶದ ನಿವಾಸಿಯೊಬ್ಬರ ಮಗು 8 ವರ್ಷದ ರಮ್ಯಾ ಕಾಣೆಯಾಗಿದ್ದಾಳೆಂದೂ ಸುದ್ದಿ ತಿಳಿಯಿತು. ಎರಡೂ ಮನೆಯವರೂ ಸೇರಿ ಮಕ್ಕಳ ಹುಡುಕಾಟದಲ್ಲಿರುವಾಗಿ ಅದೇ ರಸ್ತೆಯ 6 ವರ್ಷದ ರೇವತಿ ಸಹ ಕಾಣೆಯಾಗಿದೆಯೆಂದು ಗೊತ್ತಾಯಿತು. ಎರಡೇ ದಿವಸಗಳಲ್ಲಿ 3 ಮಕ್ಕಳು ಕಾಣೆಯಾಗಿದ್ದಾರೆ. ಆಶ್ಚರ್ಯವೆಂದರೆ ಮೂವರೂ ಸಂಜೆ 6-30ರ ಸಮಯದಲ್ಲಿಯೇ ಕಾಣೆಯಾಗಿರುತ್ತಾರೆ. ಒಂದೇ ಪ್ರದೇಶದ ಮೂರು ಮಕ್ಕಳು ಸಂಶಯಾಸ್ಪದ ರೀತಿಯಲ್ಲಿ ಕಾಣೆಯಾಗಿರುವ ಬಗ್ಗೆ ಪೊಲೀಸರಿಗೆ ದೂರು ನೀಡಿ ಒಂದು ತಿಂಗಳಾದರೂ ಪೊಲೀಸರು ಈ ಬಗ್ಗೆ ಗಮನವೇ ಹರಿಸಲಿಲ್ಲ.

ಜನವಾದಿ ಮಹಿಳಾ ಸಂಘಟನೆಯು ಬೆಂಗಳೂರು ಜಿಲ್ಲೆಯ ವರ್ತೂರು ಕ್ಷೇತ್ರದಲ್ಲಿ ಸಂಘಟಿಸಿದ್ದ ಪ್ರಥಮ ಮಹಿಳಾ ಸಮ್ಮೇಳನದಲ್ಲಿ ಈ ವಿಷಯವನ್ನು ಪ್ರಸ್ತಾಪಿಸಿ, ನಮ್ಮ ಮಕ್ಕಳನ್ನ ಹುಡುಕಿಕೊಡಿ, ನಮ್ಮ ಕಂದಮ್ಮಗಳನ್ನ ವಾಪಸ್ಸು ನಮಗೆ ದಕ್ಕಿಸಿಕೊಡಿ ಎಂದು ವಿಜಿನಾಪುರ ಪ್ರದೇಶದ ಕೋಟೇಶ್ವರಿಯ ತಾಯಿ ಸೆಲ್ವಿ ರೋದಿಸಿದಾಗ ಇಡೀ ಸಮ್ಮೇಳನದ ಪ್ರತಿನಿಧಿಗಳೆಲ್ಲರೂ ಕಣ್ಣೀರಿಟ್ಟರು, ಆ ಪೋಷಕರನ್ನ ಸಾಂತ್ವನಗೊಳಿಸಿದರು. ನಾವು ನಿಮ್ಮೊಂದಿಗಿದ್ದೇವೆಂಬ ಧೈರ್ಯ ತುಂಬಿದರು. ಮಕ್ಕಳ ಪತ್ತೆಗೆ ಸಹಾಯಹಸ್ತ ನೀಡಿದರು.

ಪದ್ಮ ಸುಮಾರು 30 ವರ್ಷದ ಯುವತಿ. ಪ್ರೀತಿಸಿ ವಿವಾಹವಾದ ಈಕೆ ಮನೆ-ಮಂದಿಯನ್ನೆಲ್ಲಾ ದೂರಮಾಡಿಕೊಂಡಳು. ಪ್ರೀತಿಯ ಸಲುವಾಗಿ ಇಷ್ಟೊಂದು ಬೆಲೆತೆತ್ತ ಈಕೆಗೆ ಗಂಡನಿಂದ ಸಿಕ್ಕಿದ್ದು ಹಿಂಸೆ, ಕಿರುಕುಳ, ಅವಮಾನ, ಕೊನೆಗೆ ವಿವಾಹ ವಿಚ್ಛೇದನ. ಇವರ ಮದುವೆಗೆ ಸಾಕ್ಷಿಯಾಗಿ ಒಂದು ಹೆಣ್ಣು ಮಗುವೂ ಇದೆ. ತನ್ನ ಹಾಗೂ ಮಗುವಿನ ಹೊಟ್ಟೆ ಹೊರೆಯಲು ಪದ್ಮ ಗಾರ್ಮೆಂಟ್ ಸೇರಿದ್ದಳು. ಮಿತ ಆದಾಯದ ನಡುವೆಯೇ ಅಷ್ಟೋ-ಇಷ್ಟೋ ಹಣಕೂಡಿಸಿ ಸ್ನೇಹಿತೆಯೊಬ್ಬರ ಬಳಿ ಚೀಟಿ ಹಾಕಿದಳು. ಅವಧಿ ಮುಗಿದ ಬಳಿಕ ಹಣ ವಾಪಸ್ಸು ಕೇಳಿದಳು. ಈಕೆಯ ರಕ್ಷಣೆಗೆ ಯಾರೂ ಇಲ್ಲವೆಂದು ತಿಳಿದ ಚೀಟಿಯ ಯಜಮಾನರುಗಳು ಈಕೆಗೆ ಹಣ ನೀಡದೆ ಬೆದರಿಸಲು ಪ್ರಾರಂಭಿಸಿದರು. ಪದ್ಮ ಪೊಲೀಸ್ ಕಂಪ್ಲೆಂಟ್ ನೀಡುತ್ತೇನೆಂದು ಹೇಳಿದಳು. ಇದರಿಂದ ಕುಪಿತಗೊಂಡ ಈಕೆಯ ಸ್ನೇಹಿತೆ ಪದ್ಮ ಕಾರ್ಖಾನೆ ಮುಗಿಸಿ ಮನೆಗೆ ಹಿಂತಿರುಗುತ್ತಿದ್ದಾಗ ಹಿಂದಿನಿಂದ ಬಂದು ದೊಣ್ಣೆಯೊಂದರಿಂದ ಹೊಡೆದಳು. ಸೀರೆ ಎಳೆದಾಡಿದಳು. ಜೊತೆಗೆ ಕರೆದುಕೊಂಡು ಬಂದಿದ್ದ ರೌಡಿಗಳಿಂದಲೂ ನಡುರಸ್ತೆಯಲ್ಲೇ ಹಾಡುಹಗಲೇ ಮೂರ್ಛೆ ಹೋಗುವಷ್ಟು ಹೊಡೆಸಿದಳು. ಯಾರೂ ನೆರವಿಗೆ ಧಾವಿಸಲಿಲ್ಲ. ಪೋಲೀಸರೂ ನೆರವು ನೀಡುತ್ತಿಲ್ಲ.

ಯಾವ ತಪ್ಪನ್ನೂ ಮಾಡದ ನಾನು ಇಷ್ಟೊಂದು ಅವಮಾನ ಯಾತನೆಯನ್ನನುಭವಿಸಬೇಕಾಯಿತು. ನನಗೆ ಯಾರು ದಿಕ್ಕು? ನನ್ನನ್ನ ಕೇಳುವವರು ಯಾರು? ನನಗೆ ರಕ್ಷಣೆ ಕೊಡಿ ನಿಮ್ಮನ್ನು ಬೇಡಿಕೊಳ್ಳುತ್ತೇನೆ ನನ್ನ ಜೀವ ಕಾಪಾಡಿ ಎಂದು ಅಂಗಲಾಚಿದಾಗ ಸಮ್ಮೇಳನದ ಸಭಾಂಗಣ ಮೌನವಾಗಿ ಕಣ್ಣೀರು ಮಿಡಿಯಿತು. ಸೇರಿದ್ದ ಎಲ್ಲ ಹೆಂಗಸರು ಪದ್ಮಳ ದುರಂತ ಕಥೆ ಕೇಳಿ ಬಿಕ್ಕಿದರು. ನೀನು ಅನಾಥೆಯಲ್ಲ ನಾವು ನಿಮ್ಮೊಂದಿಗಿದ್ದೇವೆಂಬ ಸಮಾಧಾನ ಎಲ್ಲರ ಕಣ್ಣುಗಳಲ್ಲೂ ಪ್ರತಿಬಿಂಬಿಸಿತು.

ಹೀಗೆ ಸಮ್ಮೇಳನದಲ್ಲಿ ಪಾಲ್ಗೊಂಡಿದ್ದ ಸುಮಾರು 350 ಪ್ರತಿನಿಧಿಗಳಲ್ಲನೇಕರು ತಮ್ಮ ವೈಯಕ್ತಿಕ ಸಂಕಷ್ಟಗಳನ್ನು ಬದುಕಿನ ಘೋರ ಅನುಭವಗಳನ್ನ ಪರಸ್ಪರ ಹಂಚಿಕೊಂಡು ಮನಸ್ಸನ್ನು ಹಗುರ ಮಾಡಿಕೊಳ್ಳಲು ವೇದಿಕೆ ಕಲ್ಪಿಸಿದ ಜೆ.ಎಂ.ಎಸ್‌ಗೆ ಕೃತಜ್ಞತೆ ಸಲ್ಲಿಸಿದದು ಮಾತ್ರವಲ್ಲ ನೆರವನ್ನೂ ಕೋರಿದರು.

ನಮ್ಮ ಪ್ರದೇಶಕ್ಕೆ ವಾರಕ್ಕೊಮ್ಮೆ ನೀರು ಬರುತ್ತೆ. ಸೀಮೆಎಣ್ಣೆಗೆ ಕ್ಯೂ ನಿಲ್ಲುವಂತೆ ನೀರಿಗೂ ಸಹ ನಿಲ್ಲಬೇಕು. ನೀರಿಗಾಗಿ ಹೊಡೆದಾಡಿ ಬಡಿದಾಡಬೇಕು ನೀರಿನ ಬವಣೆಗೆ ಪರಿಹಾರ ಬೇಕು.

ನಮ್ಮ ಬೀದಿಯಲ್ಲಿ ರಸ್ತೆ ಚರಂಡಿ ಎಲ್ಲ ಒಂದೇ, ಚರಂಡಿ ನಿರ್ಮಾಣ ಆಗಬೇಕು, ವಿದ್ಯುತ್ ದೀಪಬೇಕು.

ನಮ್ಮ ಇಡೀ ಸ್ಲಂನಲ್ಲಿ ಒಂದೇ ಒಂದು ಶೌಚಾಲಯವೂ ಇಲ್ಲ ನಮ್ಮ ಬವಣೆ ಹೇಳತೀರದಾಗಿದೆ. ಏನಾದರೂ ಮಾಡಿ ಶೌಚಾಲಯ ನಿರ್ಮಾಣ ಮಾಡಿಸಬೇಕು.

ನಮ್ಮ ಮನೆಯಲ್ಲಿ ಏಳೆಂಟು ಮಂದಿ. ರೇಷನ್ ಕಾರ್ಡ್ ಮಾತ್ರ ಸಿಕ್ಕಿಲ್ಲ. ಶ್ರೀಮಂತರ ಮನೆಗಳಿಗೆಲ್ಲಾ ಹಸಿರು ಕಾರ್ಡು ನೀಡಿದ್ದಾರೆ. ಕೊನೇ ಪಕ್ಷ ನಮಗೆ ಕೆಂಪು ಕಾರ್ಡಾದರೂ ದೊರಕಿಲ್ಲ. ರೇಷನ್ ಕಾರ್ಡ್ ಕೊಡಿಸಬೇಕು.


ನಾವು ಹದಿನೈದು ಇಪ್ಪತ್ತು ವರ್ಷಗಳಿಂದ ಸ್ಲಂ ನಿವಾಸಿಗಳು ನಮಗೆ ಹಕ್ಕು ಪತ್ರವೇ ಇಲ್ಲ ನಮಗೆ ನೆಲೆ ಮಾಡಬೇಕು, ಹೀಗೆ ಪಟ್ಟಿ ಮಾಡುತ್ತಾ ಹೋದರೆ ನಾಗರೀಕ ಸೌಲಭ್ಯಗಳಿಗಾಗಿ ಅದೆಷ್ಟು ಬೇಡಿಕೆಗಳು ಸಾಲದೆಂಬಂತೆ ವರದಕ್ಷಿಣೆ ಕಿರುಕುಳ, ಕುಡುಕ ಗಂಡನ ಕಾಟ, ಚೂರುಗಂಜಿಯ ಸಲುವಾಗಿ ದಿನವೆಲ್ಲಾ ದುಡಿಮೆ, ದುಡಿಮೆಯ ಜಾಗಗಳಲ್ಲಿ ಹಿಂಸೆ, ಕ್ರೌರ್ಯ ದನಿಯೆತ್ತಿದರೆ ಡಿಸ್‌ಮಿಸ್ ಇತ್ಯಾದಿ ಬರ್ಬರ ಬದುಕಿನ ಹಲವಾರು ದನಿಗಳು ಸಮ್ಮೇಳನದಲ್ಲಿ ಪ್ರತಿಧ್ವನಿತಗೊಂಡವು.

ಪ್ರತಿನಿಧಿಗಳ ಇಷ್ಟೆಲ್ಲ ಚರ್ಚೆಯ ನಂತರ ಸಮ್ಮೇಳನ ಕೆಲವು ನಿರ್ಣಯಗಳನ್ನ ಕೈಗೊಂಡಿತು. ಅವುಗಳೆಂದರೆ

1. ಅಗತ್ಯ ನಾಗರೀಕ ಸೌಲಭ್ಯಗಳಿಗಾಗಿ ಆಗ್ರಹಿಸಿ ಸಿ.ಎಂ.ಸಿಗಳ ಮೇಲೆ ಒತ್ತಡ ತರಲು ಹೋರಾಡುವುದು.
2. ಮಕ್ಕಳನ್ನು ಕಳೆದುಕೊಂಡ ಕುಟುಂಬದವರ ಜೊತೆಗೂಡಿ ಪೊಲೀಸ್ ಅಧಿಕಾರಿಗಳಿಗೆ ಮನವಿ ಪತ್ರ ನೀಡುವುದು ಜೊತೆಗೆ ಪೊಲೀಸ್ ಠಾಣೆಯ ಎದುರು ಪ್ರತಿಭಟನೆ ನಡೆಸುವುದು.
3. ಕಾರ್ಖಾನೆ ವಿವಾದಗಳಲ್ಲಿ ಅನಗತ್ಯ ಪೊಲೀಸ್

ಪುಟ 8ಕ್ಕೆ

ಮಾಸದ ನೆನಪುಗಳು
(ಒಂದು ರಾಜಕೀಯ ಆತ್ಮ ಕಥನ)



ಇದುವರೆಗೆ

ಕಳೆದ ಸಂಚಿಕೆಯಲ್ಲಿ ಜ್ಯೋತಿಬಸು ತಮ್ಮ ಬಾಲ್ಯದ ಬಗ್ಗೆ ಮಾಸದ ನೆನಪುಗಳನ್ನು ಮುಂದಿಡಲು ಆರಂಭಿಸುತ್ತಾರೆ. ತಂದೆ ತಾಯಿ ಅವರ ಕುಟಂಬದ ಹಿನ್ನೆಲೆಯಿಂದ ಆರಂಭಿಸುತ್ತಾ, ಅವರ ಮೇಲೆ ಕ್ರಾಂತಿಕಾರಿ ರಾಷ್ಟ್ರೀಯ ಚಳುವಳಿಯ ಸಂಪರ್ಕ, ಗಾಳಿ, ಬೀಸಿದ್ದರ ಬಗ್ಗೆ ಬರೆಯುತ್ತಾರೆ. ಕ್ರಾಂತಿಕಾರಿ ಒಬ್ಬರು ಅವರು ಮನೆಯಲ್ಲಿ ಇರಿಸಿದ ಶಸ್ತ್ರಾಸ್ತ್ರ, ಪೋಲೀಸ್‌ರೈಡ್ ಆದದ್ದು, ಆಗ ತಾಯಿ ಶಸ್ತ್ರವನ್ನು ಸೀರೆಯೊಳಗೆ ಬಚ್ಚಿಟ್ಟಿಕೊಂಡದ್ದರ ಬಗ್ಗೆ ನೆನಪಿಸುತ್ತಾರೆ.

ಸ್ಕೂಲ್ ಶಿಕ್ಷಣ ಕಿಂಡರ್‌ಗಾರ್ಡನ್ ಬಿಟ್ಟು ಸ್ಕೂಲಿಗೆ ಸೇರಬೇಕಾದಾಗ ಭರ್ತಿಯಲ್ಲಿ ತಡವಾದ್ದರಿಂದ ಹುಡುಗಿಯರ ಸ್ಕೂಲಲ್ಲಿ ಕ್ಲಾಸಿನ ಒಬ್ಬನೇ ಹುಡುಗನಾಗಿ ಒಂದು ವರ್ಷ ಕಳೆಯ ಬೇಕಾದ್ದು ಅವರಮಾಸದ ನೆನಪುಗಳಲ್ಲೊಂದು. ಗಾಂಧೀ ಉಪವಾಸ ಆರಂಭಿಸಿದ ದಿನ ಅವರು ಸ್ಕೂಲಿಗೆ ಹೋಗದ್ದು, ನೇತಾಜಿ ಸುಭಾಸ್ ಚಂದ್ರ ಬೋಸ್‌ರ ಸಭೆಗೆ ಹೋಗಿ ಲಾಠಿ ಏಟು ತಿಂದು ಬಂದದ್ದು ಅವರ ಬಾಲ್ಯದಲ್ಲೇ ರಾಷ್ಟ್ರೀಯವಾದಿ ಚಳುವಳಿಯ ಪರಿಣಾಮ ಆರಂಭವಾದದ್ದರ ಸೂಚಕ.

ಬಾಲ್ಯದ ಮಾಸದ ನೆನಪುಗಳ ಬಗ್ಗೆ ಈ ಅಂಕದಲ್ಲೂ ಅವರು ಮುಂದುವರೆಸುತ್ತಾರೆ ಮುಂದೆ ಓದಿ.

ಬಾಲ್ಯದ ನೆನಪು
ದೊಡ್ಡಪ್ಪನಿಗೇ 'ಬೆದರಿಕೆ' ಪತ್ರ

ನನ್ನ ಎಳೆಯ ದಿನಗಳಲ್ಲಿ ಇಂದುಸುಧಾ ಘೋಷ್ ಎಂಬ ನನ್ನ ಸಂಬಂಧಿ ಆಗಿನ ಪದ್ಧತಿಗಳಿಗೆ ವಿರುದ್ಧವಾಗಿ ಬದುಕುತ್ತಿದ್ದು ಗಮನ ಸೆಳೆದವಳು. ಆಕೆಯನ್ನು ನಾನು ಇಂದು-ದಿ (ಇಂದು -ಅಕ್ಕ) ಎಂದು ಕರೆಯುತ್ತಿದ್ದೆ. ನಮ್ಮ ಮನೆಗೆ ಇಂದು-ದಿ ಯಾವಾಗಲೂ ಬರುತ್ತಿದ್ದಳು. ಅವಳು ಪುತು-ದಿ (ಸುಭಾಷಿನಿ ಗಂಗೂಲಿ) ಯ ಗೆಳತಿಯಾಗಿದ್ದಳು. ಬೆಂಗಾಲ್ ಲ್ಯಾಂಪ್ಸ್‌ನ ಕಿರಣ್ ರಾಯಗೆ ಸಹ ಆಕೆ ಸಂಬಂಧಿಯಾಗಿದ್ದಳು. ರಾಯ್ ಅವರೇ ಆಕೆಯನ್ನು ಕ್ರಾಂತಿಕಾರಿ ಚಳುವಳಿಗೆ ಪರಿಚಯಿಸಿದ್ದರು. ಆ ಮೇಲೆ ಆಕೆ ಕಮ್ಯುನಿಸ್ಟ್ ಚಳುವಳಿ ಸೇರಿದ್ದಳು. ಪಕ್ಷ ಇಬ್ಭಾಗವಾದಾಗ ಸಿಪಿಐ(ಎಂ)ಗೆ ಸೇರಿದ್ದಳು. ಆಕೆ ಬಹಳ ಸಮಯ ನಾರಿ ಶಿಕ್ಷಾ ಮಂದಿರದ ಪ್ರಿನ್ಸಿಪಾಲ್ ಆಗಿದ್ದಳು.

ತಾಯ್ನಾಡಿನ ಒಳಗುದಿ, ಅಮಾನವೀಯ ಬ್ರಿಟಿಷ್ ರಾಜಸೊತ್ತೆಯ ಬಂಧನದಿಂದ ಕಳಚಿ ಕೊಂಡು ಸ್ವತಂತ್ರವಾಗ ಬಯಸುವ ದೇಶದ ಆದಾಮ್ಯ ಬಯಕೆ, ಸ್ವದೇಶಿಗಳಿಗೆ ನನ್ನ ತಂದೆಯ ಪ್ರಬಲ ಆದರೆ ಪರೋಕ್ಷ ಬೆಂಬಲ, ಇಂದು -ದಿ.. ಇವೆಲ್ಲಾ ನನಗೆ ಆಗ ನನ್ನ ಭವಿಷ್ಯದ ಬಗ್ಗೆ ದೂರದ ದೀಪ ಸ್ತಂಭವೊಂದು ಆಗೊಮ್ಮೆ ಈಗೊಮ್ಮೆ ತೋರುವ ಬೆಳಕಿನಂತೆ ಅನಿಸುತ್ತಿತ್ತು. ಆದರೆ ಯಾವುದೂ ಸ್ಪಷ್ಟವಿರಲಿಲ್ಲ.

ನನ್ನ ದೊಡ್ಡಮ್ಮ ತನ್ನ ಮೂವರು ಗಂಡು ಮಕ್ಕಳು, ಎರಡು ಹೆಣ್ಣು ಮಕ್ಕಳೊಂದಿಗೆ ನಮ್ಮ ಜತೆಗೆ ಇದ್ದರು. ದೊಡ್ಡಮ್ಮನಿಗೆ ಸ್ವದೇಶಿಗಳ ಜತೆ ಹೆಚ್ಚಿನ ಅನುಕಂಪ ಇತ್ತು. ಕಿರಣ್ ರಾಯ್ ಮತ್ತು ಬಿಜೊಯ್ ಮೊದಕ್ ಆಕೆಯನ್ನು ಭೇಟಿ ಮಾಡಲು ಬರುತ್ತಿದ್ದರು. ಆಗ ಅವರಿಬ್ಬರು ಜಾಧವಪುರ ಟೆಕ್ನಿಕಲ್ ಇಂಜಿನೀಯರಿಂಗ್ ಸ್ಕೂಲಲ್ಲಿ ಓದುತ್ತಿದ್ದರು. ಅವರು ಮಾತನಾಡುವುದನ್ನು ನಾನು ಯಾವಾಗಲೂ ಕೇಳುತ್ತಿದ್ದೆ. ಆದರೆ ಅವರ ಮಾತುಗಳು ನನಗೆ ಇನ್ನೂ ಅರ್ಥವಾಗುತ್ತಿರಲಿಲ್ಲ.

ಹೈಕೋರ್ಟಿನ ಜಜ್ ಆದ ದೊಡ್ಡಪ್ಪ

ನನ್ನ ಒಬ್ಬ ದೊಡ್ಡಪ್ಪ ನಳಿನಕಾಂತ ಬಸು, ಹೈ ಕೋರ್ಟಿನ ಜಜ್ ಆಗಿ ನಿವೃತ್ತರಾಗಿದ್ದರು. ಅವರಿಗೆ ಸಿಹಿಮೂತ್ರ ಕಾಯಿಲೆ ಇತ್ತು. ಆಗ ಮೆಚುಬಜಾರ್ ಬಾಂಬ್ ಪ್ರಕರಣದ ತನಿಖೆಗೆ ವಿಶೇಷ ಟ್ರಿಬ್ಯುನಲ್ ರಚಿಸಿದ್ದರು. ಪ್ರಮುಖ ಆರೋಪಿಗಳು ಕ್ರಾಂತಿಕಾರಿಗಳಾದ ನಿರಂಜನ್‌ದಾ (ನಿರಂಜನ ಸೇನ್) ಮತ್ತಿತರರು ನನ್ನ ದೊಡ್ಡಪ್ಪನನ್ನು ಆ ಟ್ರಿಬ್ಯೂನಲ್‌ನ ಮುಖ್ಯಸ್ಥರಾಗಲು ಕೇಳಿತ್ತು ಸರ್ಕಾರ. ನನ್ನ ತಂದೆ ಇದಕ್ಕೆ ವಿರೋಧವಾಗಿದ್ದರು. ಇಂತಹ ಪ್ರಕರಣಗಳಲ್ಲಿ ದೊಡ್ಡಪ್ಪ ಭಾಗಿಯಾಗುವುದು ಬೇಡ, ಅವರ ಆರೋಗ್ಯ ಬೇರೆ ಸರಿಯಿರಲಿಲ್ಲ ಎಂಬುದು ಅವರ ವಾದವಾಗಿತ್ತು. ಆದರೆ ಪ್ರಾಂತ್ಯದ ಚೀಫ್ ಸೆಕ್ರೆಟರಿ ಸ್ವತಃ ನಮ್ಮ ಮನೆಗೆ ಬಂದು ದೊಡ್ಡಪ್ಪನ ಸಮ್ಮತಿ ಪಡೆದು ಹೋಗಿದ್ದರು.

ಇವೆಲ್ಲ ವಿವಾದಗಳು ನಮಗೆ- ಮಕ್ಕಳಿಗೆ- ಪೂರ್ತಿ ಅರ್ಥವಾಗುತ್ತಿರಲಿಲ್ಲ. ಆದರೆ ಒಂದಂತೂ ಆಗಲೂ ಸ್ಪಷ್ಟವಾಗಿತ್ತು. ದೊಡ್ಡಪ್ಪ ಇದಕ್ಕೆ ಸಮ್ಮತಿ ನೀಡಿದ್ದು ನಮಗೆ ಇಷ್ಟವಾಗಿರಲಿಲ್ಲ. ನಾವು ಇನ್ನೂ ಎಳೆಯವರಾಗಿದ್ದೆವು. ಆದರೂ ಕ್ರಾಂತಿಕಾರಿಗಳೆಂದರೆ ದೇಶಕ್ಕೆ ತಮ್ಮ ಪ್ರಾಣವನ್ನೇ ಮುಡುಪಾಗಿಟ್ಟವರು. ದೇಶಕ್ಕಾಗಿ ಪ್ರಾಣತ್ಯಾಗಕ್ಕೂ ತಯಾರಾದವರು. ಎಂದು ನಮಗೆ ಗೊತ್ತಾಗುತ್ತಿತ್ತು. ಕ್ರಾಂತಿಕಾರಿ ಹೋರಾಟ ಮತ್ತು ಹೋರಾಟಗಾರರ ಜತೆ ಸಂಬಂಧವಿದ್ದ ಬಂಗಾಲಿ ಕುಟುಂಬಗಳು ಆಗ ಕೆಲವೇ ಇದ್ದವು. ಆದರೂ ನಮ್ಮೆಲ್ಲರಲ್ಲಿ ಈ ಕ್ರಾಂತಿ ಕಾರಿಗಳ ಬಗ್ಗೆ ಆಳವಾದ ಪ್ರೀತಿ ಮತ್ತು ಗೌರವ ಇತ್ತು. ನನ್ನ ದೊಡ್ಡಪ್ಪ ಆದರೂ ಆ ಟ್ರಿಬ್ಯೂನಲ್ ಕೆಲಸ ಆರಂಭಿಸಿದ್ದರು.

ಆಗಿನ ಕಾಲದಲ್ಲಿ ಪೋಲಿಸರು 'ನಿಷೇದಿಸಿದ' ಪುಸ್ತಕಗಳನ್ನು ಮುಟ್ಟು ಗೋಲು ಹಾಕಿಕೊಳ್ಳುತ್ತಿದ್ದರು. ನನ್ನ ದೊಡ್ಡಪ್ಪ ಕೋರ್ಟಿಗೆ ಹೋದಾಗ ಅವರ ಪುಸ್ತಕದ ಬೀರುವಿನಲ್ಲಿರುವ ಅಂತಹ ಪುಸ್ತಕಗಳನ್ನು ನಾವು ನೋಡುತ್ತಿದ್ದೆವು. ಆ ಪುಸ್ತಕಗಳಲ್ಲೇನಿದೆ ಎಂಬ ಕುತೂಹಲ ನಮಗೆ. ಆದರೆ ಅದನ್ನು ಜಾಗ್ರತೆಯಾಗಿ ಮೊದಲಿದ್ದ ರೀತಿಯಲ್ಲೇ ವಾಪಸು ಇಡುತ್ತಿದ್ದೆವು. ಅರಾಜಕತಾವಾದ ಎಂದು ಕರೆಯಲ್ಪಡುವ ವಾದದ ಸಾಹಿತ್ಯವನ್ನು ನಾನು ಮೊದಲು ನೋಡಿದ್ದು ಅಲ್ಲೇ. ಮುಂದೆ ನನಗೆ ಅರಾಜಕತಾವಾದದ ಬಗ್ಗೆ ಬೆಳೆದ ನಂಟಿನ ಆರಂಭ ಆದದ್ದು ಅಲ್ಲೇ.

ಮನೆಯಲ್ಲಿ ರಿವಾಲ್ವರ್ ಪ್ರಕರಣ

ಶರತ್ ಚಂದ್ರ ಚಟರ್ಜಿಯವರ 'ಪಾಥೆರ್ ದಾಬಿ' ಅಗಸ್ಟ್ 1926 ರಲ್ಲಿ ಪ್ರಕಟವಾಗಿತ್ತು. ಪ್ರಕಟವಾದ ಕೂಡಲೇ-ಸೆಪ್ಟೆಂಬರ್, ಅಕ್ಟೋಬರ್‌ನಲ್ಲೇ ಅದರ ಮೇಲೆ ಸರ್ಕಾರ ನಿಷೇದ ಹೇರಿತು. ಆದರೆ ಆಗಲೇ ನಾನು ಅದನ್ನು ಓದಿಯಾಗಿತ್ತು ಕೋಣೆಯ ಬಾಗಿಲು ಹಾಕಿಕೊಂಡು. ನನ್ನ ಸೋದರ ಸಂಬಂಧಿಗಳಲ್ಲಿ ಕೆಲವರಿಗೆ ಇಂತಹುದರಲ್ಲಿ ಆಸಕ್ತಿ ಇತ್ತು. ಅವರಲ್ಲಿ ಪಬಿತ್ರ ಕುಮಾರ ಬಸು, ಆತ ಹಿಂದೆ ಲಂಡನ್‌ನಲ್ಲಿದ್ದವನು. ಆತ ದೇಶದ ವಿಚಾರಗಳಲ್ಲಿ ತನ್ನನ್ನು ತೊಡಗಿಸಿಕೊಂಡಿದ್ದ. ಆದರೆ ದೇಶಕ್ಕೆ ಸ್ವಾತಂತ್ರ್ಯ ಬಂದದ್ದನ್ನು ನೋಡುವ ಭಾಗ್ಯ ಇರಲಿಲ್ಲ ಅವನಿಗೆ. ಬಿಜೊಯ್ ಮೊದಕ ಮತ್ತಿತರರು ಕ್ರಾಂತಿಕಾರಿ ಚಳುವಳಿಯಲ್ಲಿ ಭಾಗವಹಿಸುತ್ತಿದ್ದು ತಮ್ಮ ರಿವಾಲ್ವರ್‌ಗಳನ್ನು ಸುರಕ್ಷಿತವಾಗಿಡಲು ಆಗಾಗ ಅದನ್ನು ಪಬಿತ್ರದಾಗೆ ಕೊಟ್ಟು ಹೋಗುತ್ತಿದ್ದರು. ನಮ್ಮ ದೊಡ್ಡಪ್ಪ ಹೈಕೋರ್ಟ್ ಜಜ್ ಆಗಿದ್ದರಿಂದ ನಮ್ಮ ಮನೆ ಸುರಕ್ಷಿತವೆಂದು ಅವರು ತಿಳಿದಿದ್ದರು. ಪಬಿತ್ರದಾ ಅದನ್ನು ಬಟ್ಟೆಯೊಳಗೆ ಮುಚ್ಚಿ ಪೆಟ್ಟಿಗೆಯೊಂದರಲ್ಲಿ ಇಡುತ್ತಿದ್ದ. ಅವನು ರಿವಾಲ್ವರ್‌ನ್ನು ಸ್ನಾನದ ಕೋಣೆಗೆ ತೆಗೆದುಕೊಂಡು ಹೋಗುವುದನ್ನು ನೋಡುವುದು ನಮ್ಮ ದಿನಚರಿಗಳಲ್ಲಿ ಒಂದಾಗಿತ್ತು. ಅವನು ಅದನ್ನು ಸ್ನಾನದ ಕೋಣೆಗೆ ದಿನಾ ರಿವಾಲ್ವರನ್ನು ಸ್ವಚ್ಛ ಮಾಡಲು ತೆಗೆದುಕೊಂಡು ಹೋಗುತ್ತಿದ್ದ ಎಂಬುದು ನಮ್ಮ ಊಹೆಯಾಗಿತ್ತು.

ಪಬಿತ್ರ-ದಾ (ಪಬಿತ್ರಣ್ಣ)ನ ಸಣ್ಣ ತಮ್ಮ ಈ ಗುಟ್ಟನ್ನೂ ಒಂದು ದಿನ ಬಯಲು ಮಾಡಿಯೇ ಬಿಟ್ಟ. ಅವನಿಗೆ ಕೆಟ್ಟ ಕುತೂಹಲ ಜಾಸ್ತಿ. ಪಬಿತ್ರದಾ ಕಲ್ಕತ್ತೆಯಿಂದ ಹೊರಗೆ ಹೋಗಿದ್ದಾಗ, ಆತ ಬಾಕ್ಸ್ ತೆರೆದು ರಿವಾಲ್ವರ್ ನೋಡಿ ಬಿಟ್ಟ. ಇಡೀ ಕುಟುಂಬಕ್ಕೆ ಜಗಜ್ಜಾಹೀರು ಮಾಡಿಬಿಟ್ಟ. ದೊಡ್ಡಪ್ಪನಿಗಂತೂ ಭಾರಿ ಮುಜುಗರ ಆಯ್ತು ಅಪ್ಪ-ದೊಡ್ಡಪ್ಪ ಪ್ರತಿ ದಿನ ಬೆಳಿಗ್ಗೆ' ಜತೆ ವಾಕಿಂಗ್‌ಗೆ ಹೋಗುತ್ತಿದ್ದರು'. ನನ್ನ ತಂದೆ ಮತ್ತು ಪೋಲೀಸ್ ಗಾರ್ಡ್‌ಗಳ ಜತೆ ರೋಜಾನ್ ದೊಡ್ಡಪ್ಪ ರಿವಾಲ್ವರನ್ನು ಒಂದು ಕೆರೆಯಲ್ಲಿ ಬಿಸಾಕಿ ಬಂದರು. ಪಬಿತ್ರ್-ದಾ ಬಂದ ಕೂಡಲೇ ಆತನ ಮೇಲೆ ಪ್ರಶ್ನೆಗಳ ಸುರಿಮಳೆ. ಅವನಿಗೆ ಭಾರಿ ಕೋಪ ಬಂತು. ಅವನು ಮರುಪ್ರಶ್ನೆ ಹಾಕಿದ-ಯಾರು ನಿಮಗೆ ಈ ಬಾಕ್ಸ್ ತೆರೆಯಲು ಹೇಳಿದ್ದು ಅಂತ. ಅವನ ಕೋಪದ ತಾಪ ನೋಡಿ ಎಲ್ಲರೂ ಸುಮ್ಮನಾದರು. ಅದರ ಬಗ್ಗೆ ದೊಡ್ಡ ರಗಳೆ ಮಾಡಲು ಮನೆಯಲ್ಲಿ ಸಾಭಾವಿಕವಾಗಿಯೇ ಯಾರಿಗೂ ಮನಸ್ಸಿರಲಿಲ್ಲ. ಆ ಮೇಲೆ ಬಿಜೊಯ್ ಮೊದಕ್ ಮತ್ತು ಇತರ ಕ್ರಾಂತಿಕಾರಿಗಳದ್ದೇ ಆ ರಿವಾಲ್ವರ್ ಅಂತ ನಮಗೆ ಖಚಿತವಾಗಿ ಗೊತ್ತಾಯ್ತು.

ನನ್ನ 'ಬೆದರಿಕೆ' ಪತ್ರ!

ಅಷ್ಟು ಹೊತ್ತಿಗೆ ದೊಡ್ಡಪ್ಪನ ಮನೆಯ ಮುಂದೆ (ದೊಡ್ಡಪ್ಪನ ಭದ್ರತೆಗೆ) ಪೋಲಿಸ್ ಕ್ಯಾಂಪ್‌ವೊಂದನ್ನು ಹಾಕಿದ್ದರು. ನಮಗೆ ಆ ಬಗ್ಗೆ ಕೋಪ ಹೆಚ್ಚಾಗುತ್ತಿತ್ತು. ಆಗಲೇ ನಾವು ಸ್ವಾತಂತ್ರ ಹೋರಾಟದಲ್ಲಿ ಪೂರ್ತಿಯಾಗಿ ತೊಡಗಿಸಿ ಕೊಂಡಿದ್ದೇವೊ ಎನ್ನುವ ಹಾಗೆ!

ದೊಡ್ಡಪ್ಪ ಕ್ರಾಂತಿಕಾರಿಗಳ ವಿಚಾರಣೆಗೆ ನೇಮಿಸಿದ ಟ್ರಿಬ್ಯೂನಲ್ ನಲ್ಲಿ ಜಜ್ ಆಗಲು ಒಪ್ಪಿದ್ದು ನಮಗೆ ಸ್ವಲ್ಪವೂ ಇಷ್ಟವಾಗಿರಲಿಲ್ಲ. ನಾನು ಮತ್ತು ಸೋದರ ದೇಬಪ್ರಿಯ ಬಸು ಒಂದು ಐಡಿಯಾ ಹಾಕಿದೆವು. ಗುಟ್ಟಾಗಿ ಒಂದು ಬೆದರಿಕೆ ಪತ್ರ ಬರೆಯಲು ನಿರ್ಧರಿಸಿದೆವು. ಇಂಗ್ಲೀಷಿನಲ್ಲಿ ಒಂದು ಪತ್ರವನ್ನು ನಾವೇ ಟೈಪ್ ಮಾಡಿ ತಯಾರಿಸಿದೆವು. ಆ ಪತ್ರ ಸರಿಸುಮಾರಾಗಿ ಹೀಗಿತ್ತು:

"ನೀವು ಭಾರಿ ಅನ್ಯಾಯ ಮಾಡುತ್ತಿದ್ದೀರಿ. ನೀವು ಬಂಗಾಳಿಯಾಗಿ ಬಂಗಾಳಿಗಳಿಗೆ ಮೋಸ ಮಾಡುತ್ತಿದ್ದೀರಿ. ದೇಶಭಕ್ತರ ವಿರೋಧಿಗಳ ಜತೆ ಶಾಮೀಲಾಗಿದ್ದೀರಿ.

ಇದು ದೊಡ್ಡ ತಪ್ಪು. ನಿಮ್ಮ ಜೀವಕ್ಕೆ ಅಪಾಯ ಎಚ್ಚರಿಕೆ"

ಈ 'ಬೆದರಿಕೆ' ಪತ್ರ ದೊಡ್ಡಪ್ಪನಿಗೆ ತಲುಪಿದಾಗ, ದೊಡ್ಡ ಗುಲ್ಲಾಯಿತು. ಆಗ ಮನೆಯವರೆಲ್ಲ ಊಟ ಮಾಡುತ್ತಿದ್ದರು. ಅಪ್ಪ ಪಿಸುಮಾತಿನಲ್ಲಿ ಅಮ್ಮನಿಗೆ ಹೇಳುತ್ತಿದ್ದರೂ ನಮಗೆ ಕೇಳಿಸಿತು-ನಾನು ಹೇಳಿದ್ದೆ ಅವನಿಗೆ ಈ ಕೆಲಸ ಬೇಡ ಅಂತ, ಕೇಳಿದನಾ! ಈಗ ನೋಡು ಜೀವಕ್ಕೆ ಅಪಾಯ ಬಂದಿದೆ!

ಮನೆಯ ಮುಂದೆ ಭದ್ರತೆ ಇನ್ನಷ್ಟು ಹೆಚ್ಚು ಮಾಡಿದರು. ದೊಡ್ಡಪ್ಪನ ಬೆಳಗ್ಗಿನ ವಾಕಿಂಗ್ ಸಹ ಕಟ್. ಅಪ್ಪ ಮತ್ತು ದೊಡ್ಡಪ್ಪನಿಗೆ ಜತೆಗೆ ಮಾರ್ಕೆಟ್‌ಗೆ ವಾಕಿಂಗ್ ಹೋಗುವುದೆಂದರೆ ಇಷ್ಟ ಅದಕ್ಕೂ ಕತ್ತರಿ ಆಗಿತ್ತು ನಮ್ಮ 'ಬೆದರಿಕೆ' ಪತ್ರದಿಂದ. ಆದರೆ ನಮಗೆ ಖುಷಿಯೋ ಖುಷಿ! ನಮ್ಮ ಬೆದರಿಕೆ ಪತ್ರದ ಪರಿಣಾಮ ನೋಡಿ!

ಪಾದ್ರಿಗಳ ವಿರುದ್ಧ ನನ್ನ ಪ್ರತಿಭಟನೆ

ನಾವು ಹಿಂದೂಸ್ತಾನ ಪಾರ್ಕ್‌ನಲ್ಲಿದ್ದಾಗ ಅಣ್ಣನೊಬ್ಬನ ಮದುವೆ ಗೊತ್ತಾಗಿತ್ತು. ಹುಡುಗಿ ರಾಜಾ ಪ್ರಸನ್ನದೇಬ್ ರಾಯಚೌದುರಿ ಮಗಳು. ಈ ಮದುವೆ ಬಗ್ಗೆ ನನ್ನ ಅಪ್ಪ ಅಮ್ಮ ಇಬ್ಬರಿಗೂ ಅಸಮಾಧಾನ. ಕೆಲವು ಹತ್ತಿರದ ಸಂಬಂಧಿಗಳು ಜಾತಿ ಉಪಜಾತಿಯ ದೃಷ್ಟಿಯಿಂದ ಸರಿ ಇರಲಿಲ್ಲ ಎಂದು ಹೇಳಿದ್ದನ್ನು ಅವರು ಚರ್ಚಿಸುತ್ತಿದ್ದರು. ಜಾತಿ -ಉಪಜಾತಿ ಅಂದರೇನು ಅದು ಮದುವೆಯಲ್ಲೂ ಹೀಗೆ ಬಾಯಿ ಹಾಕುತ್ತಿದೆ ಎಂದು ನಮಗೆ ಗೊತ್ತಾಗಿದ್ದು ಆಗ. ನಾವು ಅದನ್ನೇನು ಅಷ್ಟು ಗಂಭೀರವಾಗಿ ತೆಗೆದುಕೊಳ್ಳಲಿಲ್ಲ. ಮದುವೆಯಂತೂ ನಡೆದೇ ಹೋಯಿತು.

ನಾವು ಉಗ್ರಗಾಮಿಗಳಲ್ಲದ ಕ್ರಾಂತಿಕಾರಿಗಳನ್ನೂ ನೋಡಿದ್ದೆವು. ಹಿಂದೂಸ್ತಾನ ಬಿಲ್ಡಿಂಗ್ ಮೊದಲ ಮಹಡಿ ಯಲ್ಲಿದ್ದಾಗ ಎರಡನೆಯ ಮಹಡಿಯಲ್ಲಿ ನಳಿನಿ ರಂಜನ ಸರ್ಕಾರ ಅಂತ ಒಬ್ಬರು ಇದ್ದರು. ಚಿತ್ತರಂಜನ ದಾಸ್ (ಪ್ರಸಿದ್ಧ ರಾಷ್ಟ್ರವಾದಿ) ಆಗಾಗ ಅವರ ಮನೆಗ ಬರುತ್ತಿದ್ದರು. ಅವರನ್ನು ನಾನೇ ನೋಡಿದ್ದೆ. ನನ್ನ ತಂದೆಯ ಬಳಿ ಅವರು ವಂತಿಗೆಗೆ ಬರುತ್ತಿದ್ದರು.

ಉಗ್ರಗಾಮಿಗಳ ಹೋರಾಟಕ್ಕೆ ವಾಪಾಸಾಗೋಣ. 1930 ರಲ್ಲಿ ಚಿತ್ತಗಾಂಗ್ ಶಸ್ತ್ರಾಗಾರದ ಮೇಲೆ ಉಗ್ರಗಾಮಿಗಳ ಧಾಳಿ ಆಗಲೇ ಆಗಿತ್ತು. ಸೈಂಟ್ ಕ್ಷೇವಿಯರ್ಸ್ ಸ್ಕೂಲ್‌ಗೆ (ಆಗ ನನ್ನ ಸ್ಕೂಲ್) ಈ ಸುದ್ದಿ ಮುಟ್ಟಿದಾಗ ಯಾರೂ ನಂಬಲಿಲ್ಲ. ಇಂತಹ ದಾಳಿ ಯೊಂದನ್ನು ಬಂಗಾಳಿ ಗುಂಪೊಂದು ಮಾಡಲು ಸಾಧ್ಯವಿದೆ ಎಂದು ಯಾರಿಗೂ ಊಹಿಸಲು ಸಾಧ್ಯವಾಗದ ಪರಿಸ್ಥಿತಿ ಆಗ ಇತ್ತು. ಈ ದಾಳಿ ನಿಜವಾಗಲೂ ನಡೆದಿದೆ ಎಂದು ಖಚಿತ ಸುದ್ದಿ ಬಂದಾಗ, ನಮ್ಮ ಸ್ಕೂಲನ್ನು ನಡೆಸುತ್ತಿದ್ದ ಪಾದ್ರಿಗಳು ಈ ದಾಳಿಯನ್ನು ಖಂಡಿಸಿ ಕರಪತ್ರವೊಂದನ್ನು ಹೊರಡಿಸಿದರು. ನಾನು ಈ ಕರಪತ್ರದ ವಿರುದ್ಧ ಪ್ರತಿಭಟಿಸಿದೆ. ಬಂಗಾಳಿಗಳಲ್ಲದವರು, ಅದರಲ್ಲೂ ಆಂಗ್ಲೋ ಇಂಡಿಯನ್ನರಿಗೆ ಇದು ಇಷ್ಟವಾಗಲಿಲ್ಲ. ಈ ಬಗ್ಗೆ ನನಗೂ ಅವರಿಗೂ ತುಂಬಾ ಕಾಲ ಜಗಳ ಮುಂದುವರೆಯಿತು. ದಾಳಿ ದೇಶದ ಒಳಿತಿಗಾಗಿ ನಡೆದದ್ದು. ಸ್ಕೂಲ್ ನಡೆಸುವ ಪಾದ್ರಿಗಳಿಗೆ ಅದನ್ನು ವಿರೋಧಿಸಿ ಕರಪತ್ರ ಹಾಕುವ ಉಸಾಬರಿ ಯಾಕೆ? ಎಂಬುದು ನನ್ನ ಸರಳ ನಿಲುವಾಗಿತ್ತು.


ಮುಂದುವರಿಯುವುದು

[redacted]

ದೊಡ್ಡಪ್ಪ ಕ್ರಾಂತಿಕಾರಿಗಳ ವಿಚಾರಣೆಗೆ ನೇಮಿಸಿದ ಟ್ರಿಬ್ಯೂನಲ್ ನಲ್ಲಿ ಜಜ್ ಆಗಲು ಒಪ್ಪಿದ್ದು ನಮಗೆ ಸ್ವಲ್ಪವೂ ಇಷ್ಟವಾಗಿರಲಿಲ್ಲ. ನಾನು ಮತ್ತು ಸೋದರ ದೇಬಪ್ರಿಯ ಬಸು ಒಂದು ಐಡಿಯಾ ಹಾಕಿದೆವು. ಗುಟ್ಟಾಗಿ ಒಂದು ಬೆದರಿಕೆ ಪತ್ರ ಬರೆಯಲು ನಿರ್ಧರಿಸಿದೆವು ಇಂಗ್ಲೀಷಿನಲ್ಲಿ ಒಂದು ಪತ್ರವನ್ನು ನಾವೇ ಟೈಪ್ ಮಾಡಿ ತಯಾರಿಸಿದೆವು. ಆ ಪತ್ರ ಸರಿಸುಮಾರಾಗಿ ಹೀಗಿತ್ತು:

"ನೀವು ಭಾರಿ ಅನ್ಯಾಯ ಮಾಡುತ್ತಿದ್ದೀರಿ. ನೀವು ಬಂಗಾಳಿಯಾಗಿ ಬಂಗಾಳಿಗಳಿಗೆ ಮೋಸ ಮಾಡುತ್ತಿದ್ದೀರಿ. ದೇಶಭಕ್ತರ ವಿರೋಧಿಗಳ ಜತೆ ಶಾಮೀಲಾಗಿದ್ದೀರಿ.

ಇದು ದೊಡ್ಡ ತಪ್ಪು. ನಿಮ್ಮ ಜೀವಕ್ಕೆ ಅಪಾಯ ಎಚ್ಚರಿಕೆ"



ಈ 'ಬೆದರಿಕೆ' ಪತ್ರ ದೊಡ್ಡಪ್ಪನಿಗೆ ತಲುಪಿದಾಗ, ದೊಡ್ಡ ಗುಲ್ಲಾಯಿತು. ಆಗ ಮನೆಯವರೆಲ್ಲ ಊಟ ಮಾಡುತ್ತಿದ್ದರು. ಅಪ್ಪ ಪಿಸುಮಾತಿನಲ್ಲಿ ಅಮ್ಮನಿಗೆ ಹೇಳುತ್ತಿದ್ದರೂ ನಮಗೆ ಕೇಳಿಸಿತು-ನಾನು ಹೇಳಿದ್ದೆ ಅವನಿಗೆ ಈ ಕೆಲಸ ಬೇಡ ಅಂತ, ಕೇಳಿದನಾ

ರಾಜಕೀಯ ವರದಿ, ವಿಶ್ಲೇಷಣೆಗಳಲ್ಲಿ ವ್ಯಕ್ತಿ ನಿಷ್ಠತೆ - ವಸ್ತುನಿಷ್ಠತೆ



ಜಿ.ಎನ್.ನಾಗರಾಜ್

ಭಾರತದಂತಹ ಬೃಹತ್ ದೇಶದ, ನೂರು ಕೋಟಿ ಜನರ ಬದುಕಿನ ಪ್ರಶ್ನೆಗಳನ್ನೆಲ್ಲಾ ಒತ್ತಟ್ಟಿಗೆ ಸರಿಸಿಬಿಟ್ಟು ಕೇವಲ ಕೆಲವು ವ್ಯಕ್ತಿಗಳ ಪ್ರಶ್ನೆಯನ್ನಾಗಿಸುವ ವ್ಯಕ್ತಿನಿಷ್ಠ ದೃಷ್ಟಿ ಜನಸಮೂಹವನ್ನು ರಂಗ ಸ್ಥಳದಿಂದ ದೂಡಿ ಬಿಡುವ ಹುನ್ನಾರ ನಡೆದಿದೆ. ದುಡಿವ ಜನರೇ ಎಚ್ಚರಾಗಿರಿ, ನಿಮ್ಮನ್ನು ಇತಿಹಾಸದ ಕಸದ ಬುಟ್ಟಿಗೆ ತಳ್ಳುವ ಈ ಕುತಂತ್ರದ ವಿರುದ್ಧ ಜಾಗೃತರಾಗಿರಿ.

ರಾಜ್ಯದ ಯಾವುದೇ ಪತ್ರಿಕೆಯನ್ನು -ಅದು ದಿನಪತ್ರಿಕೆಯಿರಲಿ, ವಾರಪತ್ರಿಕೆಯಿರಲಿ, ಮಾಮೂಲಿ ಪತ್ರಿಕೆಗಳಿರಲಿ, ಪ್ರಗತಿಪರ ಎಂದು ಘೋಷಿಸಿಕೊಂಡ ಪತ್ರಿಕೆಗಳಿರಲಿ - ತೆರೆದುನೋಡಿದರೆ ಅದರ ರಾಜಕೀಯ ವರದಿ, ವಿಶ್ಲೇಷಣೆಗಳೆಲ್ಲಾ ದೇವೇಗೌಡ, ಹೆಗ್ಗಡೆ, ಜೆ.ಎಚ್. ಪಟೇಲ್, ಸಿದ್ಧರಾಮಯ್ಯ, ಈಗೀಗ ಯಡಿಯೂರಪ್ಪ, ಎಸ್.ಎಂ.ಕೃಷ್ಣ ಇವರ ಸುತ್ತ ಗಿರಕಿ ಹೊಡೆಯುತ್ತಿರುತ್ತವೆ. ಇವರ ಮನಸ್ಸನ್ನು, ಚಟುವಟಿಕೆಗಳನ್ನು ತಿಳಿದುಕೊಂಡರೆ ಸಾಕು ಕರ್ನಾಟಕದ ರಾಜಕೀಯ ಅರ್ಥವಾದಂತೆ ಎನ್ನುವ ಭ್ರಮೆ ಈ ವರದಿಗಾರರಲ್ಲಿ ಅಥವಾ ರಾಜಕೀಯ ವಿಶ್ಲೇಷಕರಲ್ಲಿ ತುಂಬಿತುಳುಕಾಡುತ್ತಿರುತ್ತವೆ.

ಅದೇ ರೀತಿ ಇಂದು ಭಾರತದ ಪತ್ರಿಕೆಗಳಲ್ಲಿನ ರಾಜಕೀಯ ವಿಶ್ಲೇಷಣೆ ಸೋನಿಯಾ, ವಾಜಪೇಯಿ, ಅದ್ವಾನಿ, ಶರದ್ ಪವಾರ್, ಮುಲಾಯಂ ಸಿಂಗ್ ಯಾದವ್, ಲಲ್ಲೂ ಪ್ರಸಾದ್ ಯಾದವ್, ಜಯಲಲಿತಾ, ಚಂದ್ರಬಾಬು ನಾಯ್ಡು, ಭಾಳಸಾಹೇಬ್ ಠಾಕ್ರೆ ಎಂಬ ಕೆಲವು ಹೆಸರುಗಳ ಸುತ್ತ ಸುತ್ತುತ್ತದೆ.

ಆಗೊಮ್ಮೆ ಈಗೊಮ್ಮೆ ಜ್ಯೋತಿಬಸು ಹರ್ಕಿಷನ್ ಸಿಂಗ್ ಸುರ್ಜಿತ್ ಕಾಣಿಸಿಕೊಂಡರೂ ಅವರ ಚಳುವಳಿ, ಪಕ್ಷಗಳನ್ನು ಬದಿಗಿರಿಸಿಯೇ ಅವರ ಪ್ರಸ್ತಾಪ ಕೂಡ.

ಕಲಬೆರಕೆ 'ವಿಶ್ಲೇಷಣೆ'

ವರದಿ, ವಿಶ್ಲೇಷಣೆ ಎಂಬ ಪದಗಳನ್ನು ಒಟ್ಟೊಟ್ಟಿಗೇ, ಅವೆರಡೂ ಒಂದೆ ಎಂಬಂತೆ ಈ ಲೇಖನದ ಉದ್ದಕ್ಕೆ ಬಳಸಲಾಗುತ್ತಿದೆ. ಏಕೆಂದರೆ ಇಂದಿನ ಪತ್ರಿಕಾರಂಗದಲ್ಲಿ ವರದಿ ಎಂದು ಕರೆಸಿಕೊಳ್ಳುವ ಬರಹಗಳಲ್ಲಿಯೂ ಒಂದು ವಾಕ್ಯ ವರದಿಯಿದ್ದರೆ 4 ವಾಕ್ಯ ವರದಿಗಾರನ ಅಭಿಪ್ರಾಯ, ಮನೋಲಹರಿಗಳೊಡನೆ ಜೊಡಿಯಾಗಿಯೇ ಬರುತ್ತವೆ. ಹಾಗೆಯೇ ವಿಶ್ಲೇಷಣೆಯೆಂಬುದರಲ್ಲಿಯೂ ಕೂಡ ವರದಿ, ವಿಶ್ಲೇಷಕನ ಮನೋಲಹರಿ ಜೊತೆಗೆ ಕೆಲವೊಮ್ಮೆ ಮಿಂಚುವ ವಿಶ್ಲೇಷಣೆಗಳು ಬೇರೆ ಬೇರೆ ಮಾಡಲಾಗದಷ್ಟು ಬೆರೆತು ಬಿಟ್ಟಿರುತ್ತವೆ. ರಾಗಿ-ಸಾಸಿವೆ, ಅಕ್ಕಿ ಹಾಗೂ ಅಕ್ಕಿಯ ಬಣ್ಣ ಗಾತ್ರದ ಕಲ್ಲು ಕಲಬೆರಕೆಯಾದಂತೆ. ಇಂದು ಮಾರುಕಟ್ಟೆಯಲ್ಲಿ ಸಿಗುವ ಅನೇಕ ವಸ್ತುಗಳು ಕಲಬೆರಕೆಯ ರೂಪದಲ್ಲಿಲ್ಲದೆ ಸಿಗುವುದಿಲ್ಲ ಎಂಬ ಗತಿಯೇ ರಾಜಕೀಯ ವರದಿ, ವಿಶ್ಲೇಷಣೆಗಳಿಗೂ ಬಂದಡರಿದೆ.

ವ್ಯಕ್ತಿಗಳ ಸುತ್ತ ಸುತ್ತುವ ರಾಜಕೀಯ ವರದಿಗಳು ತಮ್ಮ ವರದಿ, ವಿಶ್ಲೇಷಣೆಗಳ ಕೇಂದ್ರ ವ್ಯಕ್ತಿಗಳನ್ನು ನೇರವಾಗಿ ಅಥವ ಪರೋಕ್ಷವಾಗಿ ಹೊಗಳುವ ಇಲ್ಲವೆ ತೆಗಳುವ ಕೆಲಸವನ್ನು ಮಾಡುತ್ತಾರೆ. ಒಬ್ಬನನ್ನು ಹೀರೋ ಮಾಡಬೇಕಾದರೆ ಖಳನಾಯಕನನ್ನು ಸೃಷ್ಟಿಸಲೇಬೇಕು. ಕೆಲವು ಪತ್ರಕರ್ತರಿಗೆ ಎಲ್ಲರೂ ಖಳನಾಯಕರಂತೆಯೇ ಕಾಣುತ್ತಾರೆ. ಇನ್ನು ಕೆಲವು ಪತ್ರಕರ್ತರಿಗೆ ಒಮ್ಮೆ ಇವರು ಹೀರೊ ಅವರು ಖಳನಾಯಕ, ಮತ್ತೊಮ್ಮೆ ಬೇರೊಬ್ಬ ಹೀರೋ ಹೀಗೆ ಅವರ ವಿಶ್ಲೇಷಣೆಗಳೂ ಗಾಳಿ ಬೀಸಿದಂತೆ ಬದಲಾಗುತ್ತಾ ಇರುತ್ತವೆ.

ಒಮ್ಮೆ ಎಲ್ಲ ಪತ್ರಿಕೆ- ಪತ್ರಕರ್ತರಿಂದಲೂ ಶೇಷನ್‌ರನ್ನು ಅಟ್ಟಕ್ಕೇರಿಸಿ ಅವರನ್ನು ಬಿಟ್ಟರೆ ಇನ್ನಿಲ್ಲ ಎಂದು ಇಡಿ ದೇಶಕ್ಕೆ ಸಾರುವ ಸರದಿ. ಹಾಗೆಯೆ ಮತ್ತೊಮ್ಮೆ ಕಿರಣ್‌ಬೇಡಿ ಹಾಗೆಯೇ ರಾಜಕೀಯ ವ್ಯಕ್ತಿಗಳ ಬಗ್ಗೆಯೂ. ಒಮ್ಮೆ ರಾಜೀವ್‌ಗಾಂಧಿ, ಅವರ ಮುಖಛಾಯೆ, ನಡಿಗೆ ಮಾತು, ಎಲ್ಲವೂ ಭೂಷಣ, ಆಗ ಅವರು ಮಿ.ಕ್ಲೀನ್(ಶ್ರೀಮಾನ್ ಸ್ವಚ್ಛ ಪುರುಷ) ಕೆಲವೇ ದಿನಗಳಲ್ಲಿ ಅವರು ಖಳನಾಯಕ.

ಒಮ್ಮೆ ರಾಮಕೃಷ್ಣ ಹೆಗಡೆ, ರಾಜ್ಯದ ಮಾತ್ರವಲ್ಲಾ ಇಡೀ ದೇಶದ ಪತ್ರಿಕೆ, ಮಾಧ್ಯಮಗಳ ಕಣ್ಮಣಿಯಾಗಿ ಮೆರೆದುದನ್ನು ಅದನ್ನು ನಂಬಿ ತಾವೇ ಮುಂದಿನ ಪ್ರಧಾನಿ ಎಂದು ಭ್ರಮಿಸಿದುದನ್ನು ನೆನಪಿಸಿಕೊಳ್ಳೋಣ.

ಆಗ ಇದ್ದಕ್ಕಿದ್ದಂತೆ ವಿ.ಪಿ. ಸಿಂಗ್ ನಡುವೆ ತೂರಿ ಹೀರೋ ಆದರು. ಆಗ ಆ ಕಡೆ ರಾಜೀವ್ ಗಾಂಧಿ ಖಳನಾಯಕರಾದರೆ ಈಕಡೆ ರಾ.ಕೃ.ಹೆಗ್ಗಡೆಯವರನ್ನು ಕೇಳುವವರಿಲ್ಲದಾಯಿತು. ಇದರ ಫಲವಾಗಿ ಏಕೈಕ ಕಾಂಗ್ರೆಸ್ ವಿರೋಧಿ ನಾಯಕನೆಂದು ಮೆರೆಯುತ್ತಿದ್ದ ತಮ್ಮ ಸ್ಥಾನವನ್ನು ಕಸಿದು ಕೊಂಡರೆಂದು ವಿ.ಪಿ. ಸಿಂಗ್ ಹೆಗ್ಗಡೆಯ ಕೋಪತಾಪಗಳಿಗೆ ಗುರಿಯಾದರು - ವಿ.ಪಿ.ಸಿಂಗ್‌ರ ಯಾವ ತಪ್ಪೂ ಇಲ್ಲದೆ.

ಕೇವಲ ಪ್ರೇಕ್ಷಕರು

ಈ ರೀತಿಯ ವ್ಯಕ್ತಿಗತ ರಾಜಕೀಯ ವಿಮರ್ಶೆ ಹಾಗೂ ವರದಿಗಳು ರಾಜ, ಸಾಮ್ರಾಟರ, ನವಾಬ ಬಾದಶಾಹರ ಆಟವೆಂಬಂತೆ ದೇಶದ ಇತಿಹಾಸವನ್ನು ಬಿಂಬಿಸುವ ನಮ್ಮ ಇತಿಹಾಸದ ಅಧ್ಯಯನ ಕ್ರಮದ ಮುಂದುವರಿಕೆಯೇ ಆಗಿದೆ. ಇತಿಹಾಸವೆಂದರೆ ಪುಲಿಕೇಶಿ, ಹರ್ಷ ಅಥವಾ ಮೊಗಲ ಚಕ್ರವರ್ತಿಗಳು ಹಾಗೂ ಶಿವಾಜಿಗಳ ಕಾದಾಟದಂತೆ, ಗಂಗ, ಕಂದಬ, ಹೊಯ್ಸಳ, ರಾಷ್ಟ್ರಕೂಟರ ಗುತ್ತಿಗೆಯೆಂಬಂತೆ ಚಿತ್ರಿಸುವ, ಅಂದು ಜೀವಿಸುತ್ತಿದ್ದ ಜನಸಮುದಾಯಕ್ಕೆ ಈ ಕಾದಾಟದಲ್ಲಿ ಏನೂ ಪಾತ್ರವಿಲ್ಲದೆ, ಹೆಚ್ಚೆಂದರೆ ರಾಜಕೀಯ ರಂಗದ ಮೇಲಿನ ನಾಟಕಕ್ಕೆ ಪ್ರೇಕ್ಷಕರಾಗುವ ಮಟ್ಟಿಗೆ ಮಾತ್ರ ಸೀಮಿತಗೊಳಿಸಿದಂತೆ ಇಂದಿನ ರಾಜಕೀಯವನ್ನೂ ಚಿತ್ರಿಸಲಾಗುತ್ತಿದೆ.

ವಾಜಪೇಯಿ, ಸೋನಿಯ ಗಾಂಧಿಯವರ ಉದಾಹರಣೆಗಳನ್ನೇ ತೆಗೆದುಕೊಳ್ಳೋಣ. ಹಲವು ಪತ್ರಕರ್ತರ ಪ್ರಕಾರ ಅಥವಾ ಅವರು ಕೆಲಸ ಮಾಡುತ್ತಿರುವ ಪತ್ರಿಕೆಗಳು ಜನರಲ್ಲಿ ಬಿತ್ತ ಬೇಕೆಂದಿರುವ ಭಾವನೆಗಳ ಪ್ರಕಾರ ವಾಜಪೇಯಿಯವರು ಬಹಳ ಒಳ್ಳೆಯ, ಸಭ್ಯ ವ್ಯಕ್ತಿ. ರಾಜಕೀಯದಲ್ಲಿ ಹಲವು ದಶಕಗಳ ಕಾಲ ನುರಿತವರು; ವಿದ್ವಾಂಸ, ಕವಿ, ವಾಗ್ಮಿ ಪ್ರಧಾನಿಯಾಗಲು ಅತ್ಯಂತ ಸೂಕ್ತ ವ್ಯಕ್ತಿ. ಇವರಿಗಲ್ಲದೇ ಇನ್ನಾರಿಗೆ ಪ್ರಧಾನಿ ಪದವಿ ದಕ್ಕಬೇಕು! ಇಂತಹ ವ್ಯಕ್ತಿಯನ್ನು ಪ್ರಧಾನಿ ಪಟ್ಟಕ್ಕೆ ಏರಿಸದವರು ಅಥವಾ ಪ್ರಧಾನಿಪಟ್ಟದಿಂದ ಇಳಿಸುವವರು ದ್ರೋಹಿಗಳು. ಇವರಿಗೆ ಸಹಾಯ ಮಾಡದವರು, ಇವರಿಗಾಗಿ ಕಾನೂನುಗಳನ್ನು ತಿರುಚದವರು ಅವರು ರಾಷ್ಟ್ರಪತಿಯೇ ಆಗಲಿ ಚುನಾವಣೆ ಆಯೋಗದವರೇ ಆಗಲಿ ಪ್ರಜಾಪ್ರಭುತ್ವಕ್ಕೆ ವಿರೋಧಿಗಳು. ಸಂಯುಕ್ತ ಕರ್ನಾಟಕ, ಉದಯವಾಣಿಗಳ ಎಂ.ವಿ. ಕಾಮತ್, ತರಂಗದಲ್ಲಿ ಬರುವ ಟಿ.ವಿ.ಆರ್. ಶೆಣೈ, ಕನ್ನಡ ಪ್ರಭದಲ್ಲಿ ಬರುವ ಗುರುಮೂರ್ತಿ ಜಾರ್ಜ್, ವಾಜಪೇಯಿಯವರ ವಿರೋಧಿಗಳ ಬಗ್ಗೆ ಅವರ ಬರಹಗಳನ್ನು ನೋಡಿ. ಪ್ರತಿಯೊಂದು ಬರಹವೂ ವಾಜಪೇಯಿಯವರ ವಿರೋಧಿಗಳ ಬಗ್ಗೆ ವಿಷವನ್ನೇ ಕಕ್ಕುತ್ತವೆ. ಇವು ಕೇವಲ ಕೆಲವು ಉದಾಹರಣೆಗಳು.

ಸೋನಿಯಾ ಬಗ್ಗೆ ಕೆಲವು ವಾಕ್ಯಗಳನ್ನು ನೋಡಿ - *"ಆಕೆಗೆ ದುಃಖದಿಂದ ಬಂದಿರುವ ಜಾಣತನ, ಒಳನೋಟ, ಮಾನವೀಯತೆ ನಮ್ಮ ಈಗಿನ ಯಾವ ರಾಜಕೀಯ ಧುರೀಣರಲ್ಲೂ ಇಲ್ಲ. ಚಂದ್ರ ಶೇಖರ್ ಗಬ್ಬೆದ್ದು ಹೋಗುವುದನ್ನು ನೋಡಿದರೆ ಈ ದೇಶ ಎಷ್ಟು ನೀಚವಾಗಿದೆ ಎಂದು ತಿಳಿಯುತ್ತದೆ. ಸೋನಿಯಾ ಈ ದೇಶಕ್ಕೆ ಪ್ರಧಾನಿಯಾದರೆ ಹೊಸಗಾಳಿ ಬೀಸಿದಂತೆ ಆಗಬಹುದು; ಹೊಸ ಚೈತನ್ಯ ನಮ್ಮ ಜನಕ್ಕೆ ಬರಬಹುದು. ಸೋನಿಯಾಗೆ ಶಿಸ್ತು ಶುದ್ಧತೆ, ನಿಷ್ಠುರತೆ, ಸಹಬಾಳ್ವೆ ಹೇಳಿ ಕೊಟ್ಟವರು ಇಂದಿರಾ. ಭಾರತದ ಪ್ರಜೆಯಾಗಿ, ಇಂದಿರಾ ಸೊಸೆಯಾಗಿ ರಾಜಕೀಯದ ಜಟಿಲತೆ ನೋಡಿ ಬೆಳೆದವರು"*-ಲಂಕೇಶ್ ಪತ್ರಿಕೆಯ ಎರಡು ಸಂಚಿಕೆಗಳಿಂದ ಈ ಮಾತುಗಳನ್ನು ಉಲ್ಲೇಖಿಸಲಾಗಿದೆ.

ಸೋನಿಯಾ ವಿರುದ್ಧದ ವಾದಗಳನ್ನು ನೋಡಿ - *"ಕಾಂಗ್ರೆಸ್ ಪ್ರದರ್ಶನದ ಗೊಂಬೆಯಾಗಲು ಅವರಿಗಿರುವ ಏಕ ಮಾತ್ರ ಅರ್ಹತೆಯೆಂದರೆ ಮೂರು ದಶಕಗಳ ಹಿಂದೆ ಆಕೆ ರಾಜೀವ್ ಗಾಂಧಿಯವರ ಕಣ್ಸೆಳೆದುದು ಮಾತ್ರ. ಆಕೆ ಓರ್ವ ವಿದೇಶಿ ಎಂದು ನನ್ನ ಅಂತರಾತ್ಮವ ಹೇಳುತ್ತದೆ. ಒಂದು ವೇಳೆ ವಿದೇಶಿ ಮೂಲದ ಪ್ರಶ್ನೆ ಇಲ್ಲವಾದರೂ ಆಕೆ ಪ್ರಧಾನಿ ಯಾಗಲು ಯೋಗ್ಯತೆ ಉಳ್ಳವರೇ? ಯಾವುದೇ ಭಾರತೀಯ ಭಾಷೆಯನ್ನು ಓದಲಾರದ, ಬರೆಯಲಾರದ, ಸಲೀಸಾಗಿ ಮಾತನಾಡಲಾರದ ಮತ್ತು ಇಂಗ್ಲಿಷ್ ಮಾತನಾಡುವಾಗಲೂ ಎಡವುವ ವ್ಯಕ್ತಿಯೇ?"* (ಇದು ತರಂಗದಲ್ಲಿ ಬಂದ ಶೆಣೈ ಉವಾಚ)

ಅಂದು ಕುರುಕ್ಷೇತ್ರದಲ್ಲಿ
ಇಂದು ಚುನಾವಣೆಗಳಲ್ಲಿ

ಹೀಗೆ ಪುಂಖಾನುಪುಂಖವಾಗಿ ಬರುತ್ತಿರುವ ವಾದವಿವಾದಗಳಲ್ಲಿ ಪ್ರತಿ ದಿನ, ಪ್ರತಿವಾರ ಬರೆಯಲಾಗುತ್ತಿರುವ ಟನ್ ಗಟ್ಟಳೆ ಬರಹಗಳಲ್ಲಿಯ ಮೂಲ ಚರ್ಚೆ ಇಷ್ಟೆ - ವಾಜಪೇಯಿ ಅಥವಾ ಸೋನಿಯಾ ಯಾರು ಮುಂದಿನ ಪ್ರಧಾನಿಯಾಗಬೇಕು, ಭಾರತವನ್ನು ಆಳಬೇಕು? ಹಿಂದೆ ಇದು ಕುರುಕ್ಷೇತ್ರದಲ್ಲಿ ಪಾಣಿಪತ್‌ದಲ್ಲಿ, ತಾಳೀಕೋಟೆಯಲ್ಲಿ ತೀರ್ಮಾನವಾಗುತ್ತಿತ್ತು. ಇಂದು ಅದು ಚುನಾವಣೆಯಲ್ಲಿ 1999ರ ಸೆಪ್ಟಂಬರ್-ಅಕ್ಟೋಬರ್‌ನಲ್ಲಿ ತೀರ್ಮಾನವಾಗಬೇಕು.

ಈ ಎಲ್ಲಾ ಟನ್‌ಗಟ್ಟಳೆ ಬರಹಗಳಲ್ಲಿ ವಾಜಪೇಯಿ ಯಾವ ಪಕ್ಷದವರು, ಅದು ಏನನ್ನು ಪ್ರತಿನಿಧಿಸುತ್ತದೆ, ಅವರು ಹಾಗೂ ಅವರ ಪಕ್ಷ ದೇಶದ ಜನಕ್ಕಾಗಿ, ದೇಶಕ್ಕಾಗಿ ಏನು ಮಾಡಿದ್ದಾರೆ, ಏನು ಮಾಡುತ್ತೇನೆಂದು ಹೇಳುತ್ತಿದ್ದಾರೆ? ಅದರಲ್ಲಿ ಜನ ಸಮುದಾಯದ ಯಾವ ವಿಭಾಗಕ್ಕೆ ಎಷ್ಟು ಒಳ್ಳೆಯದಾಗಿದೆ, ಎಷ್ಟು ಒಳ್ಳೆಯದಾಗಬಹುದು, ಅವರು ಪೋಖರನ್‌ನಲ್ಲಿ ಅಣುಬಾಂಬ್ ಸಿಡಿಸಿದ್ದರಿಂದ ದೇಶದ ಜನಕ್ಕೆ, ಭಾರತ ಉಪಖಂಡ (ಭಾರತ, ಪಾಕಿಸ್ತಾನ ಬಂಗ್ಲಾ ದೇಶ ಸೇರಿ) ದ ಜನತೆಗೆ ಒಳ್ಳೆಯದಾಯಿತೆ, ಹಾನಿಯಾಯಿತೆ, ಬೆಲೆ ಏರಿಕೆಯ, ಬಡತನದ, ನಿರುದ್ಯೋಗದ, ಅಭಿವೃದ್ಧಿಯ ಪ್ರಶ್ನೆಗಳೇನು? ದೇಶದ ಸ್ವಾತಂತ್ರ್ಯದ, ಅಮೇರಿಕಾದ ವಿಶ್ವವಾಣಿಜ್ಯ ಸಂಸ್ಥೆಯ ಒತ್ತಡದ ಪ್ರಶ್ನೆ ಏನು? ಇವೆಲ್ಲದರಿಂದ ಇವರು ಯಾವ ವರ್ಗವನ್ನು ಪ್ರತಿನಿಧಿಸುತ್ತಾರೆ? ಅವರು ಆಡಳಿತದಲ್ಲಿ ಯಾರ ಹಿತವನ್ನು ಸಾಧಿಸಿದರು ಯಾರ ಹಿತವನ್ನು ಸಾಧಿಸುವುದಕ್ಕಾಗಿ ಅಧಿಕಾರಕ್ಕೆ ಮತ್ತೆ ಬರಬೇಕೆನ್ನುತ್ತಾರೆ? ಕೈಗಾರಿಕೆಗಳ, ಮಾಲೀಕರ, ಪರವಾಗಿಯೇ? ರೈತ ಕಾರ್ಮಿಕರ ಪರವಾಗಿಯೆ? ಕೈಗಾರಿಕಾ ಮಾಲೀಕರಲ್ಲಿಯೂ ವಿದೇಶಿ ಮಾಲೀಕರ, ಬಹುರಾಷ್ಟ್ರೀಯ ಕಂಪನಿಗಳ ಪರವಾಗಿಯೇ? ನಮ್ಮ ದೇಶದ ಕೈಗಾರಿಕಾ ಮಾಲೀಕರ ಪರವಾಗಿಯೇ? ನಮ್ಮ ದೇಶದ ಕೈಗಾರಿಕಾ ಮಾಲೀಕರಲ್ಲಿಯೂ ದೊಡ್ಡ ದೊಡ್ಡ ಗುತ್ತೇದಾರಿ ಕಂಪನಿಗಳ ಪರವಾಗಿಯೋ ಸಣ್ಣ ಕೈಗಾರಿಕಾ ಮಾಲೀಕರ ಪರವಾಗಿಯೆ? ಇನ್ನು ಭಾಷೆ ಸಂಸ್ಕೃತಿ, ಶಿಕ್ಷಣ, ಆರೋಗ್ಯ ಗ್ರಾಮೀಣ ಅಭಿವೃದ್ಧಿಯ ಪ್ರಶ್ನೆಗಳಲ್ಲಿ ಇವರು ಮಾಡಿದ್ದೇನು ಹೇಳುವುದೇನು? - ಈ ಪ್ರಶ್ನೆಗಳನ್ನು ಗೌಣವಾಗಿಸುವ ಪ್ರಯತ್ನ ನಡೆದಿದೆ.

ಅದೇ ರೀತಿ ಸೋನಿಯಾ ಗಾಂಧಿಯವರ ಬಗ್ಗೆಯೂ ಕೂಡ ಅವರು ಯಾವ ಪಕ್ಷದವರು? ಅವರ ಪಕ್ಷ ಇಲ್ಲಿಯವರೆಗೆ ಯಾರ ಪರವಾಗಿ ಕೆಲಸ ಮಾಡಿದೆ? ಅವರು ಹಾಗೂ ಅವರ ಪಕ್ಷದ ನಿಲುವು ಧೋರಣೆಗಳೇನು ಎಂಬ ಪ್ರಶ್ನೆಗಳನ್ನು ಎತ್ತುತ್ತಿಲ್ಲ. 100 ಕೋಟಿಗೂ ಮೀರಿದ ಜನರ ಬದುಕಿನ ಪ್ರಶ್ನೆಯನ್ನು ಕೇವಲ ಅವರ ಅಂದ ಚೆಂದ, ಉಡುಗೆ, ತೊಡುಗೆ, ಮಾತಿನ ಶೈಲಿ, ಹುಟ್ಟು, ಬೆಳೆವಣಿಗೆಗಳ ಮಾತನ್ನಾಗಿ ಕೇವಲ ಇಬ್ಬರು ವ್ಯಕ್ತಿಗಳ ಪ್ರಶ್ನೆಯನ್ನಾಗಿ ಬಿಂಬಿಸಲಾಗುತ್ತಿದೆ. ಇನ್ನು ಯಾದವ್‌ಗಳು, ಕರುಣಾನಿಧಿ-ಜಯಲಲಿತಾ, ಚಂದ್ರ ಬಾಬು ನಾಯುಡು, ಫರೂಕ್ ಅಬ್ದುಲ್ಲಾಗಳು, ಬಾಳ ಠಾಕ್ರೆಗಳು ದೇಶವೆಂಬ ರಂಗಭೂಮಿಯ ಮೇಲೆ ಪೋಷಕ ಪಾತ್ರಗಳು ಅಥವಾ ಕೆಲವೊಮ್ಮೆ ಇದ್ದಕ್ಕಿದ್ದಂತೆ ಪ್ರಮುಖವಾಗಿ ಬಿಡುವ ಚಿಲ್ಲರೆ ಪಾತ್ರಗಳು, ರಾಜ್ಯಗಳ ರಂಗಸ್ಥಲ ಬೇರೆಯೇ. ಅಲ್ಲಿನ ಪಾತ್ರಧಾರಿಗಳು ಕೂಡ ಬೇರೆ.

ಉತ್ತರ ಸಿಗದ ಪ್ರಶ್ನೆಗಳು

ಹಾಗಾದರೆ ಪ್ರಾದೇಶಿಕ ಪಕ್ಷಗಳು ಹುಟ್ಟಿಕೊಳ್ಳಲು ಕಾರಣವೇನು? ಜನ ದಶಕಗಳ ಕಾಲ ಈ ಪಕ್ಷಗಳಿಗೆ ಮತ ನೀಡಿದ್ದೇಕೆ? ಈಗ ಹಲವು ಪ್ರಾದೇಶಿಕ ಪಕ್ಷಗಳೂ ಒಡೆಯುತ್ತಿರಲು ಕಾರಣ ವೇನು? ಎಂಬ ಪ್ರಶ್ನೆಗಳು ಏಳುತ್ತವೆ.

ಇವುಗಳ ಜೊತೆಗೆ ಕಾಂಗ್ರೆಸ್ ಗಳಿಸಿದ್ದ ಜನ ಬೆಂಬಲವನ್ನು ಕಳೆದು ಕೊಂಡದ್ದೇಕೆ? ಇದು ಕೂಡ ಈ ಇಂದಿರಾ ಗಾಂಧಿ, ರಾಜೀವ್‌ಗಾಂಧಿ ಇಲ್ಲ ಎನ್ನುವ ಕಾರಣಕ್ಕಾಗಿಯೆ?

ಅಲ್ಪ ಸಂಖ್ಯಾತರು, ದಲಿತರು, ಹಿಂದುಳಿದ ಜಾತಿಯವರು ಕಾಂಗ್ರೆಸ್‌ನಿಂದ ದೂರ ಸರಿಯುವಲ್ಲಿ ಆ ಪಕ್ಷದ ನೀತಿಗಳು, ಕೆಲಸ ವಹಿಸಿದ ಪಾತ್ರ ಈಗ ಮತ್ತೆ ಅವರ ಬೆಂಬಲಗಳಿಸಲು ಈ ನೀತಿ ಧೋರಣೆಗಳ ಮಾತಿನ ಅಗತ್ಯದ ಪ್ರಶ್ನೆಗಳು ಇನ್ನೂ ಜೀವಂತವಾಗಿವೆ. ಜನರ ದೃಷ್ಟಿಯಿಂದ ದುಡಿಯುವ ವರ್ಗದ ದೃಷ್ಟಿಯಿಂದ ನೋಡಿದಾಗ ಮಾತ್ರ ಜನತೆಯ ಮುಖ್ಯ ಪಾತ್ರ ಧಾರಿಗಳು ಎಂದು ಭಾವಿಸಿದಾಗ ಮಾತ್ರ ಈ ಪ್ರಶ್ನೆಗಳು ಏಳುತ್ತವೆ. ಉತ್ತರವನ್ನು ನೀಡ ಬೇಕಾದ ಸವಾಲು ಎದುರಾಗುತ್ತದೆ.

ಹಾಗೆಯೇ ಬಿಜೆಪಿ ಉತ್ತರ ಭಾರತದ ಹಿಂದೀ ರಾಜ್ಯಗಳಲ್ಲಿ ಮಾತ್ರ ಭದ್ರವಾಗಿ ತಳವೂರಲು ಕಾರಣ ವೇನು? ಆ ಪ್ರದೇಶಗಳ ಸಂಸ್ಕೃತಿಯ, ಚಿಂತನೆಯ ರಾಜಕೀಯ ಪ್ರಜ್ಞೆಯ ಹಿಂದುಳಿಯುವಿಕೆಯೆ ಕಾರಣವೇ?


ಕಾಂಗ್ರೆಸ್ ಹಾಗೂ ಬಿಜೆಪಿಯೇತರ ಪಕ್ಷಗಳು ಹಾಗೂ ಪ್ರಾದೇಶಿಕ ಪಕ್ಷಗಳು ವಿವಿಧ ಭಾಷಾ ಸಂಸ್ಕೃತಿಗಳು ಸಮೃದ್ಧವಾಗಿ ಬೆಳೆದಿರುವ ಪ್ರದೇಶಗಳಲ್ಲಿಯೇ ಏಕೆ ಬೆಳೆದಿವೆ? ಈ ಪ್ರದೇಶಗಳ ಸಾಮಾಜಿಕ ಆರ್ಥಿಕ ಸಂರಚನೆಯಲ್ಲಿ ಈ ಪ್ರಶ್ನೆಯ ಉತ್ತರ ಅಡಗಿಲ್ಲವೇ? ಎಂಬ ಪ್ರಶ್ನೆಗಳೂ ಏಳುತ್ತವೆ.

ಈ ಪ್ರಶ್ನೆಗಳನ್ನೆಲ್ಲಾ ಒತ್ತಟ್ಟಿಗೆ ಸರಿಸಿ ಬಿಡುವ ಕೇವಲ ಇಬ್ಬರು ಅಥವಾ ಕೆಲವು ವ್ಯಕ್ತಿಗಳ ಪ್ರಶ್ನೆಯನ್ನಾಗಿಸುವ ವ್ಯಕ್ತಿ ನಿಷ್ಠ ದೃಷ್ಟಿ, ಇಡೀ ಸಮಾಜ ಹಾಗೂ ಜನ ಸಮುದಾಯದ ದೃಷ್ಟಿಯಿಂದ ರಾಜಕೀಯವನ್ನು ವೈಜ್ಞಾನಿಕವಾಗಿ ವಿಶ್ಲೇಷಿಸುವ ಮಾರ್ಗವನ್ನು ತುಳಿಯ ಬಯಸುತ್ತದೆ.

ಆ ಮೂಲಕ ಜನಸಮುದಾಯವನ್ನು ರಂಗ ಸ್ಥಳದಿಂದ ದೂಡಿಬಿಡುವ ಹುನ್ನಾರ ನಡೆದಿದೆ. ದುಡಿವ ಜನರೇ ಎಚ್ಚರಾಗಿರಿ ನಿಮ್ಮನ್ನು ಇತಿಹಾಸದ ಕಸದ ಬುಟ್ಟಿಗೆ ತಳ್ಳುವ ಈ ಕುತಂತ್ರದ ವಿರುದ್ಧ ಜಾಗೃತರಾಗಿರಿ. ○

ಬರದ ನಾಡಿಗೆ ಹಸಿರು ತರಲು ರೈತರ ಹೋರಾಟ

ಗಂಡೋರಿ ನಾಲಾ ಯೋಜನೆ ಹೋರಾಟ



ಗುಲ್ಬರ್ಗ ಜಿಲ್ಲೆ ಇಂದೂ ಕೂಡಾ ಬರದ ನಾಡಾಗಿಯೇ ಉಳಿದಿದೆ. ಕೃಷ್ಣಾ ಕೊಳ್ಳದಲ್ಲಿಯ ಕರ್ನಾಟಕದ ಪಾಲಿನ ನೀರನ್ನು ಬಳಸಿಕೊಳ್ಳಲು ಆಗದಿರುವುದು ಹಾಗೂ ನೀರಾವರಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಾಕಷ್ಟು ಆದ್ಯತೆ ನೀಡದಿರುವುದೇ ಇದಕ್ಕೆ ಕಾರಣ ಎಂದು ಎಲ್ಲರೂ ಒಪ್ಪುವ ಸಂಗತಿ.

ಈ ಜಿಲ್ಲೆ ಅತಿ ಹೆಚ್ಚು ಸಂಖ್ಯೆಯ ಕೃಷಿ ಕೂಲಿಕಾರರನ್ನು ಪಡೆದಿರುವ ಜಿಲ್ಲೆ ಕೂಡಾ. ಅದರಲ್ಲೂ ಮಹಿಳಾ ಕೂಲಿಕಾರರ ಪ್ರಮಾಣ ಇನ್ನೂ ಹೆಚ್ಚು. ನೀರಾವರಿ ಸೌಲಭ್ಯವಿಲ್ಲದ್ದರಿಂದ ಮುಂಬೈ ಕಡೆ ಗುಳೆ ಹೋಗಬೇಕಾದ ಪರಿಸ್ಥಿತಿ. ಕೆಲವರಂತೂ ಅಲ್ಲೇ ಕೂಲಿ-ನಾಲಿ ಮಾಡಿಕೊಂಡು ಕೊಳಗೇರಿಗಳಲ್ಲಿ ನೆಲೆಸಿದ್ದಾರೆ. ನೀರಾವರಿ ಸೌಲಭ್ಯಗಳನ್ನು ಕಲ್ಪಿಸಲು ಇರುವ ಅವಕಾಶಗಳನ್ನು ಬಳಸಿಕೊಂಡಿದ್ದರೆ ಇಂತಹ ಪರಿಸ್ಥಿತಿ ಬರುತ್ತಿರಲಿಲ್ಲ. ಈ ಪ್ರದೇಶದ ಅಭಿವೃದ್ಧಿಯೂ ಆಗುತ್ತಿತ್ತು. ಈ ಜನಗಳಿಗೆ ಕೆಲಸವೂ ದೊರೆಯುತ್ತಿತ್ತು. ಬೆಣ್ಣೆ ತೊರೆ, ಅಮರ್ಜಾ, ಮುಲ್ಲಾಮರಿ ನೀರಾವರಿ ಯೋಜನೆಗಳ ಕೆಲಸ ಪ್ರಾರಂಭಿಸಿ 30 ವರ್ಷಗಳಾದರೂ ರೈತರ ಭೂಮಿ ನೀರು ಕಂಡಿಲ್ಲ. ಭೀಮಾ ಹರಿವು, ಭೀಮಾ ಏತ ನೀರಾವರಿ, ಕಾಗಿಣಾ,ಕಮಲಾವತಿ ಯೋಜನೆಗಳು ಇನ್ನೂ ಆರಂಭವೇ ಆಗಿಲ್ಲ.



ಗಂಡೋರಿ ನಾಲಾಯೋಜನೆ 1993 ರಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ನಡೆದ ಹೋರಾಟದ ಒತ್ತಡದಿಂದ ಆರಂಭವಾದದ್ದು. ಆದರೆ ಈಗಲೂ ಸರಕಾರದ ದಿವ್ಯ ನಿರ್ಲಕ್ಷ್ಯಕ್ಕೆ ಒಳಗಾಗಿರುವ ಯೋಜನೆ. ಇತ್ತೀಚೆಗೆ ಮತ್ತೆ ರೈತ ಸಂಘದ ನೇತೃತ್ವದಲ್ಲಿ ಹೋರಾಟ ನಡೆದು ಕೆಲವು ಗಮನಾರ್ಹ ಮುನ್ನಡೆ ಸಾಧಿಸಿದೆ. 1993 ರಲ್ಲಿ ರಚನೆಗೊಂಡ ರೈತರ ಹೋರಾಟ ಸಮಿತಿಯ ಕಾರ್ಯದರ್ಶಿ ಹಾಗೂ ಈಗ ಕರ್ನಾಟಕ ಪ್ರಾಂತ ರೈತ ಸಂಘದ ಅಧ್ಯಕ್ಷರಾಗಿರುವ ಮಾರುತಿ ಮಾನ್ಪಡೆಯವರು 'ಐಕ್ಯರಂಗ'ಕ್ಕೆ ಈ ಹೋರಾಟವನ್ನು ಕುರಿತಂತೆ ನೀಡಿರುವ ಸಂದರ್ಶನದಲ್ಲಿ ಒದಗಿಸಿದ ಮಾಹಿತಿಗಳನ್ನು ಈ ಮುಂದೆ ಕೊಡಲಾಗಿದೆ.

ಗಂಡೋರಿ ನಾಲಾ ಯೋಜನೆ ಒಂದು ಮಧ್ಯಮ ನೀರಾವರಿ ಯೋಜನೆ. 2.16 ಟಿ.ಎಂ.ಸಿ. ನೀರನ್ನು ಬಳಸಿಕೊಂಡು ಜಿಲ್ಲೆಯ ಗುಲ್ಬರ್ಗ ಮತ್ತು ಚಿತ್ತಾಪುರ ತಾಲ್ಲೂಕಿನ 23 ಸಾವಿರ ಎಕರೆಗೆ ನೀರುಣಿಸಬಲ್ಲ ಯೋಜನೆ. ಕಮಲಾಪುರ ವಿಧಾನಸಭಾ ಕ್ಷೇತ್ರದ ಏಕೈಕ ನೀರಾವರಿ ಯೋಜನೆಯಿದು.

ಕಮಲಾಪುರ ಕ್ಷೇತ್ರದ 12 ಹಳ್ಳಿಗಳ 12 ಸಾವಿರ ಎಕರೆಗಳಿಗೆ ಹಾಗೂ ಚಿತ್ತಾಪುರ ಕ್ಷೇತ್ರದ 12 ಹಳ್ಳಿಗಳ 11 ಸಾವಿರ ಎಕರೆಗಳಿಗೆ ಇದರಿಂದ ಉಪಯೋಗ ಸಿಗುವುದಲ್ಲದೆ ಕಮಲಾಪುರ ಹಾಗೂ ಮಹಂಗಾವ್‌ನ ಗ್ರಾಮಗಳ ಕುಡಿಯುವ ನೀರಿನ ಕೊರತೆಯನ್ನು ಇದು ನೀಗಿಸಬಲ್ಲದು - ಸುಮಾರು 16 ಸಾವಿರ ಜನಗಳಿಗೆ ಕುಡಿಯುವ ನೀರು ಪೂರೈಸಲು ಇದರಿಂದ ಸಾಧ್ಯವಾಗುತ್ತದೆ. ಬಚಾವತ್ ತೀರ್ಪಿನಂತೆ 2000 ಇಸ್ವಿಯೊಳಗೆ ಕೃಷ್ಣಾ ನದಿ ಕಣಿವೆಯ ನೀರಿನ ಉಪಯೋಗವನ್ನು ಕರ್ನಾಟಕ ಮಾಡಿಕೊಳ್ಳಬೇಕಾಗಿದೆ. ಇಲ್ಲವಾದರೆ ಇವನ್ನೆಲ್ಲಾ ಕಳೆದುಕೊಳ್ಳುವ ಅಪಾಯವಿದೆ.

ಇದಲ್ಲದೆ ಕಲ್ಬುರ್ಗಿಯಿಂದ ಕೇವಲ 25. ಕಿ.ಮಿ. ದೂರದಲ್ಲಿರುವ ಈ ಸ್ಥಳವನ್ನು ನೈಸರ್ಗಿಕ ಪ್ರೇಕ್ಷಣೀಯ ಸ್ಥಳವಾಗಿ ಅಭಿವೃದ್ಧಿ ಪಡಿಸುವ ಅವಕಾಶಗಳೂ ಬಹಳ ಇವೆ.

ಹೋರಾಟದಿಂದಲೇ ಆರಂಭ

ಈ ಯೋಜನೆ ಆರಂಭವಾದದ್ದೇ ರೈತರ ಹೋರಾಟದಿಂದ. 1993 ರಲ್ಲಿ ಹೋರಾಟ ಸಮಿತಿ ರಚಿಸಿಕೊಂಡು ನಡೆಸಿದ ಚಳುವಳಿ ಪೋಲೀಸರ ಮಧ್ಯಪ್ರವೇಶವನ್ನು ಎದುರಿಸಿ ಆಗಿನ ನೀರಾವರಿ ಸಚಿವ ಎಸ್.ಎಂ.ಕೃಷ್ಣರ ಮೇಲೆ ತಂದ ಒತ್ತಡದಿಂದಾಗಿ ಈ ಯೋಜನೆ ಜಾರಿಗೆ ಬಂತು.

1993 ರಲ್ಲಿ ಇದರ ಅಂದಾಜು ಯೋಜನಾ ವೆಚ್ಚ 66 ಕೋಟಿ. ರೂ. ಆದರೆ ಈ ಒಂದು ವರ್ಷಗಳಲ್ಲಿ ಖರ್ಚು ಮಾಡಿದ್ದು ಕೇವಲ 6 ಕೋಟಿ ರೂ. ಮುಳುಗಡೆ ಪ್ರದೇಶವಾದ ದಮ್ಮೂರು - ಬೆಳಕೋಟಾ ಗ್ರಾಮಗಳ ರೈತರಿಗೆ ಪರಿಹಾರ ಹಣವನ್ನಂತೂ ಕೊಟ್ಟೇ ಇಲ್ಲ. (ವಿಳಂಬದಿಂದಾಗಿ ಈಗ ಇದರ ಅಂದಾಜು ವೆಚ್ಚ 112 ಕೋಟಿ ರೂ. ಗೇರಿದೆ)

ಈ ಯೋಜನೆಯಲ್ಲಿ ನಿರ್ಲಕ್ಷಿಸಿದ ಇನ್ನೊಂದು ಅಂಶವೆಂದರೆ ಮುಳುಗಡೆಯಾಗುವ ಗ್ರಾಮಗಳ ಭೂಮಿ, ಮನೆಗಳಿಗೆ ಪುನರ್ವಸತಿ ಕಲ್ಪಿಸುವ ಕೆಲಸ. ಇದಕ್ಕೆ ಕನಿಷ್ಠ 20 ಕೋಟಿ ರೂ.ಗಳು ಬೇಕು. ಈ ವರ್ಷ ಇದಕ್ಕೆ ಕೊಟ್ಟದ್ದು ಕೇವಲ 50 ಲಕ್ಷ ರೂ. ಮುಳುಗಡೆ ಪ್ರದೇಶದ ಪುನರ್ವಸತಿ ಸಮಿತಿಯ ಸಭೆ ಕಳೆದ ಅಕ್ಟೋಬರ್ 28 ರ ನಂತರ ಇದುವರೆಗೆ ನಡೆದೇ ಇಲ್ಲ. ಇವೆಲ್ಲದರಿಂದ ಗಾಬರಿಗೊಂಡ ಮುಳುಗಡೆ ಪ್ರದೇಶದ ಜನರು ಯೋಜನಾ ಕೆಲಸ ಸ್ಥಗಿತಗೊಳಿಸಿದರು. ಕಳೆದ ತಿಂಗಳು ಭಾರಿ ನೀರಾವರಿ ಸಚಿವ ನಾಗೇಗೌಡರು ಇಲ್ಲಿಗೆ ಭೇಟಿ ನೀಡಿದರು. ಆದರೆ ಅವರಿಂದಲೂ ನೀರಾವರಿಗೆ ಹಣ ನೀಡುವ ಭರವಸೆ ಸಿಗಲಿಲ್ಲ. ಜಿಲ್ಲಾ ಉಸ್ತುವಾರಿ ಸಚಿವರಿಂದಲೂ ಏನೂ ಭರವಸೆ ಸಿಗಲಿಲ್ಲ.

ಬಿಜೆಪಿ ಶಾಸಕ ಏನು ಮಾಡುತ್ತಿದ್ದಾರೆ?

ಎಲ್ಲಕ್ಕಿಂತ ಮುಖ್ಯವಾಗಿ ಕಮಲಾಪುರದ ಬಿಜೆಪಿ ಶಾಸಕ ತನ್ನ ಕ್ಷೇತ್ರದ ಈ ಪ್ರಮುಖ ನೀರಾವರಿ ಯೋಜನೆಗೆ ಸರಕಾರದಿಂದ ಹಣ ತರುವಲ್ಲಿ ಸಂಪೂರ್ಣ ವಿಫಲಗೊಂಡಿದ್ದಾರೆ. 'ಸಮೃದ್ಧ ಕರ್ನಾಟಕ'ದ ಬೊಬ್ಬೆ ಹಾಕುವ ಈ ಪಕ್ಷದ ನಿಜ ಸ್ವರೂಪ ಇದರಿಂದ ಸ್ಪಷ್ಟವಾಗುತ್ತದೆ. ಕಳೆದ ನಾಲ್ಕೂವರೆ ವರ್ಷಗಳಲ್ಲಿ ಈ ನಿಟ್ಟಿನಲ್ಲಿ ಬಿಜೆಪಿ ಶಾಸಕ ಏನೂ ಮಾಡಲೂ ಅಸಮರ್ಥರಾಗಿದ್ದಾರೆಯಷ್ಟೇ ಅಲ್ಲ, ಗಂಡೋರಿ ನಾಲಾ ಯೋಜನೆಯಿಂದ 4 ಕೋಟಿ ರೂ.ಗಳನ್ನು ಬೇರೆ ಯೋಜನೆಗೆ ವರ್ಗಾವಣೆ ಮಾಡಿದಾಗ ಪ್ರತಿಭಟನೆಯನ್ನೂ ಮಾಡಲಿಲ್ಲ.

ಇಂತಹ ನಿರ್ಲಕ್ಷವಾದರೂ ಏಕೆ?

ಈ ಪ್ರಶ್ನೆ ಜನ-ಪರವಾಗಿ ಯೋಚಿಸುವ ಎಲ್ಲರಲ್ಲೂ ಸಹಜವಾಗಿಯೇ ಏಳುತ್ತದೆ. ಇದಕ್ಕೆ ಮುಖ್ಯ ಕಾರಣ ಐ.ಎಂ.ಎಫ್. ಮತ್ತು ವಿಶ್ವಬ್ಯಾಂಕ್ ಆದೇಶಗಳನ್ನು ಶಿರಸಾವಹಿಸುವ ಸರ್ಕಾರದ ನೀತಿಗಳೇ ಎನ್ನುತ್ತಾರೆ ಮಾರುತಿ ಮಾನ್ಪಡೆಯವರು. ನೀರಾವರಿಯಂತಹ ಸಾರ್ವಜನಿಕ ಕೆಲಸಗಳ ಜವಾಬ್ದಾರಿಯನ್ನು ಸರಕಾರ ವಹಿಸಬೇಕಾಗಿಲ್ಲ, ಆರ್ಥಿಕ ಚಟುವಟಿಕೆಗಳನ್ನೆಲ್ಲಾ ಖಾಸಗಿಯವರಿಗೆ ಬಿಡಬೇಕು ಎಂಬ ಈ ಐಎಂಎಫ್-ವಿಶ್ವಬ್ಯಾಂಕ್ ತತ್ವವನ್ನು ಅಂಗೀಕರಿಸಿರುವ ಈ ಬಂಡವಾಳಶಾಹಿ - ಭೂಮಾಲಕ ಪಕ್ಷಗಳ ಮುಖಂಡರ ವರ್ತನೆಗಳನ್ನು ಈ ಬೆಳಕಿನಲ್ಲಿ ಕಾಣಬೇಕಾಗುತ್ತದೆ. ಕೃಷ್ಣಾ ಕಣಿವೆ ಜಲಭಾಗ್ಯ ನಿಗಮ ಈ ನಿಟ್ಟಿನಲ್ಲಿನ ಒಂದು ಪ್ರಯತ್ನ. ಅದು ನಿರೀಕ್ಷಿತ ಮಟ್ಟದಲ್ಲಿ ಆಗಲಿಲ್ಲ.

ನಬಾರ್ಡ್ (ರಾಷ್ಟ್ರೀಯ ಗ್ರಾಮೀಣಾಭಿವೃದ್ಧಿ ಬ್ಯಾಂಕ್) ನಿಂದ ಸಾಲ ತಂದು ಯೋಜನೆ ಆರಂಭಿಸುವ ಕೆಲಸ ಆಗಬೇಕಿತ್ತು. ಆದರೆ ಅದನ್ನು ಮಾಡಲೇ ಇಲ್ಲ.

ಭೂ ಮಾಲಕ ವರ್ಗದ ರಾಜಕಾರಣಿಗಳ ಸಂಕುಚಿತ ಹಿತಾಸಕ್ತಿಗಳು, ಇಲ್ಲಿ ಬಹಳ ಕೆಲಸ ಮಾಡುತ್ತಿವೆ. ನೀರಾವರಿ ಯೋಜನೆಗಳಿಂದ ಅಭಿವೃದ್ಧಿಯಾಗಿ ಕೂಲಿಕಾರರು ತಮ್ಮ ಕಾಲ ಮೇಲೆ ನಿಲ್ಲುವಂತಾದರೆ ತಮ್ಮ ಹಿಡಿತ ಎಲ್ಲಿ ತಪ್ಪಿ ಹೋಗುವುದೋ ಎಂಬ ಭಯದಿಂದ ಈ ಕಾಂಗ್ರೆಸ್, ಬಿಜೆಪಿ ಹಾಗೂ ಆಳುವ ಪಕ್ಷಗಳ ಪ್ರಭಾವೀ ಮುಖಂಡರು ನೀರಾವರಿ ಯೋಜನೆಗಳ ಬಗ್ಗೆ ಚಕಾರ ಎತ್ತುತ್ತಿಲ್ಲ.

ಉಪವಾಸ ಸತ್ಯಾಗ್ರಹ

ಈ ಹಿನ್ನೆಲೆಯಲ್ಲಿ ಈ ಯೋಜನೆಗೆ ಹಣ ಒದಗಿಸಬೇಕು, ಪುನರ್ವಸತಿ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಒತ್ತಾಯಿಸಿ ಕರ್ನಾಟಕ ಪ್ರಾಂತ ರೈತ ಸಂಘದ ಗುಲಬರ್ಗ ತಾಲೂಕು ಸಮಿತಿಯ ನೇತೃತ್ವದಲ್ಲಿ ಮೇ 24 ರಿಂದ ಅನಿರ್ದಿಷ್ಟ ಕಾಲದ ಉಪವಾಸ ಸತ್ಯಾಗ್ರಹ ಆರಂಭವಾಯಿತು. ಇದಕ್ಕೆ ಮೊದಲು ಈ ಪ್ರದೇಶದಲ್ಲಿ ಮೇ 20 ರಿಂದ 23 ರವರೆಗೆ ಜೀಪ್ ಜಾಥಾ ನಡೆದಿತ್ತು. ಡಿವೈಎಫ್ಐ ಮತ್ತು ಜನವಾದಿ ಮಹಿಳಾ ಸಂಘಟನೆಗಳು ರೈತರ ಈ ಹೋರಾಟವನ್ನು ಬೆಂಬಲಿಸಿದ್ದವು.

ಕರ್ನಾಟಕ ಪ್ರಾಂತ ರೈತ ಸಂಘದ ಅಧ್ಯಕ್ಷ ಮಾರುತಿ ಮಾನ್ಪಡೆ, ಗುಲ್ಬರ್ಗ ತಾಲ್ಲೂಕು ಸಮಿತಿಯ ಅಧ್ಯಕ್ಷ ವೀರಣ್ಣ ಗೌಡರು, ಕುರಿಕೋಟ ಗ್ರಾಮದ ಹಿರಿಯರಾದ ವಸಂತರಾಯ ಪಾಟೀಲ, ನಾಗೂರು ಗ್ರಾಮ ಪಂಚಾಯತ್ ಅಧ್ಯಕ್ಷ ಶಿವಶರಣಪ್ಪ ಅಂಬಲಗಿ, ಮಾಳಪ್ಪ ಮಹಂಗಾವ್, ಚಂದ್ರಕಾಂತ್ ಚಿತ್ತಾಪುರ ಹಾಗೂ ಡಿ.ವೈ.ಎಫ್.ಐ. ನ ಚಿತ್ತಾಪುರ ತಾಲ್ಲೂಕು ಅಧ್ಯಕ್ಷ ಬಬರ್ ಖಾನ್ ಈ ಏಳು ಮಂದಿ ಉಪವಾಸ ಸತ್ಯಾಗ್ರಹ ಆರಂಭಿಸಿದರು.

ಜನರಿಂದ ಇದಕ್ಕೆ ಭಾರಿ ಪ್ರತಿಕ್ರಿಯೆ ಬಂತು. ಸುರಿಯುತ್ತಿರುವ ಮಳೆಯನ್ನೂ ಲೆಕ್ಕಿಸದೆ ಜನತೆ ಬೆಂಬಲ ವ್ಯಕ್ತಪಡಿಸಿದರು. ಇದರ ಪರಿಣಾಮವಾಗಿ ಕರ್ನಾಟಕ ನಿರ್ಮಾಣ ನಿಗಮದ ಗುಲ್ಬರ್ಗ ವಲಯದ ಚೀಫ್ ಇಂಜಿನಿಯರ್ ಸಿದ್ರಾಮಪ್ಪ ಬಂದು ರೈತರೊಂದಿಗೆ ಮಾತನಾಡಿದರು. ಸರಕಾರದಿಂದ ಹಣ ಬರದಿದ್ದರೂ ನಿಗಮದ ಮೂಲಕ 10 ಕೋಟಿ ರೂ. ಹಣ ನೀಡಿ ಆಣೆಕಟ್ಟಿನ ಕೆಲಸ ಮಾಡುವುದಾಗಿ ಅವರು ಭರವಸೆ ನೀಡಿದರು. ಇದು ಪೂರ್ಣವಾದ ಪರಿಹಾರವಲ್ಲದಿದ್ದರೂ ಒಂದೂವರೆ ತಿಂಗಳ ಹಿಂದೆ ನಿಲ್ಲಿಸಿದ ಆಣೆಕಟ್ಟು ಕೆ[...] ಪ್ರಾರಂಭಿಸಲು, 2000 ಇಸ್ವಿಯೊಳಗೆ 10 ಕೋಟಿ ರು[...] ಕೆಲಸ ಮುಗಿಸುವ ಭರವಸೆ ತಮಗೆ ದೊರೆತ ತಾತ್ಕಾ[...] ಗೆಲುವು ಎಂದು ಇಲ್ಲಿಯ ರೈತರು ಹೇಳುತ್ತಾರೆ.

ಅಲ್ಲದೆ ಮುಳುಗಡೆ ಪ್ರದೇಶ ಯಕ್ಕುಂಟೆ, ಹರಕಂ[...] ನಾಗೂರು ರಸ್ತೆಗಳ ಡಾಂಬರೀಕರಣದ ಭರವಸೆಯ[...] ಬಂದಿದೆ. ಭೂಮಿ ಹಾಗೂ ವಸತಿ ಕಳೆದುಕೊಂ[...] ನಾಗೂರು, ಬೆಳಕೋಟ ಹಾಗೂ ದಮ್ಮೂರ ಗ್ರಾಮ[...] ರೈತರಿಗೆ ಪರಿಹಾರ ಹಣವನ್ನು ಕೂಡಲೇ ವಿಸ್ತರಿಸುವುದ[...] ಲಿಖಿತ ಭರವಸೆಯನ್ನು ರೈತರು ಪಡೆದಿದ್ದಾರೆ.

ಕುರಿಕೋಟಾ ಹಾಗೂ ಸಳಗಿ ಗ್ರಾಮವನ್ನು ಮುಳು[...] ಪ್ರದೇಶವೆಂದು ಘೋಷಿಸುವು ದಾಗಿಯೂ ಭರವ[...] ಪಡೆಯಲಾಗಿದೆ.

ಆಣೆಕಟ್ಟಿನ ಕೆಲಸಕ್ಕೆ ಬೇಕಾಗುವ 30 ಕೋಟಿ ರೂಗಳಲ್ಲಿ ಹಾಗೂ ಮೇಲೆ ಹೇಳಿದ ಇತರ ಭರವಸೆ[...] ಮತ್ತು ಬಿತ್ತನೆ ಕೆಲಸ ಬಂದಿರುವ ಹಿನ್ನೆಲೆಯಲ್ಲಿ 3 ದಿನ[...] ಉಪವಾಸ ಸತ್ಯಾಗ್ರಹವನ್ನು ನಿಲ್ಲಿಸಿ ಹೋರಾಟವ[...] ಸದ್ಯಕ್ಕೆ ಹಿಂತೆಗೆದುಕೊಂಡು ಮುಂದೆ ಮತ್ತೆ ಇದ[...] ಎತ್ತಿಕೊಳ್ಳಲು ರೈತರು ನಿರ್ಧರಿಸಿದರು.

ರೈತರ ಬೇಡಿಕೆಗಳು

- ಗಂಡೋರಿ ನಾಲಾ ಯೋಜನಾ ಕಾಮಗಾರಿಗೆ ಅಗತ್ಯವಾದ ಹಣ ಒದಗಿಸಬೇಕು.
- ದಮ್ಮೂರ - ಬೆಳಕೋಟಾ ಗ್ರಾಮಗಳ ರೈತರ ಪರಿಹಾರಕ್ಕೆ, ಪುನರ್ ವಸತಿಗೆ ಅಗತ್ಯವಾದ ಹಣ ಕೂಡಲೇ ಮಂಜೂರು ಮಾಡಬೇಕು.
- ಬೆಣ್ಣೆ ತೊರೆ ಯೋಜನೆಯ ನಾಗೂರ ಗ್ರಾಮದ ಸರ್ವೆ ಪೂರ್ತಿ ಮಾಡಬೇಕು, ಕುರಿಕೋಟಾ ಮುಳುಗಡೆ ಪ್ರದೇಶ ಎಂದು ಘೋಷಿಸಬೇಕು.
- ಮುಳುಗಡೆ ಪ್ರದೇಶದ ನಿರುದ್ಯೋಗಿಗಳಿಗೆ ಸರ್ಕಾರಿ ಹುದ್ದೆಗಳಲ್ಲಿ ಮೀಸಲಾತಿ ನೀಡಬೇಕು.
- ಡ್ಯಾಮ್-ಕಾಲುವೆ ಕೆಲಸ ತ್ವರಿತಗೊಳಿಸಲು ಇನ್ನೊಂದು ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ ಹಾಗೂ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರನ್ನು ಸರ್ಕಾರ ಕೂಡಲೇ ಮಂಜೂರು ಮಾಡಬೇಕು.
- ಪುನರ್ ವಸತಿ ಕೇಂದ್ರಗಳಿಗೆ ರಸ್ತೆ, ಶೌಚಾಲಯ, ನೀರು ಮತ್ತಿತರ ನಾಗರೀಕ ಸೌಲಭ್ಯ ಒದಗಿಸಬೇಕು.

ಬರಗಾಲಂದ್ರ ಎದಿ ಅಂತಾದೊ ಧಕ್ಕ

ಇಸ್ವಿಯಿತ್ರಿ ಆ ವರ್ಷ ಎಪ್ಪತೆರಡಿನ್ನಾ
ಕಲಬುರ್ಗಿ ಜಿಲ್ಲಾ ಕ ಬಂತೊ ಬರಗಾಲನಾ
ಮಿರಗುವ ಮಿಂಚಿತ ಮಳೆಗಾಲ ಸುರುವಾಯ[...]
ಮಿರ್ಗ್ಗರಿದ್ರ ಮಳಿ ಬರಲಿಲ್ಲ ಪೂರ್ಣಾ
ಎದಿ ಹೊಡದ ಕುಂತಾರ ರೈತರಿನ್ನಾ
ಜನ ಹೋಗ್ಯಾರ ಸರಕಾರ ತನಾ
ದಂಡೆ ಹಚ್ಚರಿ ನಮಗೊಂದು ಬದುಕದಕಿನ್ನಾ
ಹೆಣ್ಣು ಗಂಡು ಮುದುಕರು ಸಾವಿರತನಾ
ಲೆಕ್ಕದಾಗ ಮೂರ್ದ್ದಾರ ಮೂರಿಂಚಿನ್ನಾ
ಮನದಾಗೆ ಉಸರೆಂದು ತುರ್ರ್ಯಾರ ಮಣ್ಣಾ

ದೇಶ ಬಿಟ್ಟು ದೇಶಕ ಹೋಗಿ
ನೀರು ತಂದಾರ ಕಣ್ಣೇಗೀ
ಯಾಕೆ ಬಂದೆವು ನಾವು ಇಲ್ಲಿಗಿ
ಕೊಟ್ಟ ಮಾಪಿಲಿ ಪಾಡಿಹೊಡ್ದು ಕೊಡ್ರಾರ ಧಾನ್[...]
ಮುಂಜಾಳಿ ಹಿಡ್ದು ದುಡಿದ್ರ ಸಂಜೆತನಾ
ಸಾಟಿ ರೂಪಾಯಿ ಸಿಗ್ತಾವಂದ್ರ ಸತ್ತರ ಸತ್ತಿವಂ[...]
ಆಪರೇಷನ್ ಮಾಡಿಕೊಂಡು -
ಅವಪತ್ಯ ಮಾಡಿ ನಡಬರಕ ಹೋಗ್ಯಾರ ದಾ[...]
ಊರಿಗೆ ಬಂದು ಹತ್ತಲಿಲ್ಲ ಉಪರಾಟೀ
ಮನಿಗೆ ಮರಳಿ ಇಲ್ಲದಂಗಾಯ್ತು ಭೆಟ್ಟಿ
ಅಕ್ಕಿ ಗೋಧಿ ಕೂಪನ್‌ದವ್ರು ಲೆಕ್ಕಿಲ್ದೆ ಕತ್ತರಿಸ್ಯಾ[...]
ಅಲ್ಲಿಂದಲ್ಲೆ ಮಾರುತಿದ್ರು ಸಕ್ರಿ ಸರಿಯಾ[...]
ಹಂಚಲಿಲ್ಲ ಜರಾ
ಬರಗಾಲಂದ್ರ ಎದಿ ಅಂತಾದೊ ಧಕ್ಕ
ಎಂದಿಗಿ ಬರಬಾರದಪ್ಪ ಬರಗಾಲ ಸುಂಕ

(ಒಂದು ಜನಪದ ಹಾಡು)

ಅರಣ್ಯಾಧಿಕಾರಿಗಳ ದೌರ್ಜನ್ಯ

4 ರಿಂದ

ತಲಿಲ್ಲ. ಇರಲು ಸರಿಯಾದ ಸಲುಗಳನ್ನೂ ಕಟ್ಟಿಸಿಕೊಡಲಿಲ್ಲ. ವಣೆಗಳ ಸಂದರ್ಭ ಮಾತ್ರ ರಿಗಳು ಪೊಳ್ಳು ಭರವಸೆಗಳನ್ನು ತ್ತಿ ಈ ಬಡಜನರ ಓಟುಗಳನ್ನು ಚುತ್ತಿದ್ದರು!

ಈ ಮಧ್ಯೆ 1980ರ ಮತ್ತು 1990 ಗಳಲ್ಲಿ ರಾಜ್ಯದ ಹಲವು ಪ್ರದೇಶಗಳಲ್ಲಿ ಕೂಲಿಕಾರರು ಮತ್ತು ಬಡರೈತರು ವಾಗಿ ಸಾಗು ಮಾಡುತ್ತಿರುವುದಾಗಿ ಕೊಳ್ಳಲಾದ ಭೂ ಹಿಡುವಳಿಗಳನ್ನು ಮಂಗೊಳಿಸಲು ವ್ಯಾಪಕವಾಗಿ ರಾಟಗಳು ನಡೆದು, ಕೆಲವು ಕಡೆಗಳಲ್ಲಿ ಪ್ಪ ಯಶಸ್ಸುಗಳಿಸಲಾಯಿತು. ಆದರೆ ಘಟಗಿಯಲ್ಲಿ ಇಂತಹ ರಾಟಗಳಾಗಲಿಲ್ಲ. ಹಾನಗಲ್ ಕಿನ 40-50 ಗ್ರಾಮಗಳಲ್ಲಿ ಕೆಲವು ಗಳಿಂದ ಕರ್ನಾಟಕ ಪ್ರಾಂತ ಕೃಷಿ ಕಾರರ ಸಂಘದ ಆಶ್ರಯದಲ್ಲಿ ಯಿಗಾಗಿ ನಡೆಸುತ್ತಿದ್ದ ಯಶಸ್ವಿ ರಾಟದಿಂದ ಪ್ರಭಾವಿತರಾಗಿ, ಘಟಗಿಯಲ್ಲೂ ಸಂಘ ಕಟ್ಟಿ ರಾಡಲು ಸಜ್ಜುಗೊಳಿಸಲಾಗುತ್ತಿತ್ತು. ಂದಾಗಿ ಭ್ರಷ್ಟ ಅರಣ್ಯ ಅಧಿಕಾರಿಗಳು ಗೊಂಡರು. ಕಾರಣ ಸಂಘ ಕಟ್ಟಿ ರಾಟದ ಮೂಲಕ ಈ ಬಡವರು ಭೂ ವಳಿಗಳಿಗೆ ಮುಂದೆ ಕಾಯಂ ಪಟ್ಟಾ ರೆ, ತಮಗೆ ಬರುವ ಮಾಮೂಲು ದೆಂದು ಅವರು ಗಾಬರಿಗೊಂಡರು. ತ್ತೀಚೆಗೆ ಸುಪ್ರೀಂ ಕೋರ್ಟ್ ತನ್ನ ತೀರ್ಪಿನಲ್ಲಿ 1980ರ ಮೊದಲು ಈ ವ್ಯವಸಾಯ ಮಾಡಿಕೊಂಡು ವರನ್ನು ಒಕ್ಕಲೆಬ್ಬಿಸಬಾರದೆಂದು ಸಿತ್ತು. ಈ ಪ್ರದೇಶಗಳಲ್ಲಿ 1970ರ ಂದಲೇ ಬಡ ಜನರು ವ್ಯವಸಾಯ ಕೊಂಡು ಬಂದಿದ್ದರು. ಅರಣ್ಯ ರಿಗಳು ಸುಪ್ರೀಂ ಕೋರ್ಟ್ ಆದೇಶದ ಲ್ಲಿ, ಯಾವುದೇ ಮುನ್ಸೂಚನೆ ೇ, ಈ ಪ್ರದೇಶದ ಮುಗ್ಧ ಕೃಷಿ ಕಾರರನ್ನು ಹೆದರಿಸಿ ಬೆದರಿಸಿ, ಕೆಲವರನ್ನು ಹೊಡೆದು ಬಡಿದು, ಅವರ ಮೇಲೆ ಪೋಲೀಸ್ ಕೇಸುಗಳನ್ನು ಹಾಕಿ, ಅವರು ವ್ಯವಸಾಯ ಮಾಡಿಕೊಂಡು ಬಂದ ಭೂಹಿಡುವಳಿಗಳ ಮೇಲೆ ಬುಲ್ಡೋಜರ್ ಹಾಯಿಸಿ ಬೆಳೆ ನಾಶ ಮಾಡಲಾರಂಭಿಸಿದರು. ಅರಣ್ಯ ಅಧಿಕಾರಿಗಳು ಖಾಲಿ ಇರುವ ಗುಡ್ಡಗಾಡು ಪ್ರದೇಶಗಳಲ್ಲಿ ಕಾಡು ಬೆಳೆಸಲು ಗುಂಟೆ ಒಂದಕ್ಕೆ ರೂ. 12 ಖರ್ಚು ಮಾಡಬೇಕಾಗಿದೆ. ಬಡವರು ಹಸನು ಮಾಡಿದ ವ್ಯವಸಾಯ ಭೂ ಪ್ರದೇಶಗಳನ್ನೇ ಗುಡ್ಡಗಾಡು ಪ್ರದೇಶ ಎಂದು ಸುಳ್ಳು ದಾಖಲೆ ತೋರಿಸಿ, ಇಲ್ಲಿಯೇ ಕಾಡು ಬೆಳೆಸಲು ಗುಂಟೆಗೆ ರೂ.4 ರಷ್ಟೇ ಖರ್ಚು ಮಾಡಿ, ನಿವ್ವಳ ರೂ.8 ರಂತೆ ಕೋಟಿಗಟ್ಟಲೇ ಹಣ ಎತ್ತಿ ಹಾಕುವುದೂ ಅರಣ್ಯ ಅಧಿಕಾರಿಗಳ ದುರುದ್ದೇಶವಾಗಿದೆ! ಆದಕ್ಕಾಗಿ ಅವರು ಕಾಡು ಕಡಿಯುವವರನ್ನು ಬಿಟ್ಟು ಬಿಟ್ಟು ಕಷ್ಟ ಪಟ್ಟು ವ್ಯವಸಾಯ ಮಾಡುವ ಜನರನ್ನು ಬೆದರಿಸಿ ಹೊರದಬ್ಬಲು ಹೊರಟಿದ್ದಾರೆ.

ಎಚ್ಚೆತ್ತ ಕೃಷಿ ಕೂಲಿಕಾರರ ಮತ್ತು ಬಡ ರೈತರ ಮುಂದೆ ಈ ಭ್ರಷ್ಟ ಅಧಿಕಾರಿಗಳ ಆಟ ಹೆಚ್ಚು ಕಾಲ ನಡೆಯದು ಎನ್ನುತ್ತಾರೆ ಜಿ.ಎನ್. ನಾಗರಾಜ. ಕರ್ನಾಟಕದಲ್ಲಿ ಕೃಷಿ ಕೂಲಿಕಾರರು ಮತ್ತು ವ್ಯವಸಾಯ ಯೋಗ್ಯ ಮರು ವಿತರಣೆಗಾಗಿ ಭೂ ಹಿಡುವಳಿಗಳು ಅವಿಭಾಜ್ಯ ಧಾರವಾಡ ಜಿಲ್ಲೆಯಲ್ಲಿಯೇ ಅತಿ ಹೆಚ್ಚು ಇವೆ. ಸರಕಾರ ಈ ಭೂ ಹಿಡುವಳಿಗಳನ್ನು ಬಡ ಜನರಿಗೆ ಹಂಚಿಕೊಟ್ಟು ಗ್ರಾಮೀಣ ಉದ್ಯೋಗಾವಕಾಶಗಳನ್ನು ಸೃಷ್ಟಿಸಬೇಕೆಂದು ನಾಗರಾಜ ವಾದಿಸುತ್ತಾರೆ. ಗ್ರಾಮೀಣ ಬಡ ಜನರು ಈ ಮೂಲಕ ತಮ್ಮ ಜೀವನಕ್ಕೆ ಬೇಕಾದ ಆಹಾರ ಪದಾರ್ಥಗಳನ್ನು ಬೆಳೆಸುವುದೇ ಅಲ್ಲದೇ, ಅಗತ್ಯವಿದ್ದರೆ ಸರಕಾರಕ್ಕೆ ಅಗ್ಗದ ದರಗಳಲ್ಲಿ ಉತ್ತಮ ಅರಣ್ಯಗಳನ್ನು ಬೆಳೆಸಿಕೊಡಬಲ್ಲರು ಎಂದು ನಾಗರಾಜ ಪತ್ರಕರ್ತರ ಮುಂದೆ ತಮ್ಮ ವಿಶ್ವಾಸ ವ್ಯಕ್ತ ಪಡಿಸಿದ್ದಾರೆ.

ವರದಿ : ಸಿ.ಆರ್. ಭಟ್.



ಬಂಡಾಯದ ದೇಶಪ್ರೇಮದ, ಭಾವೈಕ್ಯತೆಯ ಕವಿ

ನಜರುಲ್ ಇಸ್ಲಾಂ ಶತಮಾನೋತ್ಸವ

ಬಂಗಾಳದ ಬಂಡಾಯ ಕವಿ ನಜರುಲ್ ಇಸ್ಲಾಂರನ್ನು ಅವರ ಜನ್ಮ ಶತಮಾನೋತ್ಸವದ ಈ ಮೇ 26 ರಂದು ಪಶ್ಚಿಮ ಬಂಗಾಳದಾದ್ಯಂತ ಅತ್ಯಂತ ಗೌರವದಿಂದ ಸ್ಮರಿಸಿಕೊಳ್ಳಲಾಯಿತು. ಹಾಡುಗಳು, ಕವನ ವಾಚನ, ವಿಚಾರ ಸಂಕಿರಣಗಳು ರಾಜ್ಯಾದ್ಯಂತ ನಡೆದವು. ರಾಜ್ಯದ ಎಡರಂಗ ಸರ್ಕಾರವೂ ಈ ಆಚರಣೆಗಳಲ್ಲಿ ಅಮಿತೋತ್ಸಾಹದಿಂದ ಭಾಗವಹಿಸಿತು.

ಸಮಾಜವಾದದ ಪಾಠಗಳನ್ನು ಬೋಧಿಸಿದ, ಜಾತಿ ಕೋಮುವಾದ ಗಳ ವಿರುದ್ಧ ಬಂಡೆದ್ದ ಈ ಕವಿ ಬಂಗಾಳಿ ಜನತೆಯ ಅಪಾರ ಪ್ರೀತಿ, ಆದರಗಳನ್ನು ಗಳಿಸಿದ್ದು, ಈಗಲೂ ಅದು ಅಚ್ಚಳಿಯದೆ ಉಳಿದಿರುವುದು ಈ ಸಮಾರಂಭಗಳಲ್ಲಿ ಎದ್ದು ಕಾಣುತ್ತಿತ್ತು. ಇದು ಕೇಂದ್ರ ಸರ್ಕಾರ ಏರ್ಪಡಿಸಿದ್ದ ಪ್ರಧಾನಮಂತ್ರಿ, ಮಮತಾ ಬ್ಯಾನರ್ಜಿ ಹಾಗೂ ಬಿಜೆಪಿಯ ರಾಜ್ಯ ಮುಖಂಡ ತಪನ್ ಸಿಕ್ದರ್ ಭಾಗ ವಹಿಸಿದ್ದ ಸಮಾರಂಭಕ್ಕಿಂತ ಸಂಪೂರ್ಣ ಭಿನ್ನವಾಗಿತ್ತು. ತನ್ನ ಕೊನೆ ಯುಸಿರಿನವರೆಗೂ ಹಿಂದೂ-ಮುಸ್ಲಿಂ ಐಕ್ಯತೆಗಾಗಿ ಹೋರಾಡಿದ ಈ ಕವಿಯನ್ನು ಸ್ಮರಿಸಿಕೊಳ್ಳುವ ಅರ್ಹತೆಯೂ ಕೇಂದ್ರ ಸರ್ಕಾರದ ಸಮಾರಂಭದಲ್ಲಿ ಭಾಗವಹಿಸಿದ ಆ ಘಟಾನುಘಟಿಗಳಲ್ಲಿ ಇರಲಿಲ್ಲ ತಾನೆ.

ಕಲ್ಕತ್ತೆಯಲ್ಲಿ ಬಂಗಾಳಿ ಅಕಾಡೆಮಿ ಕೊಡುವ ನಜರುಲ್ ಪ್ರಶಸ್ತಿ ಪ್ರದಾನ ಸಮಾರಂಭ ಮೇ 26 ರಂದು ನಡೆಯಿತು. ಈ ವರ್ಷದ ಪ್ರಶಸ್ತಿಯನ್ನು ಹಿರಿಯ ಕವಿ ಹಾಗೂ ಸಾಹಿತ್ಯಕಾರ ಅನಂದ್ ಶಂಕರ್ ರಾಯ್ ರವರಿಗೆ ಕಾರ್ಯನಿರ್ವಾಹಕ ಮುಖ್ಯಮಂತ್ರಿ ಬುದ್ಧದೇವ್ ಭಟ್ಟಾಚಾರ್ಯ ನೀಡಿದರು.

ಕವಿ ನಜರುಲ್ ಈಗಲೂ ನಮಗೆ ಪ್ರಸ್ತುತ. ಹಾಡುಗಳು, ಕವನಗಳು, ಭಾಷಣಗಳ ಮೂಲಕ ಕೋಮುವಾದ ವನ್ನು ವಿರೋಧಿಸುವ ಅವರ ಆದರ್ಶ ಎಲ್ಲಾ ಜನ ವಿಭಾಗಗಳನ್ನು ಆಕರ್ಷಿಸಿದೆ ಎಂದು ಬುದ್ಧದೇವ್‌ರವರು ನೆನಪಿಸಿದರು. ಕೋಮು ಭಾವೋದ್ವೇಗವನ್ನು ಎಬ್ಬಿಸಿ ದೇಶದ ಜಾತ್ಯಾತೀತ ಹಂದರವನ್ನು ಹಾಳುಗೆಡವಲು ಕೋಮುವಾದಿ ಶಕ್ತಿಗಳು ಪ್ರಯತ್ನಿಸುತ್ತಿರುವಾಗ ಈ ಕವಿಯನ್ನು ಮತ್ತೆ-ಮತ್ತೆ ನೆನಪಿಸಿಕೊಳ್ಳಬೇಕು ಎಂದರು.

ಈ ಸಮಾರಂಭದಲ್ಲಿ ಎಡರಂಗ ಸರ್ಕಾರ ನಜರುಲ್ ಇಸ್ಲಾಂ ಶತಮಾನೋತ್ಸವದ ಭಾಗವಾಗಿ ಹಮ್ಮಿಕೊಂಡಿರುವ ಕಾರ್ಯಕ್ರಮಗಳನ್ನು ಪ್ರಕಟಿಸಲಾಯಿತು. ಅವರ ಪ್ರತಿಮೆ ಪ್ರತಿಷ್ಠಾಪನೆಯಲ್ಲದೆ, ಅವರ ಎಲ್ಲಾ ಕೃತಿಗಳ ಪ್ರಕಟಣೆ ಈ ಕಾರ್ಯಕ್ರಮದಲ್ಲಿ ಸೇರಿದೆ.


ನಜರುಲ್ ಇಸ್ಲಾಂರ ಜನ್ಮ ಸ್ಥಳ ಚುರುಲಿಯಾ(ಬರ್ದ್ವಾನ್ ಜಿಲ್ಲೆ) ದಲ್ಲಿ ಏರ್ಪಡಿಸಿದ್ದ ಸಮಾರಂಭದಲ್ಲಿ ಸಾವಿರಾರು ಜನ ಭಾಗವಹಿಸಿದರು. ಪಶ್ಚಿಮ ಬಂಗಾಳದ ರಾಜ್ಯಪಾಲ ಶ್ಯಾಮಲ್ ಕುಮಾರ್ ಸೇನ್ ಈ ಸಮಾರಂಭವನ್ನು ಹಾಗೂ ಏಳು ದಿನಗಳ ಒಂದು 'ನಜರುಲ್ ಜಾತ್ರೆ'ಯನ್ನು ಉದ್ಘಾಟಿಸಿದರು.

ಇತರ ಎಲ್ಲಾ ಜಿಲ್ಲೆಗಳಲ್ಲಿ ಪ್ರಭಾತ ಫೇರಿಗಳು ನಡೆದ ಸುದ್ದಿಗಳು ಬಂದಿವೆ. ನಜರುಲ್ ಇಸ್ಲಾಂರ ಭಾವಚಿತ್ರ ಹಿಡಿದ ಮೆರವಣಿಗೆಕಾರರು ನಗರ, ಪಟ್ಟಣ, ಹಳ್ಳಿ ಹಳ್ಳಿಗಳಲ್ಲಿ ಪ್ರಭಾತಫೇರಿ ನಡೆಸಿದರು. ನಂತರ ಸಮಾರಂಭಗಳು ನಡೆದವು.

ಶುಭಾಶಯಗಳು

ಸಿಪಿಐ(ಎಂ) ಸದಸ್ಯರಾದ ಸವದತ್ತಿಯ ಎಸ್.ಆಯ್.ಸೊನ್ನದ ತಮ್ಮ ಸೋದರನ ಮಗ ಶಿವರಾಜ ಸೊನ್ನಣ್ಣನವರ ಲಗ್ನದ ಸಂತಸದ ಸಂದರ್ಭದಲ್ಲಿ 500 ರೂ.ಗಳನ್ನು 'ಐಕ್ಯರಂಗ'ಕ್ಕೆ ದೇಣಿಗೆ ನೀಡಿದ್ದಾರೆ. ನೂತನ ವಧೂವರರಿಗೆ 'ಐಕ್ಯರಂಗ'ದ ಹಾರ್ದಿಕ ಶುಭಾಶಯಗಳು ಹಾಗೂ ಎಸ್.ಆಯ್.ಸೊನ್ನದ ಅವರಿಗೆ ಕೃತಜ್ಞತೆಗಳು

- ವ್ಯವಸ್ಥಾಪಕರು.



ಇ.ಎಂ.ಎಸ್. ಭವನ ನಿಧಿ

ಹಿಂದಿನಮೊತ್ತ	12,80,617.50
ಎಲ್.ಐ.ಸಿ. ಸಂಗಾತಿಗಳು, ಬೆಂಗಳೂರು	
ಹೆಚ್.ಎಸ್.ಮಂಜುನಾಥ	1000
ಎಂ.ಚಂದನ್	500
ಅಮಾನುಲ್ಲಾಖಾನ್	500
ಕೆ.ಗೋಪಾಲ್	100
ಎಸ್.ವಿ.ವೆಂಕಟೇಶ್	200
ಎಸ್.ಸುಜಾತ	100
ಎಂ.ಸದಾಶಿವ	50
ಎಲ್.ಐ.ಸಿ ಧಾರವಾಡ ಸಂಗಾತಿಗಳು	
ಟಿ.ಜಿ.ಉಪಾಧ್ಯ	100
ಎಲ್.ಐ.ಸಿ. ಗದಗ ಸಂಗಾತಿಗಳು	
ಪಿ.ಎಸ್. ಲಕ್ಕುಂಡಿ	105
ಎಸ್.ಪಿ.ನೆಗಳೂರ	25
ಕೆ.ಎಂ.ಮುಲ್ಲಾನವರ	25
ಅಶೋಕ ರಾಯ್ಕರ	25
ಎಂ.ಎಫ್.ಮುದೆನೂರ	140
ಎಸ್.ತ್ರಿವೇಣಿ	50
ಪಿ.ಡಿ.ಬಂಕಾಪೂರ	25
ಎಂ.ಕೆ.ನಾರಾಯಣಕರ	25
ವ್ಹಿ.ಬಿ.ರೊಳ್ಳಿ	25
ಸುನೀತಾ ಕಬಾಡಿ	25
ಆರ್.ಆರ್.ವಡಕೇರಿ	25
ಎಸ್.ಇ.ಬೆಟದೂರ	25
ಇ.ಸತೀಶಕುಮಾರ್	25
ಹೇಮಲತಾ	25
ವೀರೇಶ	25
ಬಿ.ಸಿ.ನಾಯಿಕ	25
ವ್ಹಿ.ಕೆ.ಮುದುಗಲ್ ಮಠ	25
ಪ್ರಕಾಶ ನರಗುಂದ	25
ಎನ್.ಕೆ.ಮುಲ್ಲಾನವರ	25
ಭಾರತಿ ದೇಶಪಾಂಡೆ	25
ಕಲ್ಯಾಣಿ ಪಿಳ್ಳೆ	25
ಕೆ.ಅಬೇದಾ	25
ಎಸ್.ಆರ್.ಕಿದಿಯೂರ	25
ಎಲ್.ಎಚ್.ತಿರಕಣ್ಣವರ	25
ಬೆಳಗಾಂವ ಎಲ್.ಐ.ಸಿ. ಸಂಗಾತಿಗಳು	
ಪಿ.ಎ.ಜೋಸೆಫ್	200
ಕೆ.ಸಿ.ನಾಗರಾಜ	200
ವ್ಹಿ.ವ್ಹಿ.ಕುಲಕರ್ಣಿ	200
ಸುಧಾ ರಾವ್	100
ರಾಧಾಕೃಷ್ಣ	100
ಸುಧೀಂದ್ರ ಹಂಚಿನಮನಿ	100
ಜಿ.ವ್ಹಿ.ಪುರಾಣಿಕ	100
ಡಾಂ. ಎಂ.ಬಿ.ಬಸ್ತವಾಡ	50
ಡಾ. ಕೆ.ಆರ್.ಭಟ್	50
ಎ.ಕೆ.ಕುಲಕರ್ಣಿ	50
ಒಬ್ಬ ಹಿತೈಷಿ	150
ಸಿಪಿಐ(ಎಂ) ಬಳ್ಳಾರಿ ಜಿಲ್ಲಾ ಸಮಿತಿ ಮೂಲಕ	
ಶ್ರೀಮತಿ ರಾಜಶ್ರೀ w/o ವಿ.ದಕ್ಷಿಣಾಮೂರ್ತಿ(ಮೊದಲ ಕಂತು)	500
ಯು.ಹೆಚ್.ಸಿದ್ದನಗೌಡ ಸಿರುಗುಪ್ಪ	100
ಇ.ಆರ್.ಯಲ್ಲಪ್ಪ	100
ಕೆ.ಗಾದಿಲಿಂಗಪ್ಪ, ಕುರುಗೋಡು	50
ಕೆ.ನಾಗರತ್ನ, ಹೊಸಪೇಟೆ	50
ಪದ್ಮ ಬಳ್ಳಾರಿ	50
ಕೆ.ಹುಲಿಗಮ್ಮ, ಹಗರಿಬೊಮ್ಮನಹಳ್ಳಿ	50
ಕೆ.ಬಸವರಾಜ್, ಹ.ಬೊ.ಹಳ್ಳಿ	50
ಕೆ.ಹುಲುಗಪ್ಪ, ಹ.ಬೊ.ಹಳ್ಳಿ	50
ಕೆ. ಈರೇಶ್, ಹ.ಬೊ.ಹಳ್ಳಿ	100
ಕೆ. ಅಲ್ಲಾ ಭಕ್ಷ್, ಹ.ಬೊ. ಹಳ್ಳಿ	100
ಎಸ್.ಎಸ್.ಆರ್.ಸಂಗ್ರಹ	20,000
ಸ್ಯಾನ್ ನೌಕರರು, ವರ್ತೂರು ವಲಯ, ಬೆಂಗಳೂರು	3450
ವರ್ತೂರು ವಲಯಸಮಿತಿ, ಐಟಿಐ ಶಾಖೆ	3775
ವರ್ತೂರು ವಲಯಸಮಿತಿ ವೈಟ್‌ಫೀಲ್ಡ್ ಪ್ರದೇಶ	603
	13,4315.50

..........ಮಹಿಳಾ ಸಮ್ಮೇಳನದಲ್ಲೊಂದು ಕರುಳಿನ ಕೂಗು


4 ರಿಂದ

ಪ್ರವೇಶವನ್ನು ತಡೆಯುವಂತೆ ಸುವುದು ಮತ್ತು ದೂರನ್ನು ತರುವ ಂದಿಗೆ ಸೌಜನ್ಯದಿಂದ ವರ್ತಿಸಿ , ನೆರವನ್ನು ನೀಡಲು ಒತ್ತಡ ದು.

ತರ ವ್ಯವಸ್ಥೆಯನ್ನು ಬಲಪಡಿಸಲು ಯಿಸುವುದು.

-ನಿವಾಸಿಗಳ ಹಕ್ಕು ಪತ್ರಕ್ಕಾಗಿ ಸುವುದು

ತ್ಯಂತ ಆಕರ್ಷಕವಾಗಿ ಜರುಗಿದ ಳನದ ಉದ್ಘಾಟನೆಯನ್ನು ಾ.ಜ.ಮ. ಸಂಘಟನೆಯ ಧ್ಯಕ್ಷರಾದ ಕೆ. ಎಸ್. ವಿಮಲ ರಿಸಿದರು. ಮುಖ್ಯ ಅತಿಥಿಗಳಾಗಿ ರಾದ ಕೆ.ಆರ್. ವೆಂಕಟೇಶ್ ಡಾ॥ ಶಾರದಾ, ಸಿಐಟಿಯು ಂಡರಾದ ಹೆಚ್. ಎನ್. ಪಾಲಗೌಡ, ಗೌರಮ್ಮ ಾದವರು ಪಾಲ್ಗೊಂಡಿದ್ದರು. ಮ್ಮೇಳನಕ್ಕೆ ಶುಭಕೋರಿ ಎ ಐ ಕೆ ನ ಜಿಲ್ಲಾ ಕಾರ್ಯದರ್ಶಿ ಐಚಿಲಯ್ಯ, ಡಿ ವೈ ಎಫ್ ಐ ಸಹ ಕಾರ್ಯದರ್ಶಿ ರಾಮಚಂದ್ರ ಾದವರು ಮಾತನಾಡಿದರು. ಮ್ಮೇಳನದ ಸ್ವಾಗತವನ್ನು ಬೀಬಿ



ಜಾನ್ ಮಾಡಿ ಪ್ರೇಮ ವಂದಿಸಿದರು.

ಸಮ್ಮೇಳನದ ಕೊನೆಯ ಭಾಗವಾಗಿ ಆಕರ್ಷಕವಾದ ಮೆರವಣಿಗೆಯನ್ನು ಸಂಘಟಿಸಲಾಗಿತ್ತು. ನೂರಾರು ಮಹಿಳೆಯರು ಭೋರ್ಗರೆದ ಮಳೆಯನ್ನೂ ಲೆಕ್ಕಿಸದೆ ಪ್ರಮುಖ ಬೀದಿಯಲ್ಲಿ ಮೆರವಣಿಗೆ ನಡೆಸಿದರು. ಮೆರವಣಿಗೆಯ ನಂತರ ನಡೆದ ಸಾರ್ವಜನಿಕ ಸಭೆಯನ್ನು ದ್ದೇಶಿಸಿ ಕೆ.ಎಸ್. ವಿಮಲ, ಗೌರಮ್ಮ ಮುಂತಾದವರು ಮಾತನಾಡಿದರು.

ಸಂಘಟನೆಯನ್ನು ಬೇಗೂರಿನ ಗ್ರಾಮಾಂತರಕ್ಕೂ ಹಾಗೂ ನಗರದ ಹೊರ ವಲಯಗಳಿಗೂ ತೆಗೆದುಕೊಂಡು ಹೋಗುವ ಜೆ.ಎಂ.ಎಸ್‌ನ ತೀರ್ಮಾನಕ್ಕೆ ಹೊಸ ಮೈಲಿಗಲ್ಲಾದ ವರ್ತೂರು ವಲಯ ಸಮ್ಮೇಳನವು ಮಹಿಳೆಯರ ಸಮಸ್ಯೆಗಳಿಗೆ ಹೋರಾಡಲು ಅಲ್ಲಲ್ಲಿ ನಡೆಯುವ ಸಣ್ಣ-ಪುಟ್ಟ ಪ್ರತಿಭಟನೆಗಳಿಗೆ ಚಳುವಳಿಯ ರೂಪ ನೀಡಲು ವರ್ತೂರು ವಲಯದ ಸಮಿತಿ ಯೊಂದನ್ನು ರಚಿಸಿಕೊಂಡಿತು.

ಗೌರಮ್ಮ ಅಧ್ಯಕ್ಷರಾಗಿ, ಬೀಬಿಜಾನ್ ಕಾರ್ಯದರ್ಶಿಯಾಗಿರುವ ಸುಮಾರು 30 ಜನರ ಸಮಿತಿಯು ಹರ್ಷೋದ್ಗಾರಗಳ ನಡುವೆ ಸಮ್ಮೇಳನದಲ್ಲಿ ಆಯ್ಕೆಗೊಂಡಿತು. ಉಪಾಧ್ಯಕ್ಷರುಗಳಾಗಿ ಖುರ್ಷಿದ್ ಬೇಗಂ, ಗಿರಿಜಾ, ಉಮಾ, ಶೋಭಾ ಪರ್‌ವೀಣ್, ಶಾಂತಮ್ಮ ಆಯ್ಕೆಯಾದರು.

ರಾಧಾ, ಆಶಾ, ಪ್ರೇಮ, ವಸಂತ, ನಿರ್ಮಲ, ದಿಲ್‌ಶಾದ್ ಸಹ ಕಾರ್ಯದರ್ಶಿಗಳಾಗಿ, ಖಜಾಂಚಿಯಾಗಿ ರಮಾ ಆರಿಸಲ್ಪಟ್ಟರು.

ವರದಿ : ಎನ್. ಪ್ರಭಾ

ಭಾರತ ವಿದ್ಯಾರ್ಥಿ ಫೆಡರೇಷನ್ ಕರ್ನಾಟಕ ರಾಜ್ಯ ಸಮಿತಿ ಇತ್ತೀಚೆಗೆ ಹರಪನಹಳ್ಳಿಯಲ್ಲಿ ವಿದ್ಯಾರ್ಥಿ ಆಂದೋಲನದಲ್ಲಿ ದುಡಿಯುತ್ತಿರುವವರಿಗೆ ಒಂದು ಕಾರ್ಯಾಗಾರ ನಡೆಸಿತ್ತು. ಈ ಸಂದರ್ಭದಲ್ಲಿ ಸುತ್ತಮುತ್ತಲಿನ ಹಳ್ಳಿಗಳ ಜನರ ಸಾಮಾಜಿಕ-ಶೈಕ್ಷಣಿಕ ಸ್ಥಿತಿಗತಿಗಳನ್ನು ಸಮೀಕ್ಷೆ ಮಾಡುವ ಒಂದು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು, ಕಾರ್ಯಾಗಾರಕ್ಕೆ ಬಂದವರನ್ನು ಗುಂಪುಗಳಾಗಿ ಮಾಡಿ ಹರಪನಹಳ್ಳಿಯ ವಿವಿಧ ಪ್ರದೇಶಗಳಲ್ಲಿ ಸಮೀಕ್ಷೆ ನಡೆಸಲು ಕಳಿಸಲಾಯ್ತು, ಈ ವಿದ್ಯಾರ್ಥಿಗಳು ಕಂಡದ್ದು ಅವರ ಊಹೆಗೂ ಮೀರಿದ್ದು. ಎಸ್.ಎಫ್.ಐ. ರಾಜ್ಯ ಉಪಾಧ್ಯಕ್ಷ ಟಿ.ಎಲ್.ಕೃಷ್ಣೇಗೌಡ ಇವುಗಳಲ್ಲಿ ಕೆಲವನ್ನು ಇಲ್ಲಿ ಸಂಗ್ರಹಿಸಿ ಕೊಟ್ಟಿದ್ದಾರೆ.

ಅನಕ್ಷರತೆಯ ಈ ಶಾಪ ಏಕೆ?

ಸಮೀಕ್ಷೆ ನಡೆಸಿದ ವಿದ್ಯಾರ್ಥಿಗಳನ್ನೇ ಬೆಚ್ಚಿ ಬೀಳಿಸಿದ ವಾಸ್ತವತೆ



ಕಕ್ಕಸ್ಸಿನ ಮಧ್ಯ ಹೇಗೆ ಬದುಕುತ್ತಿದ್ದಾರೆ ಮರಾಯ್ರೆ:

ಹೀಗೆಂದು ಉದ್ಘರಿಸಿದವರು ಹಾಸನದ ಸಂಗಾತಿ ಸುನೀತಾ ಹೆಬ್ಬಾರ್. ಕೋಳಿಗೂಡಿನಂತಹ ಹೆಂಚಿನ ಮನೆಗೆ ಹೊಕ್ಕ ಇವರಿಗೆ ಕಂಡದ್ದು ಕುರಿ ಆಡುಗಳ ಮಧ್ಯೆ ಮನುಷ್ಯರು ಬದುಕುತ್ತಿರುವ ಅಡುಗೆ ಮನೆ- ಟಾಯ್ಲೆಟ್ಟುಗಳ ವ್ಯತ್ಯಾಸ ತಿಳಿಯದ ದೃಶ್ಯ.

ಹರಪನಹಳ್ಳಿಯ ತಿಮ್ಮಲಾಪುರ ಪ್ರದೇಶದ ಮನೆಯಲ್ಲಿ ಕಂಡದನ್ನು ಸುನೀತಾ ಹೇಳುತ್ತಾರೆ - ಕಾಮ್ರೇಡ್ ಮನೆಯ ಒಳಗೆ ಹೋದೆ, ಆತ್ಮೀಯವಾಗಿ ಬರಮಾಡಿಕೊಂಡರು, ನಾನು ಒಂದೊದೇ ಪ್ರಶ್ನೆ ಕೇಳಲು ಶುರುವಾದಂತೆ ಎಲ್ಲವನ್ನೂ ವಿವರಿಸಿದರು. ಬಾಯಿಂದ ಮಾತೂ ಕಣ್ಣಿಂದ ನೀರೂ ಏಕಕಾಲದಲ್ಲಿ ಹೊರಬೀಳುತ್ತಿದ್ದವು. ಕಡು ಬಡವರಾದ ಇವರಿಗೆ ಹತ್ತು ಜನ ಮಕ್ಕಳು 6 ಗಂಡು ಮತ್ತು 4 ಹೆಣ್ಣು, ಇಬ್ಬರು ಹಿರಿಯರೂ ಸೇರಿ ಹನ್ನೆರಡು ಜನರಿದ್ದಾರೆ. ಶಾಲೆಯ ಮುಖವನ್ನು ಯಾರೂ ನೋಡಿಲ್ಲ, ಎಲ್ಲರದು 10-15 ರೂ ಕೂಲಿಯ ಬದುಕು, ಅದು ಮೂರು ತಿಂಗಳು ಮಾತ್ರ ಸಿಗುತ್ತದೆ.

ಅನಾರೋಗ್ಯದ ಹಾಸಿಗೆಯಿಂದ ಕೆಮ್ಮಿದ ಯಜಮಾನರು ನಮ್ಮಕ್ಕಳನ್ನು ಶಾಲೀಗೆ ಕಳಿಸಿದ್ರೆ ಹೊಟ್ಟೆಗೇನ್ಮಾಡೊದ್ರಿ, ಶಾಲೀಗೋದ್ರೆ ಕೂಲಿಗ್ಯಾರ್ರೀ ಹೋಗೋದು ಎಂದರು.

ಹುಷಾರಿಲ್ಲದಿದ್ರೆ ವೈದ್ಯರಿಗೆ·ತೋರಿಸಬೇಡವೆ ಎಂದರೆ "ವೈದ್ಯರಿಗೆ, ಶಾಲೀಗೆ ಕೂಲಿಮಾಡಿ ಹ್ಯಾಂಗ್ರಿ ಹಣ ಹೊಂಚೋದು, ಹಣಯಿಲ್ದ ನಮಂತೋರ್ಗೆ ಆ ದೇವರೆಗತಿ ನೋಡ್ರಿ" ಎಂದರು. ಇಷ್ಟರ ನಂತರ ಮನೆಯಿಂದ ಹೊರಡುವಾಗ ನಮ್ಮಿಂದ ಏನಾದರೂ ಸಹಾಯ ಸಿಗುವ ಹಂಬಲದಿಂದ ನಮ್ಮನ್ನು ಕಳುಹಿಸಿದರು ಎನ್ನುತ್ತಾ, ನಾವಷ್ಟು ದೊಡ್ಡ ಮನೆಯಲ್ಲಿದ್ದರೂ ಬದುಕುವುದು ಕಷ್ಟ ಎನಿಸುತ್ತದೆ, ಆದರೆ ಇವರು ಇಷ್ಟು ಚಿಕ್ಕ, ಹಸು- ಮೇಕೆ ಕುರಿಗಳ ಕಕ್ಕಸಿನ ಮಧ್ಯೆ 10-12 ಜನ ಹೇಗೆ ಬದುಕುತ್ತಾರೆ - ಎಂದು ಮತ್ತೊಮ್ಮೆ ಪ್ರಶ್ನಿಸಿದರು.

No Property,
How They are living:

(ಆಸ್ತಿಯೇ ಇಲ್ಲ, ಹೇಗೆ ಬದುಕುತ್ತಿದ್ದಾರೆ)

ಹೀಗೆಂದು ಪ್ರಶ್ನಿಸಿದವರು ಎಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್ ಕಲಿಯುತ್ತಿರುವ ಬೆಂಗಳೂರಿನ ಎಸ್.ಎಫ್.ಐ. ಸಂಗಾತಿ ಸಂತೋಷ್. ಹರಪ್ಪನಹಳ್ಳಿ ಹೊರವಲಯದ ಟೈಲರಿಂಗ್ ವೃತ್ತಿ ಮಾಡುವವರ ಮನೆಗೆ ಹೋದಾಗ ಹೆಂಡತಿಯನ್ನು ಕಳಕೊಂಡಿರುವ ಟೈಲರ್‌ರವರು ಸ್ವಲ್ಪ ವಿದ್ಯಾವಂತರು. ಅವರಿಗೆ ಯಾವುದೇ ಆಸ್ತಿಯೂ ಇಲ್ಲ, ಒಬ್ಬ ಮಗ ಎಸ್.ಎಸ್.ಎಲ್.ಸಿ. ಓದಿದ್ದಾನೆ. ಮುಂದೆ ಓದಿಸಲು ಹಣವಿಲ್ಲವಂತೆ ಅದಕ್ಕೆ ಟೈಲರ್ "Fees, Donation ಕೊಡಾಕ ಹಣಯಿಲ್ಲ, ಸಾಲ ಸೋಲ ಮಾಡಿ ಓದಿಸಿದರೆ Govt job ಸಿಗತೈತ" ಎಂದು ಪ್ರಶ್ನಿಸುತ್ತಾರೆ. ಜಮೀನಿಲ್ಲಾ ಬಾಡಿಗೆ ಮನೆ, ಕೆಲಸ ಮಾಡಿದರೆ ಊಟವಂತೆ ಎನ್ನುತ್ತಾ ಸಂತೋಷ್ "They told that they have no property How they are livin Comrade"?

"ಇವ ಐದಕ್ಕೆ ಪೇಲ್ರಿ, ಅದಕ್ಕೆ ಕೂಲಿಗಚ್ಚೀನಿ"

ಎಂದು ಸಂಗಾತಿ ಚಿದಾನಂದ ದೊರೆಗೆ ಹೇಳಿದವರು ಎರಡೆತ್ತಿಗ ಹಳ್ಳಿಯ ಬಡರೈತ ಜಂಬಯ್ಯ. ವಿದ್ಯುತ್ ಸೌಲಭ್ಯವಿಲ್ಲದ ಸಣ್ಣ ಮನೆಯಲ್ಲಿ ವಾಸಿಸುತ್ತಿರುವ ಜಂಬಯ್ಯ ಅನಕ್ಷರಸ್ಥನಾದರೂ ತಮ್ಮ ಮಗನನ್ನು ಓದಿಸಲು ಶಾಲೆಗೆ ಹಚ್ಚಿದರಂತೆ. ಕೂಲಿ ಮಾಡಿದರೂ, ಮಗನಿಗೆ ಸ್ಲೇಟು ಬಳಪ ಕೊಡಿಸಿದರಂತೆ, ನಾಲ್ಕನೇ ತರಗತಿವರೆಗೆ ಪಾಸು ಮಾಡಿದನಂತೆ, 5ನೇ ತರಗತಿಗೆ 5 ಕಿ.ಮಿ. ದೂರದ ಹಳ್ಳಿಗೆ ಶಾಲೆಗೆ ಸೇರಿಸಿದರಂತೆ.

ನಮ್ಮನಿಯಾಗ ಕರೆಂಟಿಲ್ರೀ ಅದಕ್ಕೆ ರಾತ್ರಿನಾಗ ಇವ ಓದಲ್ಲ, ಶಾಲಿನಲ್ಲಿ ಒಬ್ಬನೆ ಮೇಸ್ಟ್ರೇಯಿದಾನಂತೆ ಅವ ಸರೀ ಪಾಠ ಮಾಡಲ್ಲಂತೆ, ನಮ್ಮಗ ಶಾಲೀಗೋಗೀನೂ ಪೇಲಾದನ್ರೀ. ಅದಕ್ಕೆ ಇವ ಮುಂದೋದಂಗಿಲ್ಲ, ಪಗಾರ ತರಂಗಿಲ್ಲ ಅಂಥ ಶಾಲಿಬಿಡಿಸಿ ಕೂಲಿಗಚ್ಚಿನಿ. ಈಗ ಸ್ವಲ್ಪ ಬುದ್ಧಿ ಬಂದು, ಆರಾಮಿದಾನ್ರೀ ಅದಕ್ಕೆ ಇವರವ್ವಗೆ ಸ್ವಲ್ಪ ಹುಷಾರಿಲ್ಲಾಂತ, ಮದುವೆ ಮಾಡಾಕ್ಸುರು ಮಾಡಿವ್ರಿ ಎಂದು ತನ್ನ 15-16 ವರ್ಷದ ಮಗನನ್ನು ತೋರಿಸಿದರು ಎಂದನು ಸಂಗಾತಿ ಚಿದಾನಂದ ದೊರೆ.

"ಶಾಲೆಯಲ್ಲಿ ಮೇಸ್ಟರಿಲ್ಲ ಕಲಿಯುವುದೇನಿದೆ":

ಎಂದು ರಾಯಚೂರಿನ ಸಂಗಾತಿ ವೀರಭದ್ರನನ್ನು ಪ್ರಶ್ನಿಸಿದವರು ಅದೇ ಎರಡೆತ್ತಿನ ಹಳ್ಳಿಯ ರೈತ ಸಾಲಪ್ಪ.

ವೀರಭದ್ರ ನೋಡಿದ್ದ 9 ಜನ ಮಕ್ಕಳಿರುವ ಸಾಲಪ್ಪನಿಗೆ 4 ಎಕ್ಕರೆ ಹೊಲವಿದೆ. ತಮ್ಮ ಹೊಲ ಮತ್ತು ಕೂಲಿ ಎರಡನ್ನೂ ನಂಬಿ ಬದುಕು ಸಾಗಿಸುತ್ತಿದಾರೆ.

ಮೊದಲ6 ಜನ ಮಕ್ಕಳನ್ನು ಶಾಲೆಗೆ ಕಳುಹಿಸಲು ಸಾಧ್ಯವಾಗಲಿಲ್ಲ, ಏಕೆಂದರೆ ಬಡತನ ಕಾಡುತ್ತಿತ್ತಂತೆ. ಈಗ ಪರಿಸ್ಥಿತಿ ಸ್ವಲ್ಪ ಬದಲಾಗಿದೆ, ಹಾಗಾಗಿ ಕೊನೆಯ ಮೂರು ಮಕ್ಕಳನ್ನು ಶಾಲೆಗೆ ಹಚ್ಚಿದ್ದಾರೆ, ಮನೆಯಿಂದ 2 ಕಿ.ಮಿ. ದೂರದಲ್ಲಿರುವ ಶಾಲೆಯಲ್ಲಿ ಒಬ್ಬರು ಶಿಕ್ಷಕರು ಮಾತ್ರವಿದ್ದು, ಸರಿಯಾಗಿ ಶಾಲೆಯೇ ನಡೆಯುವುದಿಲ್ಲ ವಂತೆ, ಹಾಗಾಗಿ ಅವರ ಮಕ್ಕಳು ಶಾಲೆಯಲ್ಲಿರುವಷ್ಟೆ ಸಮಯ ಮನೆಯಲ್ಲಿ ಇರುತ್ತಾರಂತೆ.

ಅದಕ್ಕೆ ಸಾಲಪ್ಪ "ಶಾಲಿಗ್ಹೋಗಿ ಏನೂ ಕಲಿಯಂಗಿಲ್ರೀ ಮೇಸ್ಟರಿಲ್ಲದ ಶಾಲೀನಾಗ ಏನಾ ಕಲೀತಾರೆ ಆ ಶಾಲೀ ಬಿಡಿಸಿ ಕೂಲೀಗಚ್ಚೀರೆ ಎರಡು ಕಾಸಾದ್ರು ಸಂಪಾದನೆಯಾಗತ್ತೆ" ಎಂದು ನಕ್ಕರು.

"ಹೆಣ್ಣು ಮಕ್ಕಳನ್ನು ಹೆಚ್ಚು ಓದಿಸಿದರೆ ಕೇಡು ತಪ್ಪಿದ್ದಲ್ಲ"

ಕೋಲಾರದ ಸಂಗಾತಿ ಗೀತಾರವರು ಕುರುಬರ ಕಾಲೋನಿಯ ಮಲ್ಲಮ್ಮನ ಮನೆಗ್ಹೋದಾಗ ಸಂಜೆಯ ಅಡಿಗೆಗೆ ತಯಾರಿ ನಡೆಯುತ್ತಿತ್ತು. 20 ಎಕರೆ ಭೂಮಿ ಮತ್ತು ಟ್ರಾಕ್ಟರ್ ಒಡೆಯರಾದ ಮಲ್ಲಮ್ಮನವರದು 20 ಜನರ ಸಂಸಾರ ನೈಸರ್ಗಿಕ ಕುಟುಂಬ ಕಲ್ಯಾಣದ ವರೆಗೆ ಹಡೆದ 18 ಜನ ಮಕ್ಕಳು, ಗಂಡಮಕ್ಕಳೆಲ್ಲರಿಗೂ ಅಲ್ಪಸ್ವಲ್ಪ ವಿದ್ಯಾಭ್ಯಾಸ ಸಿಕ್ಕಿದೆ. ಒಬ್ಬ ಮಗ ಮಾತ್ರ ಬಿ.ಎ. ವರೆಗೆ ಕಲಿತಿದ್ದಾನೆ. ಹೆಣ್ಣು ಮಕ್ಕಳಂತೂ ಯಾರೂ ಓದಲಿಲ್ಲ. ಹೆಣ್ಣು ಮಕ್ಕಳನ್ನು ಏಕೆ ಓದಿಸಲಿಲ್ಲ ಎಂದಾಗ ಮಲ್ಲಮ್ಮ "ಅವರನ್ನು ಹ್ಯಾಂಗ ಓದಿಸೋದು ಓದಿದ್ರು ಅಂದ್ರ ಮದುವೆ ಮಾಡಾಕ ಓದಿರೊ ಹುಡುಗನೇ ಬೇಕು ಅಂತಾರ, ಅವರಿಗೆ ಕೇಳಿದಷ್ಟು ವರದಕ್ಷಿಣೆ ಕೊಡಬೇಕ್ರೀ ಹೆಣ್ಣು ಮಕ್ಕಳೇನು ದುಡಿತಾರೇನ್ರೀ? ಮತ್ತೆ ಕಾಲೇಜಿಗೆ ಹೋದ್ರೆ ದಾರಿ ತಪ್ತಾರಾ, ಅದಕ್ಕೆ ನಾವ ಅವರನ್ನು ಶಾಲೀಗೆ ಹಚ್ಚಾಕ್ಹೋಗಿಲ್ಲ" ಎಂದು ತಮ್ಮನ್ನು ಸಮರ್ಥಿಸಿಕೊಂಡರು.

"ಗೌಡರು ಹೇಳಿದರಂತೆ, ಮದುವೆ ಮಾಡಿದರಂತೆ"

ಎಂದವರು ಬೆಂಗಳೂರು ಸಂಗಾತಿ ಸ್ವರೂಪ. ಅವರು ಹೇಳುತ್ತಾರೆ, ಸೂರ್ಯನ ಕಿರಣಗಳು ಚಿತ್ತಾರ ಮಾಡಿಸಿದ್ದ ಗುಡಿಸಲು ಮನೆಹೊಕ್ಕಾಗ ಮನೆಯಲ್ಲಿದ್ದವರೆಲ್ಲ ಸುತ್ತುವರೆದು ಕುಳಿತರು. ವಯಸ್ಸಾದ ತಾಯಿಯ ಜತೆ 11 ಜನ ಮಕ್ಕಳು, 10-15 ರೂ ಕೂಲಿಯ ಬದುಕು ಒಬ್ಬ ಮಗನನ್ನು ಮಾತ್ರ ಎಲ್.ಎಸ್.ಎಲ್.ಸಿ. ತನಕ ಓದಿಸಿದ್ದಾರೆ, ಕಾಲೇಜಿಗೆ ಕಳಿಸಲು ಹಣವಿಲ್ಲವಂತೆ, 8 ಜನ ಹೆಣ್ಣುಮಕ್ಕಳಲ್ಲಿ ಎಲ್ಲರಿಗೂ ಬಾಲ್ಯವಿವಾಹವಾಗಿದೆ. ದೊಡ್ಡಮಗಳ ವಯಸ್ಸು 16 ವರ್ಷ ಕಡೆಯವಳು 8 ವರ್ಷ ಎಲ್ಲರ ಡ್ಯೂಟಿಯೂ ಕೂಲಿಯೇ.

ಎಲ್ಲರಿಗೂ ಇಷ್ಟು ಬೇಗ ಮದುವೆ ಏಕೆ?

ನೋಡ್ರಿ ಮನಿಯಾಗ ಹೆಣ್ಣುಮಕ್ಕಳು ಉಳಿಯಂಗಿಲ್ಲ ಉಳಿದ್ರಾ ತಪ್ಪಾಗುತ್ತೈತಿ, ಅದಕ್ಕಾ ನಮ್ಮ ಗೌಡರು ಎಲ್ಲರಿಗೂ ಮದುವೇ ಮಾಡಕೇಳಿದ್ರು, ಅದಕ್ಕೆ ಮಾಡಿ ಮುಗಿಸಿವ್ರೀ ಮದುವೆ ಮಾಡಿಲ್ಲ ಅಂದ್ರ ಗೌಡ್ರು ಬಿಡಂಗಿಲ್ಲ ನೋಡ್ರಿ" ಎಂಡರು.

"ಕಾಮ್ರೇಡ್ ಗೋಡೆಯಲ್ಲೇ ಸಿಂಗರಿಸಿಕೊಂಡೆ"

ಉ.ಕ.ದ ಸಂಗಾತಿ ಬಾಲಕೃಷ್ಣ ಹರಪನ ಹಳ್ಳಿಯ ಮುಖ್ಯ ಬೀದಿಯಲ್ಲಿರುವ ನಿಂಗಪ್ಪ ಎನ್ನುವವರ ಮನೆಗೆ ಹೋಗುವಾಗಲೇ ಗೋಡೆಗೆ ಹಾಕಿದ್ದ ಅಮೃತ ಶಿಲೆಯಲ್ಲಿ ಕೆದರಿದ ಕೂದಲನ್ನು ನೋಡಿ ಬಾಚಿಕೊಂಡರಂತೆ,

ಈ ಸಂಗಾತಿ ಹೇಳುತ್ತಾರೆ "ಬಂಗಲೆ ರೀತಿಯ ಮನೆಯಲ್ಲಿ 18 ಜನರು ವಾಸಿಸುತ್ತಾರೆ, 18 ಜನರಲ್ಲಿ ಎಲ್ಲರೂ ಉತ್ತಮ ಶಿಕ್ಷಣ ಪಡೆದಿದ್ದಾರೆ. 8 ಜನರು ಪದವೀದರರು, ಸದೃಡವಾಗಿದ್ದಾರೆ. 7 ಜನ ಸರ್ಕಾರಿ ನೌಕರಿಯಲ್ಲಿದ್ದಾರೆ, ಹಿರಿಯ ಮಗ ದೊಡ್ಡ ಹೋಟೆಲ್ ನಡೆಸುತ್ತಾರೆ ಎನ್ನುತ್ತಾ ಹರಪನ ಹಳ್ಳಿಯಂತ ಹಿಂದುಳಿದ ಪ್ರದೇಶದಲ್ಲಿ ಇಷ್ಟೊಂದು ಅದ್ದೂರಿಯಾಗಿ ಬದುಕುವ ಶ್ರೀಮಂತರಿದ್ದಾರಲ್ಲ" ಎಂದು ಚಕಿತಗೊಂಡನು.

ಹೀಗೆ ಸಮೀಕ್ಷೆ ನಡೆಸಿದ ಪ್ರತಿಯೊಬ್ಬ ಸಂಗಾತಿಯ ಅನುಭವವೂ ಭಿನ್ನ, ಸಂಕಷ್ಟಗಳ ಸುಳಿಯಲ್ಲಿ ಸಿಕ್ಕವರು ನಾಗರೀಕತೆಯೇ ಹತ್ತಿರ ಸುಳಿಯದವರು, ಎಲ್ಲವನ್ನು ಪಡೆದವರು.... ಹೀಗೆ ಎಲ್ಲವನ್ನು ನೋಡಿದ ಸಂಗಾತಿಗಳು, ಹೇಳಿದ್ದು ಒಂದೇ 'ಕಾಮ್ರೇಡ್ ಇದನ್ನೆಲ್ಲ ನೋಡಿ ನಾವ ಬೆಚ್ಚಿ ಬಿದ್ದೆವು'!

---

56 ಕುಟುಂಬಗಳು 500 ಕ್ಕೂ ಹೆಚ್ಚು ಜನರು ಹೆಕ್ಕಿದರೂ ಸಿಕ್ಕರು ಐವರು ಅಕ್ಷರಸ್ತರು

ಹರಪನ ಹಳ್ಳಿಯ ದೇಹದಲ್ಲೇ ಹುದುಗಿರುವ ಹರಿಶ್ಚಂದ್ರ ಕಾಲೋನಿಯ ವ್ಯಥೆಯ ಕಥೆಯನ್ಹೇಳಲು ಮೇಲಿನ ಸಾಲುಗಳೇ ಸಾಕು.

ಸರ್ವಧರ್ಮಿಯರು ಸಹಬಾಳ್ವೆ ನಡೆಸುತ್ತಿರುವ ಈ ಕಾಲೋನಿಯಲ್ಲಿ ಎಲ್ಲ ಜಾತಿಯ ಜನರೂ ವಾಸಮಾಡುತ್ತಿದ್ದಾರೆ.

ಈ ಕಾಲೋನಿಯನ್ನು ಹೊಕ್ಕ ಕೂಡಲೆ ಕಾಣಿಸುವುದು ಗುಡಿಸಲುಗಳ ಬಡತನದ ಸಮಾನತೆ. ಪುಟ್ಟ-ಪುಟ್ಟ ತೆಂಗಿನ ಗರಿಗಳಿಂದ ಕಟ್ಟಿದ ಗುಡಿಸಲಿನಲ್ಲಿ ವಾಸಿಸುತ್ತಿರುವ ಈ ಭಾರತೀಯರಿಗೆ ಭಾರತ ದೇಶದ ಭೂಮಿಯ ಒಂದಿಂಚನ್ನೂ ತಮ್ಮದೆಂದು ಹೇಳಿಕೊಳ್ಳಲಾಗುತ್ತಿಲ್ಲ. ಇಲ್ಲಿನ ಯಾರಿಗೂ ತಮ್ಮ ಶಕ್ತಿಹೀನ ಕೈಗಳು, ಬತ್ತಿದ ದೇಹಗನ್ನೊರತು ಪಡಿಸಿ, ತಮ್ಮದೇನೂ ಇಲ್ಲ. ಎಲ್ಲರೂ ಶ್ರೀಮಂತರ ಹೊಲಗದ್ದೆಗಳಲ್ಲಿ ದುಡಿಯುವ ದೇಹಗಳು. ದಿನದ ದುಡಿಮೆಗೆ ಅವರ ಗಳಿಕೆ ಮಹಿಳೆಗೆ 10-15 ಪುರುಷನಿಗೆ 15-20 ರೂ. ಮಕ್ಕಳಾದರೆ -8-10 ರೂ.

ಮೊದಲು ಹರಪ್ಪನ ಹಳ್ಳಿಯ ರಸ್ತೆಬದಿಯ ಸರ್ಕಾರಿ ಹಳ್ಳವೊಂದರಲ್ಲಿ ಗುಡಿಸಲು ಕಟ್ಟಿಕೊಂಡು ವಾಸಿಸುತ್ತಿದ್ದ ಜನರನ್ನು ಸರ್ಕಾರ 4 ವರ್ಷಗಳ ಹಿಂದೆ ಒಕ್ಕಲೆಬ್ಬಿಸಿತು. ಅನಾಥರಾದ ಇವರು ಪಕ್ಕದಲ್ಲೆ ಇದ್ದ ಚಂದ್ರ ಮೌಳಿ ಮಠದವರ ಜಾಗದಲ್ಲಿ ಆಶ್ರಯ ಪಡೆದರು ಈ ಚಂದ್ರಮೌಳಿ ಮಠದವರು ರಾಜ್ಯ ಹೈಕೋರ್ಟಿನಿಂದ ಇವರನ್ನು ಹೊರದೂಡಲು ಆದೇಶ ತಂದಿದ್ದಾರೆ. ಚಂದ್ರ ಮೌಳಿ ಮಠದ ಜಾಗದಿಂದ ಭಾರತಾಂಬೆಯ ಮಡಿಲಿಗೆ ತಂದು ನೂಕುತ್ತಾರೆ.

ಇವರಲ್ಲಿರುವವರಲ್ಲಿ 10-15 ಕುಟುಂಬಗಳಿಗೆ ಹಸಿರು ಪಡಿತರ ಚೀಟಿಯಿದೆ, ಆದರೆ ಪಡಿತರ ಸಿಗದು, ಸಿಕ್ಕರು ಹೊಟ್ಟೆ ತುಂಬದು ಹೊಟ್ಟೆ ತುಂಬಿದರೆ ಕಲಬೆರಕೆಯ ಕಲ್ಲುಗಳು ಹೊಟ್ಟೆಯಲ್ಲಿ ನಾಟ್ಯಮಾಡುತ್ತವೆ. ಹಾಗಾಗಿ ಸಾಮಾನ್ಯವಾಗಿ ಹೊರಗಡೆ ಮಾರುಕಟ್ಟೆಯಲ್ಲೇ ಕೊಳ್ಳಬೇಕಾಗಿರುವುದರಿಂದ ಅಲ್ಲಿಯೂ ಶೋಷಣೆಯ ಸುಳಿಗೆ ಸಿಕ್ಕಿದ್ದಾರೆ.

ಸಹಾಯ ಮಾಡಿದರೆ ಸಂಘ ಕಟ್ಟುತ್ತೇವೆ?

ಅವರ ಈ ಸಮಸ್ಯೆಗಳನ್ನು ಕೇಳಿದ ನಂತರ ಕಾಲೋನಿಯ ಯಜಮಾನ, ಮಲ್ಲಯ್ಯನನ್ನು ಸಂಘ ಕಟ್ಟಿ ಕೊಳ್ಳಲು ತಮ್ಮ ಸಮಸ್ಯೆಗಳ ಪರಿಹಾರಕ್ಕೆ ಹೋರಾಡಲುಹೇಳಿದರೆ " ನಮ್ಮಲ್ಲಿ ಯಾರಿಗೂ ಅಕ್ಷರ ತಿಳೀದ್ರೀ, ತಿಳುವಳಿಕ್ಕಿಲ್ಲ, ಯಾರಾದ್ರೂ ನಿಮ್ಮಂತೋರು ಸಹಾಯ ಮಾಡಿದ್ರೆ ಸಂಘ ಕಟ್ತೇವ್ರಿ ಹೋರಾಡ್ತೀವ್ರಿ"

ಟಿ.ಎಲ್.ಕೆ

ಅಸ್ಸಾಂನಲ್ಲಿ ಮೂರು ಮಹಿಳಾ ಕಾರ್ಮಿಕರ ಕಗ್ಗೊಲೆಯ ವಿರುದ್ಧ ಹೋರಾಟ

ಧನ ಬೆಂಬಲ ನೀಡಲು ಸಿಐಟಿಯು ಕರೆ

ಅಸ್ಸಾಂ ರಾಜ್ಯದ ಕೋಕ್ರಾಜಾರ್ ಜಿಲ್ಲೆಯಲ್ಲಿರುವ ಮರೋನಿ ಚಾತೋಟದ ಮೂವರು ಸಿಐಟಿಯು ಮಹಿಳಾ ಕಾರ್ಯಕರ್ತೆಯರನ್ನು ತೋಟದ ಆಡಳಿತ ಮಂಡಳಿಯವರು ಮತ್ತು ಐಎನ್‌ಟಿಯುಸಿ ಯವರು ಸೇರಿ ನೇಮಿಸಿದ ಬಾಡಿಗೆ ಕೊಲೆಗಡುಕರು ದಿ. 16.5.99 ರಂದು ಹಾಡು ಹಗಲೇ ಗುಂಡಿಕ್ಕಿ ಕಗ್ಗೊಲೆಗೈದಿರುವ ಅಮಾನುಷ ಕೃತ್ಯವನ್ನು ಕರ್ನಾಟಕ ಪ್ಲಾಂಟೇಷನ್ ಕಾರ್ಮಿಕರ ರಾಜ್ಯ ಒಕ್ಕೂಟ ಉಗ್ರವಾಗಿ ಖಂಡಿಸಿದೆ.

ಬಿಹಾರದ ನಾರ್ದರ್ನ್ ಇವೇಂಗ್ ಲೈಕಲ್ ಲೂಥರನ್ ಚರ್ಚ್ ದುರೂಕ ಕೋಕ್ರಾಜಾರ್‌ನಲ್ಲಿ ಮರೋಲಿ ಟೀ ಎಸ್ಟೇಟ್ಸ್ ಎಂದು ನಾಲ್ಕು ಚಾ ತೋಟಗಳನ್ನು ಹೊಂದಿದ್ದು ಸುಮಾರು 2500 ಕಾರ್ಮಿಕರು ಇಲ್ಲಿ ದುಡಿಯುತ್ತಿದ್ದಾರೆ. ಇವರ ಪೈಕಿ ಸುಮಾರು 1500 ಮಂದಿ ಕಾರ್ಮಿಕರನ್ನು ತಾತ್ಕಾಲಿಕ ಕಾರ್ಮಿಕರೆಂದು ವರ್ಷಗಟ್ಟಲೆ ಯಿಂದ ಪರಿಗಣಿಸಿ ವಿವಿಧ ಕಾನೂನುಗಳ ಸೌಲಭ್ಯಗಳನ್ನು ವಂಚಿಸಲಾಗಿದೆ.

ಈ ತೋಟದ ಬಹುತೇಕ ಕಾರ್ಮಿಕರು 1995 ರಲ್ಲಿ ಸಿಐಟಿಯು ವಿನಡಿ ಸಂಘಟಿತರಾಗಿ ತಮ್ಮ ಹಕ್ಕುಗಳನ್ನು ಕೇಳಲು ಪ್ರಾರಂಭಿಸಿದ ಕೂಡಲೇ ಕಾರ್ಮಿಕರ ಮೇಲೆ ಅವ್ಯಾಹತ ದಾಳಿ ಪ್ರಾರಂಭವಾಯಿತು. ಅನೇಕರನ್ನು ಕೆಲಸದಿಂದ ತೆಗೆಯಲಾಯಿತು. 1996 ರ ಸೆಪ್ಟೆಂಬರ್ 26 ರಂದು ಕೆಲಸದಿಂದ ತೆಗೆದುಹಾಕಲ್ಪಟ್ಟ ಹೋರಾಟಗಾರ್ತಿ ಸಾಗರೀಕ ಸುರೇನ್‌ರನ್ನು ಕ್ರೂರವಾದ ರೀತಿಯಲ್ಲಿ ಕೊಲೆ ಮಾಡಿದ್ದನ್ನು ಜ್ಞಾಪಿಸಬಹುದು. ಸಂಗಾತಿ ಸಾಗರೀಕ ಸುರೇನ್ ರ ಕೊಲೆಯಿಂದ ಕಾರ್ಮಿಕರು ಧೃತಿಗೆಡುವ ಮೂಲಕ ಸಂಘಟನೆಯನ್ನು ಮುರಿಯಬಹುದು ಎಂದು ಗ್ರಹಿಸಿದ ಆಡಳಿತ ಮಂಡಳಿಯವರ ಭ್ರಮೆಯನ್ನು ಕಾರ್ಮಿಕರು ಹುಸಿಗೊಳಿಸಿದರು. ತಮ್ಮ ಹಕ್ಕುಗಳಿಗಾಗಿ ಸಿಐಟಿಯು ಸಂಘಟನೆಯನ್ನು ಮತ್ತಷ್ಟು ಬಲಪಡಿಸುವ ಮೂಲಕ ಹೋರಾಟವನ್ನು ಮುಂದುವರಿಸಿದರು.

ಇದನ್ನು ಸಹಿಸದ ಆಡಳಿತ ಮಂಡಳಿಯವರು ತೋಟದ ಯೂನಿಟ್‌ನ ಸಹಕಾರ್ಯದರ್ಶಿ ಅನಬಿಟ್ ಬರ್ಲರನ್ನು 1999 ರ ಜನವರಿ 31 ರ ರಾತ್ರಿ ಗುಂಡಿಕ್ಕಿ ಕೊಂದರು. ಅವರ ಜೊತೆಯಲ್ಲಿದ್ದ ಅವರ ಪತಿಯನ್ನು ಗುಂಡಿಕ್ಕಿದ ಪರಿಣಾಮವಾಗಿ ತೀವ್ರ ಗಾಯವಾಗಿ ಈಗಲೂ ಗೌಹಾತಿ ಮೆಡಿಕಲ್ ಕಾಲೇಜ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಅವರ ಸ್ಥಿತಿ ಚಿಂತಾಜನಕವಾಗಿದೆ. ಆಡಳಿತ ಮಂಡಳಿಯ ಈ ದುಷ್ಕೃತ್ಯಗಳಿಂದ ಕಾರ್ಮಿಕರು ವಿಚಲಿತರಾಗದಿರುವುದರಿಂದ ಸದರಿ ತೋಟದ ಯುನಿಟ್ ಕಾರ್ಯದರ್ಶಿ ಮತ್ತು ಅಸ್ಸಾಂ ಸಿಐಟಿಯು ರಾಜ್ಯ ಸಮಿತಿ ಸದಸ್ಯೆ ಸೀತಾ ಮರಂಡಿ ಹಾಗೂ ಅವರ ಇಬ್ಬರು ಜೊತೆ ಕಾರ್ಮಿಕರಾದ ಸಂಗಾತಿ ಮಿಸ್ಸಾಗುರಿಯಾ ಮತ್ತು ನಾಮ್ಲಿಂಗ್ ಗುರಿಯಾ ಈ ಮೂವರು ಮಹಿಳಾ ಕಾರ್ಮಿಕರನ್ನು 16.5.99 ರಂದು ಅವರು ಪಕ್ಕದ ಗುರಿಪುರ ಟೌನ್‌ನಲ್ಲಿರುವ ಸಂಘದ ಕಚೇರಿಗೆ ಸಭೆಗೆ ಹೋಗಿ ಹಿಂತಿರುಗುತ್ತಿದ್ದಾಗ ಮರೋಲಿ ತೋಟದ ಸಮೀಪ ಡಿಂಗ್ ಡಾಂಗ್ ಬಜಾರ್‌ನ ಹತ್ತಿರ ಬಾಡಿಗೆ ಕೊಲೆಗಡುಕರು ಗುಂಡಿಕ್ಕಿ ಕೊಲೆಗೈದಿದ್ದಾರೆ.

ಪ್ರಾರಂಭದಿಂದಲೂ ಚಾ ತೋಟದ ಮಾಲೀಕರೊಡನೆ ಶಾಮೀಲಾಗಿ ಅಸ್ಸಾಂನ ಚಾ ತೋಟದ ಲಕ್ಷಾಂತರ ಕಾರ್ಮಿಕರಿಗೆ ದ್ರೋಹ ಬಗೆಯುತ್ತಿರುವ ಅಸ್ಸಾಂ ಐಎನ್‌ಟಿಯುಸಿ ಮುಖಂಡರು ಅಸ್ಸಾಂ ತೋಟಗಳಲ್ಲಿ ಸಿಐಟಿಯು ತಲೆ ಎತ್ತದಂತೆ ಮಾಡಲು ತೋಟ ಮಾಲೀಕರೊಡನೆ ಸೇರಿಕೊಂಡಿದ್ದಾರೆ.

ಅಸ್ಸಾಂ ಚಾ ತೋಟ ಕಾರ್ಮಿಕರು ತಮ್ಮ ಹಕ್ಕುಗಳಿಗಾಗಿ ಹಲವಾರು ಸಂಗಾತಿಗಳನ್ನು ಕಳೆದುಕೊಂಡರು ತಮ್ಮ ಧೀರ ಹೋರಾಟವನ್ನು ಸಿಐಟಿಯುವಿನಡಿ ಮುಂದುವರಿಸುತ್ತಿದ್ದಾರೆ. ಸಂಗಾತಿ ಸೀತಾ ಮರಂಡಿ ಮತ್ತು ಅವರ ಇಬ್ಬರು ಸಹವರ್ತಿಗಳ ಕಗ್ಗೊಲೆಗೈದವರನ್ನು ಈ ವರೆಗೆ ಪೋಲೀಸರು ಬಂಧಿಸಿಲ್ಲ. ಕೂಡಲೇ ಕೊಲೆಗಡುಕರನ್ನು ಬಂಧಿಸಬೇಕು, ಕೊಲೆಗಡುಕರನ್ನು ನೇಮಿಸಿದ ತೋಟದ ಆಡಳಿತ ಮಂಡಳಿ, ಅವರೊಡನೆ ಪಿತೂರಿ ನಡೆಸಿದ ಐಎನ್‌ಟಿಯುಸಿ ಯವರನ್ನು ಬಂಧಿಸಿ ಶಿಕ್ಷೆಗೊಳಪಡಿಸಬೇಕೆಂದೂ, ಒತ್ತಾಯಿಸಿ 13.6.99 ರಂದು ಅಸ್ಸಾಂನ ರಾಜ್ಯದಾದ್ಯಂತ ಪ್ರತಿಭಟನಾ ದಿನ ಆಚರಿಸಲು ಅಸ್ಸಾಂ ಸಿಐಟಿಯು ನಿರ್ಧರಿಸಿದೆ. ಗಜಿಯಾಬಾದ್‌ನಲ್ಲಿ ಸೇರಿದ ಸಿಐಟಿಯು ಜನರಲ್ ಕೌನ್ಸಿಲ್ ತಾ.14.6.99 ರಂದು ಅಸ್ಸಾಂ ಚಾ ತೋಟದ ಕಾರ್ಮಿಕರ ಬೇಡಿಕೆಯನ್ನು ಒತ್ತಾಯಿಸಿ ಹೋರಾಟ ನಡೆಸಲು ಹಾಗೂ ಹೋರಾಟ ನಿರತ ಕಾರ್ಮಿಕರಿಗೆ ಧನ ಸಹಾಯ ನೀಡಲು ರಾಷ್ಟ್ರದ ಕಾರ್ಮಿಕ ವರ್ಗಕ್ಕೆ ಕರೆ ನೀಡಿದೆ.

ಈ ಕರೆಯನ್ನು ಮನ್ನಿಸಬೇಕೆಂದು ಪ್ಲಾಂಟೇಷನ್ ಕಾರ್ಮಿಕರ ರಾಜ್ಯ ಫೆಡರೇಷನ್ ಮನವಿ ಮಾಡಿಕೊಂಡಿದೆ.

ಒಂದು ಗ್ರಂಥಾಲಯ ಕಲಿಸಿದ ಪಾಠ

ಅಕ್ಟೋಬರ್ 31, 1998. ಪಶ್ಚಿಮ ಬಂಗಾಳದ ಹೂಗ್ಲಿ ಜಿಲ್ಲೆಯ ಖಾನಾಕುಲ್ ಪ್ರದೇಶದಲ್ಲಿದ್ದ ಬಾಲ್‌ಪ್ಯಾ ಸಾರ್ವಜನಿಕ ಗ್ರಂಥಾಲಯ ಅಗ್ನಿಕುಂಡಕ್ಕೆ ಸಿಲುಕಿ ಧ್ವಂಸವಾಯಿತು. ಪಂಚಾಯತ್ ಚುನಾವಣೆಗಳಲ್ಲಿ ಭಾರೀ ಸೋಲುಂಡ ತೃಣಮೂಲ ಕಾಂಗ್ರೆಸ್ಸಿನ ಮಂದಿ ರಾತ್ರಿಯ ಕಗ್ಗತ್ತಲಲ್ಲಿ ಅದಕ್ಕೆ ಬೆಂಕಿ ಹಚ್ಚಿ ಸುಟ್ಟುಹಾಕಿದರು. ಆದರೆ ಈಗ ಈ ಸಾರ್ವಜನಿಕ ಗ್ರಂಥಾಲಯ ಮತ್ತೆ ಎದ್ದು ಬರುತ್ತಿದೆ - ಪ್ರಜಾಪ್ರಭುತ್ವವಾದಿ ಜನತೆಯ ಅದಮ್ಯ ಚೇತನಕ್ಕೆ ಸಂಕೇತವಾಗಿ.

ಚುನಾವಣೆಯಲ್ಲಿ ಸೋತದಕ್ಕೆ ಗ್ರಂಥಾಲಯವನ್ನು ಸುಡುವುದೇಕೆ? ಇದೆಂತಹಾ ಸಂಸ್ಕೃತಿ ಎಂದು ನೀವು ಕೇಳಬಹುದು. ನಿಮ್ಮ ಪ್ರಶ್ನೆ ಸಹಜವೇ. ಆದರೆ ಫ್ಯಾಸಿಸ್ಟರ ಹೆಜ್ಜೆ ಜಾಡಿನಲ್ಲಿ ಸಾಗುತ್ತಿರುವವರ ಮಟ್ಟಿಗೂ ಇದು ಸಹಜವೇ ಆಗಿತ್ತು. ಈ ಗ್ರಂಥಾಲಯದ 'ತಪ್ಪಾದರೂ' ಏನು?

ಈ ಗ್ರಂಥಾಲಯ ಸುತ್ತಮುತ್ತಲಿನ ಪ್ರದೇಶದಲ್ಲಿ ಬೌದ್ಧಿಕ ಚಟುವಟಿಕೆಗಳ ಕೇಂದ್ರವಾಗಿತ್ತು. ಸುಮಾರು 800 ಸದಸ್ಯರನ್ನು ಹೊಂದಿದ್ದ ಇದರಲ್ಲಿ 5000 ಮ್ಯಾಗಝೀನ್‌ಗಳ ಪತ್ರಿಕೆಗಳು, ಪುಸ್ತಕಗಳು ಇದ್ದವು. ಸುತ್ತಲಿನ ಜನಗಳ ಪ್ರಜ್ಞೆಯ ಮಟ್ಟ ವಿಸ್ತರಿಸುವುದರಲ್ಲಿ ಅದು ವಹಿಸುತ್ತಿದ್ದ ಪಾತ್ರ ಅಮೂಲ್ಯ. ಇದನ್ನು ಹಿಟ್ಲರನ ಹೆಜ್ಜೆ-ಗುರುತುಗಳಲ್ಲಿ ಹೊರಟವರಿಗೆ ಹೇಗೆ ತಾನೇ ಸಹಿಸಲು ಸಾಧ್ಯ? ಅದನ್ನು ಈ ಭೂಮಿಯ ಮೇಲೆಯೇ ಇಲ್ಲದಂತೆ ಮಾಡಬೇಕು. ಮಮತಾರ ಬಂಟರು ಅದನ್ನೇ ಮಾಡಿದರು. ಆದರೆ ಹಿಟ್ಲರನ ಮಂದೆಗಳು ಸೋತಲ್ಲಿ, ತಾವು ಗೆಲ್ಲುತ್ತೇವೆಂಬ ಅವರ ನಿರೀಕ್ಷೆ ಹುಸಿಯಾಯಿತು.

ಈಗ ಅದೇ ಸ್ಥಳದಲ್ಲಿ ಹೊಸದೊಂದು ಗ್ರಂಥಾಲಯ ತಲೆ ಎತ್ತುತ್ತಿದೆ. ಇದಕ್ಕೆ ಸಹಾಯ ಎಲ್ಲೆಡೆಗಳಿಂದ ಹರಿದು ಬಂತು. ವಿಶ್ವಸಂಸ್ಥೆಯ ಅಂಗ ಸಂಘಟನೆ ಯುನೆಸ್ಕೊ ಕೂಡಾ ನೆರವು ಒದಗಿಸಲು ಮುಂದೆ ಬಂದಿದೆ. ಸುಮಾರು 400 ಸಂಘಟನೆಗಳು ಹೊಸ ಗ್ರಂಥಾಲಯಕ್ಕೆ ಹಣ ನೀಡಿದ್ದಾರೆ ಅಥವಾ ನೀಡುವ ವಚನ ಕೊಟ್ಟಿದ್ದಾರೆ. ಈಗಾಗಲೇ 1.35 ಲಕ್ಷ ರೂ. ಸಂಗ್ರಹವಾಗಿದೆ. ರಾಜ್ಯ ಸರಕಾರ 4 ಲಕ್ಷ ರೂ. ಕೊಟ್ಟಿದೆ. ಕಟ್ಟಡದ ನಿರ್ಮಾಣದ ಮೇಲುಸ್ತುವಾರಿಗೆ ಒಂದು ಸಮಿತಿ ರಚಿಸಲಾಗಿದೆ. ಮೇ 29 ರಂದು ಹೂಗ್ಲಿ ಜಿಲ್ಲಾ ಪರಿಷತ್‌ನ ಸಭಾಧಿಪತಿಗಳು ಇದರ ಅಡಿಗಲ್ಲು ಹಾಕಿದ್ದಾರೆ.

ಹಿಟ್ಲರನಿಗಾದ ದುಸ್ಥಿತಿಯಿಂದ ಲಾದರೂ ನಾವು ಪಾಠ ಕಲಿಯಲಿಲ್ಲ ವಲ್ಲಾ ಎಂದು ಈಗಲಾದರೂ ಮಮತಾರ ಬಂಟರು ಪರಿತಪಿಸುತ್ತಿದ್ದಾರೋ, ಇನ್ನೂ ತಿಳಿದು ಬಂದಿಲ್ಲ.

ಹಲವು ಬೋಲಿಗಳ ನಾಡು ಬಿಹಾರ

ಹಿಂದಿ ಭಾಷೆ ಬಿಹಾರದಲ್ಲಿ ಯಾರ ಮಾತೃಭಾಷೆಯೂ ಆಗಿಲ್ಲ ಎಂದು ನಿಮಗೆ ತಿಳಿದಿದೆಯೇ? ಅದರ ಮಾತೃಭಾಷೆಗಳೆಂದರೆ ವಿಭಿನ್ನ ಬೋಲಿಗಳು ಅಂದರೆ ಉಪ ಭಾಷೆಗಳು, ಮಾತು ಭಾಷೆಗಳು. ಬಿಹಾರದ ಸಾಂಸ್ಕೃತಿಕ ಚಿತ್ರಣ ನೀಡಿರುವ ಲೇಖಕ, ಪತ್ರಕರ್ತ ರಾಜಶೇಖರ ಹತಗುಂದಿ ಈ ಲೇಖನ 1998 ರಲ್ಲಿ ಪ್ರಕಟಾವದ ಅವರ ಪ್ರವಾಸ ಕಥನ 'ಬುದ್ಧನ ನಾಡಿನಲ್ಲಿ' ಕೃತಿಯ ಒಂದು ಅಧ್ಯಾಯ. ನಮ್ಮ ಓದುಗರಿಗಾಗಿ ಅದನ್ನಿಲ್ಲಿ ಉದ್ಧರಿಸಿದ್ದೇವೆ. ಈ ಕೃತಿಯ ಪ್ರಕಾಶಕರು ಕರ್ನಾಟಕ ಸಾಹಿತ್ಯ ಅಕಾಡೆಮಿ; ಬೆಲೆ ರೂ. 35/-.

ಪ್ರವಾಸಕ್ಕೆ ಹೊರಡುವ ಮುನ್ನ ಬಿಹಾರದಲ್ಲಿ ಹಿಂದಿಯಲ್ಲಿ ಮಾತ್ರ ಸಾಹಿತ್ಯ ಸೃಷ್ಟಿಯಾಗುತ್ತದೆ ಎಂದು ಭಾವಿಸಿದ್ದೆ. ಎಲ್ಲಕಡೆ ಇರುವ ಹಾಗೆ ಅಲ್ಲಿಯೂ ಉಪಭಾಷೆಗಳಿದ್ದರೂ, ಉಪಭಾಷೆಗಳಲ್ಲಿ ಸಾಹಿತ್ಯ ಸೃಷ್ಟಿ ಆಗಿರಲಿಕ್ಕಿಲ್ಲವೆಂಬುದು ನನ್ನ ಗ್ರಹಿಕೆ.

ರಾಂಚಿಗೆ ಹೋದ ಮೊದಲ ದಿನ ಡಾ. ಹೆಚ್.ಎಸ್. ಸಿಂಗ್, ನಿರ್ಮಲ್ ಜಿ, ಮಧುಕರ್ ಜಿ ಯವರೊಡನೆ ಮಾತಿಗಿಳಿದಾಗಲೇ ಬಿಹಾರ ರಾಜ್ಯದ ಹಲವು ಬೋಲಿಗಳ ಪರಿಚಯವಾದದ್ದು. ಬೋಲಿಗಳು ಅಕ್ಷರಶ: ಜನ ಬಳಕೆಯಲ್ಲಿರುವ ಭಾಷೆಗಳಾದರೂ ಇತ್ತೀಚಿನ ದಿನಗಳಲ್ಲಿ ಅವುಗಳಲ್ಲಿಯೂ ಸಮೃದ್ಧ ಸಾಹಿತ್ಯ ಸೃಷ್ಟಿಯಾಗುತ್ತಿರುವುದು ಗಮನಕ್ಕೆ ಬಂದಾಗ, ಬಿಹಾರ ರಾಜ್ಯದ ಸಾಹಿತ್ಯ ಚರಿತ್ರೆ ತಿಳಿದುಕೊಳ್ಳುವುದು ಸರಳ ಸಂಗತಿಯಲ್ಲ ಎನಿಸಿತು. ಹಾಗೆ ನೋಡಿದರೆ ಬಿಹಾರದಲ್ಲಿ ಆಡಳಿತ ಭಾಷೆ, ಶಾಲೆ ಕಾಲೇಜುಗಳಲ್ಲಿ ಕಲಿಸುವ ಭಾಷೆ ಹಿಂದಿ. ಆದರೆ ಹಿಂದಿ ಯಾರ ಮಾತೃಭಾಷೆಯೂ ಆಗಿಲ್ಲವೆಂಬುದು ಸೋಜಿಗದ ಸಂಗತಿ. ಜನಬಳಕೆಯಲ್ಲಿರುವ ಬೋಲಿಗಳಲ್ಲಿ ಸಮೃದ್ಧ ಸಾಹಿತ್ಯ ಸೃಷ್ಟಿಯಾಗುತ್ತಿದ್ದರೂ ಅವುಗಳಲ್ಲಿ ಯಾವೊಂದು ಬೋಲಿಗೂ ಸ್ವಂತ ಲಿಪಿಯಿಲ್ಲದಿರುವುದು ಗಮನಾರ್ಹ. ದೇವನಾಗರಿಯೇ ಎಲ್ಲ ಭಾಷಾ ಸಮುದಾಯದಲ್ಲಿ ಜಾರಿಯಲ್ಲಿರುವ ಏಕೈಕ ಲಿಪಿ. ಕುತೂಹಲದ ಸಂಗತಿಯೆಂದರೆ, ಕೆಲವೊಂದು ಬೋಲಿಗಳ ಬಳಕೆಯ ವ್ಯಾಪ್ತಿ ಬಿಹಾರ, ಒರಿಸ್ಸಾ, ಬಂಗಾಲ ರಾಜ್ಯದ ಹಲವು ಜಿಲ್ಲೆಗಳಲ್ಲಿಯೂ ಹರಡಿರುವುದರಿಂದ ಸಹಜವಾಗಿಯೇ ಆಯಾ ರಾಜ್ಯದ ಭಾಷಾಲಿಪಿಯನ್ನೇ ಲೇಖಕರು ಅಭಿವ್ಯಕ್ತಿಗೆ ಬಳಸುತ್ತಾರೆ.

ಬಿಹಾರ ರಾಜ್ಯದ 'ಬೋಲಿ'ಗಳಲ್ಲಿ ದ್ರಾವಿಡ ಭಾಷಾ ಸಮುದಾಯದ 'ಕುಡಕ್' ಉಪಭಾಷೆಯೂ ಸೇರಿದೆ. ಆದರೆ ಭಾಷಾ ಬಳಕೆಯ ವ್ಯಾಪ್ತಿ ಸೀಮಿತವಾಗಿದ್ದು ಜಾನಪದದಲ್ಲಿ ಮಾತ್ರ ಹಾಡುಗಳು ದೊರೆಯುತ್ತವೆಯಾದರೂ ಶಿಷ್ಟ ಸಾಹಿತ್ಯ ಇಲ್ಲಿ ಹುಟ್ಟಿಲ್ಲ. ಆದಿವಾಸಿ ಭಾಷಾ ಸಮುದಾಯದಲ್ಲಿ ಮುಂಡಾರಿ, ಖಡಿಯಾ, ಸಂತಾಲಿ, ಹೋ ಪ್ರಮುಖವಾದವುಗಳು, ಛೋಟಾ ನಾಗಪುರ ಪ್ರದೇಶದಲ್ಲಿ ಹೆಚ್ಚು ಬಳಕೆಯಲ್ಲಿರುವ ಕುರುಮಾಲಿ, ನಾಗಪುರ ಖೋರಟಾ ಪಂಚ ಪರ್ಗಣಿಯಾ ಸಮೂಹದ ಪಿಲ್ಲಿ, ರಾಹೆ, ತಮಾರ್ ಬರಾಂದ್ ಮುಂತಾದ ಬೋಲಿಗಳಲ್ಲಿ ಸಾಕಷ್ಟು ಕತೆ, ಕಾವ್ಯ, ಕಾದಂಬರಿಗಳು ಬಂದಿವೆ. ಆರ್ಯ ಭಾಷ ಸಮುದಾಯಕ್ಕೆ ಸೇರಿದ ಭೋಜಪುರಿ, ಮಗಹಿ, ಮೈಥಿಲಿ, ಬಜ್ಜಿಕಾ(ಬೃಜ್), ಅಂಗಿಕಾ ಬೋಲಿಗಳಲ್ಲಿಯೂ ಲೇಖಕರು ಮೈ ಚಳಿ ಬಿಟ್ಟು ಬರೆಯುತ್ತಿದ್ದಾರೆ. ಪ್ರಾದೇಶಿಕ ಭಾಷೆಗಳ ಅಧ್ಯಯನಕ್ಕೆ ಡಾ. ಗ್ರಿಯರ್ಸನ್ ಈ ಹಿಂದೆಯೇ ಮೇಲ್ಪಂಕ್ತಿ ಹಾಕಿದ್ದಾರೆಯಾದರೂ ಬಿಹಾರ ವಿ.ವಿ ಗಳಲ್ಲಿ ಮಾತ್ರ ಇತ್ತೀಚಿನ ದಿನಗಳಲ್ಲಿ ಪ್ರಾಮುಖ್ಯತೆ ದೊರೆಯುತ್ತಿದೆ. ಇಷ್ಟೆಲ್ಲ ಪ್ರಾದೇಶಿಕ ಭಾಷೆಗಳಲ್ಲಿ ಸಾಹಿತ್ಯ ಸಮೃದ್ಧವಾಗಿ ಸೃಷ್ಟಿಯಾಗುತ್ತಿದ್ದರೂ ಕೇಂದ್ರ ಸಾಹಿತ್ಯ ಅಕಾಡೆಮಿ ಮೈಥಿಲಿ ಭಾಷೆಗೆ ಮಾತ್ರ ಮಾನ್ಯತೆ ಕಲ್ಪಿಸಿದೆ.

ಬಿಹಾರಿನ ಜನಬಳಕೆಯಲ್ಲಿರುವ ಎಲ್ಲಾ ಬೋಲಿಗಳಲ್ಲಿ ಜಾನಪದ ಸಾಹಿತ್ಯ ವಿಪುಲವಾಗಿದೆ. ಆದರೆ ಕೆಲ ಬೋಲಿಗಳಲ್ಲಿ ಸಂಗ್ರಹ ಕಾರ್ಯ, ಅಧ್ಯಯನ ಹೆಚ್ಚು ನಡೆದರೆ, ಇನ್ನೂ ಕೆಲವುಗಳಲ್ಲಿ ಈಗಷ್ಟೇ ಪ್ರಾರಂಭ ಮಾಡಲಾಗಿದೆ. ಛೋಟಾ ನಾಗಪುರ ಪ್ರದೇಶದಲ್ಲಿ ಹೆಚ್ಚು ಜನ ಬಳಕೆಯಲ್ಲಿರುವ ನಾಗಪುರಿ ಬೋಲಿ(ಉಪಭಾಷೆ)ಯಲ್ಲಿ 300 ವರ್ಷಗಳಿಂದ ಶಿಷ್ಟ ಸಾಹಿತ್ಯ ರಚನೆಯಾಗುತ್ತಿದೆ. ಕ್ರಿ.ಶ. 1600 ರಿಂದ 1700 ಅವಧಿಯಲ್ಲಿ ರಘುನಾಥ ನೃಪತಿ, ದವೇಲ ಸಿಂಗ್, ಪದಮನ್ ದಾಸ್, ರುದ್ರಸಿಂಗ್ ಮುಂತಾದವರು ಅತ್ಯುತ್ತಮ ಕಾವ್ಯ ಸೃಷ್ಟಿಗೈದಿದ್ದಾರೆ.

ಆಧುನಿಕ ಸಾಹಿತ್ಯ ಸಂದರ್ಭದಲ್ಲಿ ಸಹನಿ ಉಪೇಂದ್ರ ಪಾಲ್ ಸಿಂಗ್ ನಹನ್, ಪೌರಾಣಿಕ ಗೌರಿನಂದನ ಶರ್ಮ, ದಿವಾಕರ್ ಮಣಿ ಪಾಠಕ್, ಲಕ್ಷ್ಮಣ್ ಗೋಶ್, ವಿಶ್ವೇಶ್ವರ ಪ್ರಸಾದ ಕೇಸರಿ, ಪ್ರಫುಲ್ ಕುಮಾರ ರಾಯ್ ಮುಂತಾದವರ ಹೆಸರುಗಳು ಪ್ರಮುಖವಾಗಿ ಕೇಳಿಬರುತ್ತವೆ. ಧನಿರಾಂ ಭಕ್ಷಿ, ಜನ ನಿವಾಸ, ರಾಧ ವಲ್ಲಭ, ಶಂಭುನಾಥ, ದೇವ ಚರಣ ಮಾಲಿ, ಭವ ಪ್ರಿಯತನುದ, ಕಿಶೋರ ನಾಥ್ ಶಹಾದೇವ ಮುಂತಾದವರು ಆರಂಭದಲ್ಲಿ ಆಧುನಿಕ ನಾಗಪುರಿ ಸಾಹಿತ್ಯವನ್ನು ನೀರೆರೆದು ಪೋಷಿಸಿದವರಲ್ಲಿ ಪ್ರಮುಖರು.


ಮುಂಡೇರಿ ಬೋಲಿಯಲ್ಲಿ ಸಾಹಿತ್ಯ ರಚನೆ ಮಾಡುತ್ತಿರುವ ಡಾ. ರಾಮದಯಾಲ್ ಮುಂಡಾ ಅವರನ್ನು ಮುಖತ ಭೇಟಿ ಮಾಡಲು ಬಹಳ ಪ್ರಯತ್ನಿಸಿದವು. ಆದರೆ ಅವರು ಕಾರ್ಯನಿಮಿತ್ತ ದೆಹಲಿಗೆ ಹೋಗಿದ್ದರಿಂದ ಸಾಧ್ಯವಾಗಲಿಲ್ಲ. ಡಾ. ರಾಮ್ ದಯಾಲ್ ಮುಂಡಾ ಅವರನ್ನು ಮುಂಡಾರಿ ಭಾಷೆಯ ಬಹುದೊಡ್ಡ ಕವಿಯೆಂದು ಪರಿಗಣಿಸಲಾಗುತ್ತಿದೆ. ಮುಂಡಾರಿ ಭಾಷೆಯ ಪ್ರಥಮ ಗದ್ಯ ಬರಹಗಾರ ಖ್ಯಾತಿಗೆ ಪಾತ್ರರಾಗಿರುವ ಮಿನಾಶ್ ಬಡೆಯಾ ಅವರ ಕಾದಂಬರಿ 'ಮಧುರಾ ಅಶಾನಿ' ಅತ್ಯಂತ ಶ್ರೇಷ್ಠ ಕಲಾಕೃತಿಯೆಂದು ವಿದ್ವಾಂಶರು ಒಪ್ಪಿಕೊಳ್ಳುತ್ತಿದ್ದಾರೆ. ಸಮೃದ್ಧ ವಿವರನ್ನೊಳಗೊಂಡ ಈ ಕೃತಿಯಲ್ಲಿ ಸಮಗ್ರ ಸಂಸ್ಕೃತಿಯ ಚಿತ್ರಣ ಲಭ್ಯವಿದೆಯೆಂದು ಹೇಳಾಗುತ್ತಿತ್ತು.

ಶ್ರೀ ಕಾಂಡೆಯವರ 'ಸಸಂಬಾ' (ಹಳದಿಹೂ), ಡಾ. ರಾಮದಯಾಲ್ ಮುಂಡಾ ಅವರ 'ಅಂತಿಮ ಶಾಲವೃಕ್ಷಕಾ ವಕ್ತವಂ', 'ನದಿ ಔರ್ ಉಸಕಾ ಸಂಬಂಧಿ' ಮುಂತಾದ ಕೃತಿಗಳು ವಿಶೇಷವಾಗಿ ಪ್ರಸ್ತಾಪಗೊಳ್ಳುತ್ತಿದ್ದವು.

'ಸಂತಾಲಿ' ಸುಮಾರು 20 ಲಕ್ಷ ಜನರಾಡುವ ಭಾಷೆ. ಸಂತಾಲಿಯ ಕವಿ ಭಾಗವತ ಮುರ್ಮು ಅವರನ್ನು ಸಂತಾಲಿ ಕಾವ್ಯ ಪ್ರವರ್ತಕ ಎಂದೇ ಗುರುತಿಸುತ್ತಾರೆ. ಸಂತಾಲಿ ಗದ್ಯದ ಜನಕ ಎಂದು ಗುರುತಿಸಲ್ಪಡುವ ಡೋಮನ್ ಸಾಹು ಸಮೀರ್ ಹಲವಾರು ಕಾದುಂಬರಿ, ಕತೆಗಳನ್ನು ರಚಿಸಿದ್ದಾರೆ. ಸಂತಾಲಿ ಬೋಲಿಗೆ ಪ್ರತ್ಯೇಕ ಲಿಪಿಯೊಂದನ್ನು ರೂಪಿಸುವ ಯತ್ನವನ್ನು ಮೊದಲ ಬಾರಿಗೆ ಪಂಡಿತ ರಘುನಾಥ ಮುರ್ಮು ಅವರು ಮಾಡಿದ್ದಾರೆಯಾದರೂ ಅದರ ಅಸಮರ್ಪಕತೆಯಿಂದಾಗಿ ಇನ್ನೂ ಪುರಸ್ಕೃತಗೊಂಡಿಲ್ಲ. ದಿ.ಡೋಮನ್ ಹಸ್ದ, ಪ್ರೊ. ಕೆ.ಸಿ. ಟೂಡು, ಹರಿಹರ, ಹಸದಾ ಮುಂತಾದ ಸಶಕ್ತ ಲೇಖಕರು ಈ ಭಾಷೆಯಲ್ಲಿ ಕೃಷಿ ಮಾಡಿದ್ದಾರೆ. ಆದಿವಾಸಿ ಭಾಷ ಸಮೂಹಕ್ಕೆ ಸೇರಿದ ಖಡಿಯಾ ಬೋಲಿಯಲ್ಲಿ ಡಾ.ರೋಜ್ ಕೆರೆಕಟ್ ಆತ್ಮ ಕಥನ ಬರೆದಿದ್ದಾರೆ. ಡಾ.ರೋಜ್ ಕೆರೆಕಟ್ ಅವರ 'ಖಡಿಯಾ ಲೋಕಕಥಾ' ಎಂಬ ಜಾನಪದ ಕತೆಗಳ ಸಂಗ್ರಹ ವೊಂದನ್ನು ಹೊರತಂದಿದ್ದಾರೆ. ಡಾ.ಮೈಥಿಯಾಸ್ ಡುಂಗ್ ಡುಂಗ್ ಅವರು 'ಖಂಡಿಯಾ ಔರ್ ಹಿಂದಿ ವ್ಯಾಕರಣ್ ಕೆ ತುಲನಾತ್ಮಕ ಅಧ್ಯಾನ್' ಎಂಬ ವ್ಯಾಕರಣ ಸಂಬಂಧಿ ಪುಸ್ತಕ ಪ್ರಕಟಿಸಿದ್ದಾರೆ.

'ಖಡಿಯಾ' ಮತ್ತು 'ಹೋ' ಬೋಲಿಗಳನ್ನು ಮಾತನಾಡುವವರ ಸಂಖ್ಯೆ ಕಡಿಮೆ ಇರುವುದರಿಂದಲೋ ಏನೋ ಈ ಭಾಷೆಯಲ್ಲಿ

ಪುಟ 12 ಕ್ಕೆ



ಇಂಡೋನೇಶ್ಯಾ ಚುನಾವಣೆ

ಜನಾಂದೋಲನದ ಆಶಯಗಳನ್ನು ಈಡೇರಿಸುವುದೇ?

ಹಿಂದಿನ ಸಂಚಿಕೆಯಲ್ಲಿ ಇಂಡೋನೇಶ್ಯಾ ಸ್ವತಂತ್ರವಾದ ನಂತರ ನಡೆದುಬಂದ ದಾರಿ, ಕಳೆದ ಒಂದು ವರ್ಷದಲ್ಲಿ ಮೂರು ದಶಕಗಳ ಸುಹಾರ್ತೋ ಮಿಲಿಟರಿ ಸರ್ವಾಧಿಕಾರದ ವಿರುದ್ಧ ಭುಗಿಲೆದ್ದ ಜನಾಂದೋಲನದ ಬಗ್ಗೆ ಓದಿದ್ದೀರಿ. ಜೂನ್ 7 ರಂದು ನಡೆಯಲಿರುವ ಇಂಡೋನೇಶ್ಯಾದ ಚುನಾವಣೆಗಳ ಮಹತ್ವದ ಬಗೆಗೂ ಓದಿದ್ದೀರಿ. ಈ ವಾರ ಚುನಾವಣೆಯಲ್ಲಿ ಭಾಗವಹಿಸುತ್ತಿರುವ ಪಕ್ಷಗಳು, ಪಾರ್ಲಿಮೆಂಟು ವ್ಯವಸ್ಥೆ, ಚುನಾವಣೆ ನಿಯಮಗಳು, ಜನರ ಮುಂದಿರುವ ಚುನಾವಣಾ ಮುಖ್ಯ ಪ್ರಶ್ನೆ. ಎಲ್ಲಕ್ಕಿಂತ ಹೆಚ್ಚಾಗಿ ಮೂರು ದಶಕಗಳ ಸುಹಾರ್ತೋ ನಾಯಕತ್ವದ 'ಹೊಸ ವ್ಯವಸ್ಥೆ'ಯ ಪೋಷಾಕಿನಲ್ಲಿದ್ದ ಮಿಲಿಟರಿ ಸರ್ವಾಧಿಕಾರಿ ವ್ಯವಸ್ಥೆಯನ್ನು ಪುನಃ ತಲೆ ಎತ್ತದಂತೆ ಹುಗಿದು ಬಿಡುವುದು.

ಪಾರ್ಲಿಮೆಂಟು ವ್ಯವಸ್ಥೆ

ಚುನಾವಣೆ ನಡೆಯುತ್ತಿರುವುದು DPR ಎಂದು ಕರೆಯಲಾಗುವ ಪಾರ್ಲಿಮೆಂಟಿನ ಕೆಳಸದನಕ್ಕೆ. 462 ಸೀಟುಗಳಿಗೆ ಚುನಾವಣೆ ನಡೆಯುತ್ತಿದೆ. 500 ಸೀಟುಗಳಿರುವ DPR ನಲ್ಲಿ 38 ಸೀಟುಗಳನ್ನು ಮಿಲಿಟರಿಗೆ ಕಾದಿರಿಸಲಾಗಿದೆ. ಮಿಲಿಟರಿ ಸಾನಗಳನ್ನು ಹಂತ ಹಂತವಾಗಿ ಕಡಿಮೆ ಮಾಡಿ ಕಿತ್ತುಹಾಕಬೇಕೆಂಬ ನೀತಿಯ ಆಧಾರದ ಮೇಲೆ ವಿರೋಧ ಪಕ್ಷಗಳು ಇದನ್ನು ಸದ್ಯಕ್ಕೆ ಒಪ್ಪಿಕೊಂಡಿದ್ದಾರೆ. ಚುನಾವಣೆಗಳಲ್ಲಿ 13 ಕೋಟಿ ಮತದಾರರು ಭಾಗವಹಿಸಲಿದ್ದು, ಪಾರ್ಲಿಮೆಂಟಿನ ಜತೆಗೆ ಪ್ರಾಂತ್ಯ ಮತ್ತು ಜಿಲ್ಲಾ ಅಸೆಂಬ್ಲಿಗಳಿಗೂ ಚುನಾವಣೆ ನಡೆಯಲಿದೆ.

ಇನ್ನೊಂದು ಸದನ ಇದೆ - ಇಂಡೋನೇಶ್ಯಾದ ರಾಜಕೀಯ ವ್ಯವಸ್ಥೆಯಲ್ಲಿ. ಅದಕ್ಕೆ MPR ಅಂತ ಹೆಸರು. DPR ಆಗಾಗ ಸಭೆ ಸೇರಿ ಕಾನೂನುಗಳನ್ನು, ಬಜೆಟ್ ಇತ್ಯಾದಿ ಮಂಜೂರು ಮಾಡುತ್ತದೆ. MPR 5 ವರ್ಷಕ್ಕೊಮ್ಮೆ ಅಥವಾ ವಿಶೇಷ ಸಂದರ್ಭಗಳಲ್ಲಿ ಮಾತ್ರ ಸಭೆ ಸೇರುವುದು. ಇದರ ಮುಖ್ಯ ಅಥವಾ ಬಹುಶ ಒಂದೇ ಜವಾಬ್ದಾರಿ ಅಧ್ಯಕ್ಷನನ್ನು ಆರಿಸುವುದು. MPR ನಲ್ಲಿ 700 ಸದಸ್ಯರಿರುತ್ತಾರೆ. ಕೆಳ ಸದನದ (DPR) ಎಲ್ಲಾ 500 ಸದಸ್ಯರು MPR ನ ಸದಸ್ಯರು ಸಹ. ಇದಲ್ಲದೆ 135 ಸದಸ್ಯರನ್ನು 27 ಪ್ರಾಂತೀಯ ಅಸೆಂಬ್ಲಿಗಳಿಂದ ಆರಿಸಲಾಗುತ್ತದೆ. ಪ್ರತಿ ಪ್ರಾಂತೀಯ ಅಸೆಂಬ್ಲಿಗಳಿಂದ 5 ಸದಸ್ಯರನ್ನು ಆರಿಸಲಾಗುತ್ತದೆ. ಉಳಿದ 65 ಸದಸ್ಯರನ್ನು ಸಾಮಾಜಿಕ ಸಂಘಟನೆಗಳಿಂದ ಆಯ್ಕೆ ಮಾಡಲಾಗುತ್ತದೆ. ಯಾವ ಸಾಮಾಜಿಕ ಸಂಘಟನೆಗಳಿಗೆ MPR ನಲ್ಲಿ ಪ್ರಾತಿನಿಧ್ಯ ಕೊಡಬೇಕು ಎಂಬುದನ್ನು ಚುನಾವಣಾ ಕಮಿಶನು ನಿರ್ಧರಿಸುತ್ತದೆ.

ಚುನಾವಣೆ ಪದ್ಧತಿ

ಇಂಡೋನೇಶ್ಯಾದ ಚುನಾವಣೆಗಳನ್ನು ಸ್ವತಂತ್ರ ಚುನಾವಣಾ ಕಮಿಶನು (KPU) ನಡೆಸಲಿದೆ. KPU ನಲ್ಲಿ ಚುನಾವಣೆಯಲ್ಲಿ ಭಾಗವಹಿಸುತ್ತಿರುವ ಎಲ್ಲಾ ಪಕ್ಷಗಳ ಒಬ್ಬ ಪ್ರತಿನಿಧಿ ಮತ್ತು 5 ಸರ್ಕಾರದಿಂದ ನೇಮಿಸಿದ ಸದಸ್ಯರು ಇರುತ್ತಾರೆ.

ಚುನಾವಣೆ ಅನುಪಾತಿತ ಪದ್ಧತಿ ಆಧಾರದ ಮೇಲೆ ಸದಸ್ಯರನ್ನು ಆರಿಸುತ್ತದೆ. ಚುನಾವಣೆಗೆ ನಿಂತಿರುವ 48 ಪಕ್ಷಗಳು ತಮ್ಮ ಅಭ್ಯರ್ಥಿಗಳ ಪಟ್ಟಿಯನ್ನು ಪ್ರಕಟಿಸುತ್ತವೆ. ಚುನಾವಣೆಗಳಲ್ಲಿ ಆಯಾ ಪಕ್ಷ ಗಳಿಸಿದ ಶೇಕಡಾವಾರು ಮತಗಳ ಆಧಾರದ ಮೇಲೆ ಪಕ್ಷಗಳು ತಮ್ಮ ಅಭ್ಯರ್ಥಿಗಳ ಪಟ್ಟಿಯನ್ನು ಜಿಲ್ಲಾವಾರಾಗಿ ಪ್ರಕಟಿಸಬೇಕು. ಜಿಲ್ಲೆಯ ಮಟ್ಟದಲ್ಲಿ ಆಯಾ ಪಕ್ಷ ಗಳಿಸಿದ ಶೇಕಡಾವಾರು ಮತಕ್ಕೆ ಅನುಗುಣವಾಗಿ ಪಕ್ಷದ ಅಭ್ಯರ್ಥಿ ಪಟ್ಟಿಯ ಮೊದಲ ಕೆಲವು ಅಭ್ಯರ್ಥಿಗಳು ಚುನಾಯಿತರು ಎಂದು KPU ಘೋಷಿಸುತ್ತದೆ. ಈ ಚುನಾವಣೆಯಲ್ಲಿ ಕನಿಷ್ಠ ಶೇಕಡಾ 5 ಮತಗಳಿಸದ ಪಕ್ಷಗಳು ಮುಂದಿನ (2004 ರಲ್ಲಿ ನಡೆಯುವ) ಚುನಾವಣೆಯಲ್ಲಿ ಸ್ಪರ್ಧಿಸಲು ಅರ್ಹರಾಗಿರುವುದಿಲ್ಲ. ಈಗ ರಿಜಿಸ್ಟರ್ ಆಗಿರುವ ಪಕ್ಷಗಳನ್ನೇ ಸದಸ್ಯತ್ವ, ಕನಿಷ್ಠ ಅರ್ಧದಷ್ಟು ಪ್ರಾಂತ್ಯಗಳಲ್ಲಿ ಸದಸ್ಯತ್ವದ ಆಧಾರದ ಮೇಲೆ ಒಂದು ಕಮಿಷನ್ ನಿರ್ಧರಿಸಿತ್ತು.

ಪಕ್ಷಗಳು

ಚುನಾವಣಾ ಕಣದಲ್ಲಿ ಹಲವು ರೀತಿಯ ಪಕ್ಷಗಳಿವೆ. ಸುಹಾರ್ತೋ ಮಿಲಿಟರಿ ಸರ್ವಾಧಿಕಾರಕ್ಕೆ ಮುಖವಾಡವಾಗಿದ್ದ ಆಳುವ ಗೋಲ್ಕರ್ ಪಕ್ಷ ಒಂದು ಕಡೆ, ಇನ್ನೊಂದುಕಡೆ ಸುಹಾರ್ತೋ ಸರ್ವಾಧಿಕಾರದ ಕಾಲದಲ್ಲಿಯೂ ವಿರೋಧ ಪಕ್ಷವಾಗಿ ಕೆಲಸ ಮಾಡಲು ಅವಕಾಶವಿದ್ದ ವಿರೋಧ ಪಕ್ಷಗಳು. ಗೋಲ್ಕರ್ ಬಿಟ್ಟರೆ ಉಳಿದ ಪಕ್ಷಗಳೆಲ್ಲಾ ಎರಡು ರೀತಿಯವು. ಒಂದಲ್ಲ ಒಂದು ರೀತಿಯಲ್ಲಿ ಇಸ್ಲಾಮ್ ಧರ್ಮದ ಮೇಲೆ ಆಧಾರಿತ ಪಕ್ಷಗಳು ಒಂದು ಕಡೆ, ಇನ್ನೊಂದು ಜಾತ್ಯಾತೀತ ಪಕ್ಷಗಳು - ಸುಹಾರ್ತೋ ಮಿಲಿಟರಿ ಸರ್ವಾಧಿಕಾರಿ ವ್ಯವಸ್ಥೆಯನ್ನು ಪೂರ್ಣವಾಗಿ ಹೋಗಲಾಡಿಸಿ, ಸಾಮಾಜಿಕ ನ್ಯಾಯ ಆಧಾರಿತ ಸಮಾಜ ಕಟ್ಟುವ ಉದ್ದೇಶವುಳ್ಳ ಪಕ್ಷಗಳು ಇನ್ನೊಂದುಕಡೆ. ನಾಲ್ಕೈದು ಎಡ - ರಾಷ್ಟ್ರೀಯವಾದಿ ಪಕ್ಷಗಳೂ ಇವೆ. ಇವು ಮಿಲಿಟರಿ ಸರ್ವಾಧಿಕಾರ ವ್ಯವಸ್ಥೆಯನ್ನು ಬಡಿದೋಡಿಸಲು ಸಾಮ್ರಾಜ್ಯಶಾಹಿ ಪೋಷಿತ 'ಬಾಲಬಡುಕ ಬಂಡವಾಳಶಾಹಿ' ವ್ಯವಸ್ಥೆಯ ವಿರುದ್ಧ ಹೋರಾಡಬೇಕೆನ್ನುವವರು. ಇದಲ್ಲದೆ ಗೋಲ್ಕರ್ ಪಕ್ಷದ ಭಿನ್ನಮತೀಯರು ಹೊರಬಂದು ರಚಿಸಿದ ಪಕ್ಷಗಳಿವೆ. ಅವು ಮಿಲಿಟರಿ ಸರ್ವಾಧಿಕಾರಿ ವ್ಯವಸ್ಥೆಯನ್ನು ಪೂರ್ಣ ಕಳಚಿಹಾಕುವಲ್ಲಿ ಅಷ್ಟು ಆಸಕ್ತಿ ವಹಿಸಿಲ್ಲ. ಹೀಗೆ ಹಲವು ಬಣ್ಣದ ಪಕ್ಷಗಳಿವೆ ಕಣದಲ್ಲಿ. ಆದರೆ ಗೋಲ್ಕರ್ ಬಿಟ್ಟರೆ ಇತರ ಎಲ್ಲಾ ಪಕ್ಷಗಳು ಮಿಲಿಟರಿ ಸರ್ವಾಧಿಕಾರದ ಜಾಗದಲ್ಲಿ ಪ್ರಜಾಸತ್ತಾತ್ಮಕ ವ್ಯವಸ್ಥೆ ಕಟ್ಟಬೇಕು ಎಂಬ ಬಗ್ಗೆ ಒಮ್ಮತ ಹೊಂದಿವೆ. ಪಾರ್ಲಿಮೆಂಟರಿ ಚುನಾವಣೆಗಳಲ್ಲಿ ಪರಸ್ಪರ ಸ್ಪರ್ಧಿಸಿದರೂ, ಮುಂಬರುವ ಅಧ್ಯಕ್ಷೀಯ ಚುನಾವಣೆಯಲ್ಲಿ ಸಾಮಾನ್ಯ ಒಂದೇ ಅಭ್ಯರ್ಥಿಯನ್ನು ಆಳುವ ಗೋಲ್ಕರ್ ಪಕ್ಷದ ಅಭ್ಯರ್ಥಿ ಅಧ್ಯಕ್ಷ ಹಬೀಬಿ ಎದುರು ನಿಲ್ಲುವ ಸಾಧ್ಯತೆ ಇದೆ.

ಮೇಘಾವತಿಯ PDI

ಇಂಡೋನೇಶ್ಯಾದ ಪ್ರಥಮ ಅಧ್ಯಕ್ಷ ಸುಕಾರ್ನೋರ ಪುತ್ರಿ ಮೇಘಾವತಿ ನಾಯಕತ್ವದಲ್ಲಿ PDI-P ಪ್ರಮುಖ ವಿರೋಧ ಪಕ್ಷ. ಸುಹಾರ್ತೋ ಕಾಲದಲ್ಲಿ ವಿರೋಧ ಪಕ್ಷವಾಗಿ ಕೆಲಸ ಮಾಡಲು ಅನುಮತಿಯಿದ್ದ ಪಕ್ಷಗಳಲ್ಲೊಂದು. ಸದ್ಯಕ್ಕೆ ಮಿಲಿಟರಿ -ಸರ್ವಾಧಿಕಾರದ ವಿರುದ್ಧ ಪ್ರಜಾಸತ್ತೆಗೆ ಹೋರಾಡುತ್ತಿರುವ ಶಕ್ತಿಗಳು ಈ ಪಕ್ಷದ ಸುತ್ತ ಅಣಿ ನೆರೆದಿವೆ. ಆ ಪಕ್ಷವನ್ನು ತಮ್ಮ ಆಯುಧವಾಗಿಸಿವೆ. ಎಲ್ಲಾ ಸರ್ವಾಧಿಕಾರ-ವಿರೋಧಿ ರಾಜಕೀಯ ಶಕ್ತಿಗಳನ್ನು ಒಗ್ಗೂಡಿಸುವ ರಾಜಕೀಯ ದೃಷ್ಟಿಯಾಗಲೀ, ಚಾಣಾಕ್ಷತನವಾಗಲಿ ಪಕ್ಷಕ್ಕೆ ಅಥವಾ ಅವರ ನಾಯಕಿ ಮೇಘಾವತಿಗೆ ಇಲ್ಲ. ಗೋಲ್ಕರ್ ಪಕ್ಷ ಸೋಲುವುದು ಅನಿವಾರ್ಯವೆನ್ನುವ ಪರಿಸ್ಥಿತಿಯಲ್ಲಿ ಸಾಮ್ರಾಜ್ಯಶಾಹಿ ಮತ್ತು ಮಿಲಿಟರಿ PDI-P ಮತ್ತು



ಮೇಘಾವತಿಗೆ ಬೆಂಬಲ ಕೊಟ್ಟು ಆ ಮೇಲೆ ಮಣಿಸುವ ಸಾಧ್ಯತೆ ಇದೆ. ಮಿಲಿಟರಿ ಮತ್ತು ಐಎಂಎಫ್-ಸಾಮ್ರಾಜ್ಯಶಾಹಿ ಹಸ್ತಕ್ಷೇಪದ ಬಗ್ಗೆ ಈ ಪಕ್ಷ ಸ್ಪಷ್ಟ ಧೋರಣೆ ಪ್ರಕಟಿಸಿಲ್ಲ. ಸ್ಪಷ್ಟ ಜಾತ್ಯಾತೀತ ನಿಲುವು, ಸುಹಾರ್ತೋಗೆ ಮೊದಲಿಂದ ವಿರೋಧ, ಭ್ರಷ್ಟಾಚಾರ-ರಹಿತ ಸ್ವಚ್ಛ ಇಮೇಜ್‌ನಿಂದಾಗಿ PDI-P ಅತಿದೊಡ್ಡ ಪಕ್ಷವಾಗಿ ಹೊಮ್ಮುವ ಸಾಧ್ಯತೆ ಇದೆ. ಅಲ್ಪಸಂಖ್ಯಾತ ಕ್ರಿಶ್ಚಿಯನ್ನರು, ಬುದ್ಧರು, ಹಿಂದೂಗಳು ಈ ಪಕ್ಷಕ್ಕೆ ದೊಡ್ಡ ಪ್ರಮಾಣದಲ್ಲಿ ಬೆಂಬಲ ಕೊಡುವ ನಿರೀಕ್ಷೆ ಇದೆ.

ಅಮಾನ್ ರೈಸರ PAN: ಅಮಾನ್ ರೈಸ್ ಎಂಬುವನ ನಾಯಕತ್ವದಲ್ಲಿರುವ PAN ತನ್ನ ಮುಖ್ಯ ಬೆಂಬಲವನ್ನು ಅಮಾನ್ ರೈಸ್ ಅಧ್ಯಕ್ಷರಾಗಿರುವ 2.8 ಕೋಟಿ ಜನರು ಸದಸ್ಯರಾಗಿರುವ ಒಂದು ಇಸ್ಲಾಮಿಕ್ ಸಾಮಾಜಿಕ ಸಂಘಟನೆಯಿಂದ ಪಡೆಯುತ್ತದೆ. ಸುಹಾರ್ತೋ ವಿರುದ್ಧ ಜನಾಂದೋಲನ ಆರಂಭವಾದಾಗ ಸುಹಾರ್ತೋ ರಾಜೀನಾಮೆ ಕೇಳಿ ಆಂದೋಲನಕ್ಕೆ ಬಹಿರಂಗವಾಗಿ ಬೆಂಬಲ ನೀಡಿದ್ದರಿಂದ ಆತನ ಪಕ್ಷದ ಬಗ್ಗೆ ಜನರಿಗೆ ಒಲವು ಇದೆ. ಮೇಘಾವತಿಯೂ ನೇರವಾಗಿ ಸುಹಾರ್ತೋ ರಾಜೀನಾಮೆ ನೀಡಬೇಕು ಎಂದು ಕರೆ ಕೊಟ್ಟಿರಲಿಲ್ಲ. ಇಸ್ಲಾಮಿಕ್ ಸಾಮಾಜಿಕ ಸಂಘಟನೆಯ ನಾಯಕನಾಗಿದ್ದರೂ PAN ರಾಜಕೀಯ, ಸಾಮಾಜಿಕ ಜೀವನವನ್ನು ಇಸ್ಲಾಮಿನಂತಿರಬೇಕೆಂದು ಕರೆ ನೀಡುವುದಿಲ್ಲ. ಈ ಪಕ್ಷ ಮೊದಲ ನಾಲ್ಕು ಸ್ಥಾನಗಳಲ್ಲಿ ಒಂದು ಸ್ಥಾನವನ್ನು ಪಡೆಯುತ್ತದೆ ಎಂದು ಭಾವಿಸಲಾಗಿದೆ.

ಗುಸ್‌ದರ್‌ರ PKB

ಗುಸ್‌ದರರ PKB (ರಾಷ್ಟ್ರೀಯ ಜಾಗೃತಿ) ಪಕ್ಷ ಇನ್ನೊಂದು ಗಮನ ಸೆಳೆಯುವ ಪಕ್ಷ, ಗುಸ್‌ದರ್ ಸಹ 3 ಕೋಟಿ ಮುಖ್ಯವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಪ್ರಬಲವಾಗಿರುವ NU ಎಂಬ ಇಸ್ಲಾಮಿಕ್ ಸಾಮಾಜಿಕ ಸಂಘಟನೆಯ ನಾಯಕ. ಆದರೆ ಇಸ್ಲಾಮ್ ರಾಜಕೀಯದಲ್ಲಿ ಮಧ್ಯ ಪ್ರವೇಶಿಸಬಾರದು ಎನ್ನುವ ವ್ಯಕ್ತಿ. ಈ ಪಕ್ಷವೂ ಚುನಾವಣೆಯಲ್ಲಿ ಮೊದಲ ನಾಲ್ಕು ಸ್ಥಾನಗಳಲ್ಲಿ ಒಂದನ್ನು ಪಡೆಯುವುದು ಎಂದು ಭಾವಿಸಲಾಗಿದೆ.

ಇಸ್ಲಾಮಿಕ್ PPP ಪಕ್ಷ

ಈ ಪ್ರಮುಖ ಪಕ್ಷಗಳಲ್ಲಿ PPP ಒಂದೇ ಇಸ್ಲಾಮ್‌ಗೆ ರಾಜಕೀಯದಲ್ಲಿ ಸಾಮಾಜಿಕ ಜೀವನದಲ್ಲಿ ದೊಡ್ಡ ಸ್ಥಾನ ಕೊಡಬೇಕು ಎಂದು ವಾದಿಸುವ ಪಕ್ಷ. ಇದರ ಮೂಲ ಪಕ್ಷವನ್ನು ಅಧ್ಯಕ್ಷ ಸುಕಾರ್ನೊ ಕಾಲದಲ್ಲಿ ನಿಷೇಧಿಸಲಾಗಿತ್ತು - ಧಾರ್ಮಿಕ ರಾಜಕೀಯ ಉತ್ತೇಜಿಸಿದ್ದಕ್ಕೆ. ಧಾರ್ಮಿಕ ಘೋಷಣೆಗಳನ್ನು ಎತ್ತುತ್ತಿರುವ ಈ ಪಕ್ಷ ಗಣನೀಯ ಸೀಟುಗಳನ್ನು ಗೆಲ್ಲಬಹುದು ಎಂದು ವೀಕ್ಷಕರ ಅಭಿಪ್ರಾಯ. ಇದೂ ಮೊದಲ ನಾಲ್ಕು ಸ್ಥಾನಗಳಲ್ಲಿ ಎನ್ನಲಾಗಿದೆ.


ಗೋಲ್ಕರ್ ಪಕ್ಷ

ಆಳುವ ಗೋಲ್ಕರ್ ಈಗ ಅತ್ಯಂತ ಕಡಿಮೆ ಜನಪ್ರಿಯತೆ ಇರುವ ಪಕ್ಷ. ಸುಹಾರ್ತೋನ ಮಿಲಿಟರಿ ವ್ಯವಸ್ಥೆಯಿಂದ ಭಿನ್ನವಾದ ಪಕ್ಷವೆಂದು ತೋರಿಸಿಕೊಳ್ಳಲು ಪ್ರಯತ್ನಿಸುತ್ತಿದೆ. ಮೂರು ದಶಕಗಳ ಕಾಲ ಆಳುವ ಪಕ್ಷವಾಗಿದ್ದ ಪ್ರಭಾವವೇ ಇದರ ಏಕೈಕ ಶಕ್ತಿ. ಮಿಲಿಟರಿ ಮತ್ತು ಸರ್ಕಾರಿ ನೌಕರರಲ್ಲಿ (ಅದರಲ್ಲೂ ಮೇಲು, ಮಧ್ಯಮ ಹಂತದವರು) ಇದಕ್ಕೆ ಬೆಂಬಲಿಸಬಹುದು ಎನ್ನಲಾಗಿದೆ. ಆದರೆ ಎಷ್ಟು ಜನರ ಕೋಪಕ್ಕೆ ತುತ್ತಾಗಿದೆಯೆಂದರೆ ಅದರ ರ್‍ಯಾಲಿಗಳ ಮೇಲೆ ಜನ ಕೋಪದಿಂದ ದಾಳಿಮಾಡಿದ್ದಾರೆ. ರ್‍ಯಾಲಿಗಳನ್ನು ನಡೆಸುವುದೇ (ಪೋಲಿಸ್, ಮಿಲಿಟರಿ ಬೆಂಬಲದಿಂದ) ಅದಕ್ಕೆ ಕಷ್ಟವಾಗಿದೆ. ಗೋಲ್ಕರ್ ಎಷ್ಟು ಶೇಕಡವಾರು ಮತಗಳಿಸುತ್ತದೆ ಎಂಬುದರ ಮೇಲೆ ಇಂಡೋನೇಶ್ಯಾದ ಭವಿಷ್ಯ ನಿರ್ಧಾರಿತವಾಗುತ್ತದೆ. ಶೇಕಡಾ 5 ರಿಂದ 30 ರವರೆಗೆ ಎಷ್ಟೂ ಮತ ಪಡೆಯಬಹುದು ಎನ್ನಲಾಗಿದೆ.

ಶೇಕಡಾ 30ರ ಹತ್ತಿರ ಅದು ಮತಗಳಿಸಿದರೆ ಅದು ಇತರ ಕೆಲವು ಪಕ್ಷಗಳ ಜತೆ ಒಕ್ಕೂಟ ರಚಿಸಲು ಪ್ರಯತ್ನಿಸಬಹುದು - ಮುಖ್ಯವಾಗಿ ಇಸ್ಲಾಮಿಕ್ PPP ಜೊತೆ. PPP ಜತೆಗೆ ಈಗಾಗಲೇ ಅದಕ್ಕೆ ಗುಪ್ತ ಸಾಮರಸ್ಯ ಇದೆ ಎನ್ನಲಾಗಿದೆ. ಆದರೆ ಬಹಳ ಟೀಕಾಕರರು ಶೇಕಡಾ 5 ಕ್ಕಿಂತ ಅದಕ್ಕೆ ಹೆಚ್ಚು ಮತ ಸಿಗುವುದಿಲ್ಲ ಎನ್ನುತ್ತಾರೆ.

ಎಡ ಪಕ್ಷ - PRG

ಎಡಪಕ್ಷಗಳಲ್ಲಿ ಪ್ರಬಲವಾದದ್ದು PRD ಎಂಬ ಪಕ್ಷ. 1994 ರಲ್ಲಿ ಬಹಿರಂಗವಾಗಿ ರಚಿಸಲ್ಪಟ್ಟ ಪಕ್ಷ ತನ್ನ ವಿದ್ಯಾರ್ಥಿಗಳು, ಕಾರ್ಮಿಕರು, ರೈತರ ಸಾಮೂಹಿಕ ಸಂಘಟನೆಗಳ ಮೂಲಕ ಪ್ರಜಾಸತ್ತೆಗೆ ನಡೆದ ಜನಾಂದೋಲನಕ್ಕೆ ನಿಜವಾದ ಪ್ರಬಲ ಬೆಂಬಲ ನೀಡಿದೆ. ಇದಕ್ಕೆ ಸ್ಪಷ್ಟ ಸಾಮ್ರಾಜ್ಯಶಾಹೀ- ವಿರೋಧಿ, ಬಾಲಬಡುಕ ಬಂಡವಾಳ- ವಿರೋಧಿ ಕಾರ್ಯಕ್ರಮವಿದೆ. ಮಿಲಿಟರಿ ಸರ್ವಾಧಿಕಾರಿ ಪಕ್ಷಗಳೆಲ್ಲ ಒಂದು ವಿಶಾಲ ಸಂಯುಕ್ತ ರಂಗ ಕಟ್ಟಬೇಕು ಎಂದು ಪ್ರಬಲವಾಗಿ ಅದು ಪ್ರತಿಪಾದಿಸಿದೆ. ಹಿಂದಿನ ಕಮ್ಯುನಿಸ್ಟ್ ಪಕ್ಷದ ಸದಸ್ಯರು ಸೇರಿದಂತೆ ಎಲ್ಲಾ ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಬೇಕು ಎಂದು ಹೇಳಲು ಧೈರ್ಯ ತೋರಿದ ಏಕ ಮಾತ್ರ ಪಕ್ಷ ಇದು. ಸುಹಾರ್ತೋ ಆಡಳಿತದ ಕೊನೆಯ ತಿಂಗಳುಗಳಲ್ಲಿ ಈಗಲೂ ಅತ್ಯಂತ ದಮನಕ್ಕೊಳಗಾದ ಪಕ್ಷ. ಜನಾಂದೋಲನವನ್ನು ಉತ್ತೇಜಿಸಿದೆ PRD ಎಂದು ಅಪಾದನೆ ಮೇಲೆ ಅದರ ಹೆಚ್ಚಿನ ಹಿರಿಯ ನಾಯಕರನ್ನು ಬಂಧಿಸಲಾಗಿದೆ. ಐ.ಎಂ.ಎಫ್.ನ ಔಷಧಿ ಇಂಡೋನೇಶ್ಯಾದ ಆರ್ಥಿಕವನ್ನು ಸುಧಾರಿಸುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಿರುವ ಏಕಮಾತ್ರ ಪಕ್ಷ. ವಿದ್ಯಾರ್ಥಿ, ಕಾರ್ಮಿಕರು ಮತ್ತು ರೈತರಲ್ಲಿ ಪ್ರಬಲ ಬೆಂಬಲ ಹೊಂದಿರುವ ಈ ಪಕ್ಷಕ್ಕೆ ತನ್ನ ಬೆಂಬಲವನ್ನು ಓಟುಗಳಾಗಿ ಬದಲಾಯಿಸಲು ಕಷ್ಟವಾಗಬಹುದು. ಯಾಕೆಂದರೆ ಈ ಪಕ್ಷ ಇನ್ನೂ ಅಲ್ಲಿ - ಭೂಗತವಾಗಿಯೇ ಕೆಲಸ ಮಾಡುತ್ತಿದೆ. ಆದರೂ ಅದು ಗಮನಾರ್ಹ ಬೆಂಬಲ ಗಳಿಸಬಹುದು ಎನ್ನಲಾಗಿದೆ.



ಮುಂದೇನು?

ಚುನಾವಣೆ ಫಲಿತಾಂಶಗಳು ಜೂನ್ ಕೊನೆಯ ಹೊತ್ತಿಗೆ ಬರಲಿವೆ. ಚುನಾವಣಾ ಪ್ರಚಾರದಲ್ಲಿ ಭಾರೀ ಹಿಂಸಾಚಾರ, ಭಾರಿ ಪ್ರಮಾಣದ ಚುನಾವಣಾ ಅಕ್ರಮಗಳು ನಡೆದರೆ ಅದೇ ನೆಪ ಮಾಡಿ ಮಿಲಿಟರಿ ಅಥವಾ ಬೇರೆ ರೀತಿಯ ಕ್ಷಿಪ್ರಕ್ರಾಂತಿಯ ಸಾಧ್ಯತೆ ಇಲ್ಲದಿಲ್ಲ. ಆದರೆ ಜನಾಂದೋಲನದ ತೀವ್ರತೆ ಈ ಸಾಧ್ಯತೆಯನ್ನು ಹೆಚ್ಚಿನ ಮಟ್ಟಿಗೆ ಇಲ್ಲವಾಗಿಸುತ್ತದೆ. ಮೇಲೆ ಹೇಳಿದ ನಾಲ್ಕೈದು ಪಕ್ಷಗಳು ಶೇಕಡಾ 60-70 ಮತಗಳಿಸುವ ಸಾಧ್ಯತೆ ಇದೆ. PPP ಬಿಟ್ಟು ಉಳಿದ ಪಕ್ಷಗಳು ಶೇಕಡಾ 50 ಕ್ಕಿಂತ ಹೆಚ್ಚು ಮತ ಗಳಿಸುವ ಸಮ್ಮಿಶ್ರ ಸರ್ಕಾರದ ಸ್ಪಷ್ಟ ಸಾಧ್ಯತೆಗಳಿವೆ. ಹಾಗೇನೇ ಮೇಘಾವತಿ ವಿರೋಧ ಪಕ್ಷದ ಸಾಮಾನ್ಯ ಅಧ್ಯಕ್ಷೀಯ ಅಭ್ಯರ್ಥಿಯಾಗುವ ಸಾಧ್ಯತೆ ಇದೆ.

ಚುನಾವಣೆಯ ನಂತರ ಬರಲಿರುವ ಸರ್ಕಾರ ಎಷ್ಟರ ಮಟ್ಟಿಗೆ ಜನರ ಪ್ರಜಾಸತ್ತಾತ್ಮಕ ಆಶೋತ್ತರಗಳನ್ನು ಈಡೇರಿಸುವುದು, ಸಾಮ್ರಾಜ್ಯಶಾಹಿ, ಮಿಲಿಟರಿಗಳ ಮಸಲತ್ತುಗಳನ್ನು ಹೇಗೆ ಎದುರಿಸುವುದು ಎನ್ನುವುದನ್ನು ಕಾದು ನೋಡಬೇಕು.

- ಶರತ್ ಚಂದ್ರ

ಸೂಪರ್ಸ್ ಸಿಕ್ಸ್‌ನಿಂದ ಸೆಮಿಫೈನಲ್‌ಗೆ ಭಗೀರಥ ಪ್ರಯತ್ನ

ಸೂಪರ್ ಸಿಕ್ಸ್‌ನ ಮೊದಲ ಮ್ಯಾಚ್‌ನಲ್ಲಿ ಭಾರತ ಕೆಟ್ಟದಾಗಿ ಸೋತಿದೆ. ಆರಂಭದ ಹೀರೋ ಬ್ಯಾಟ್ಸ್‌ಮನ್‌ಗಳು ಕೈಕೊಟ್ಟ ಮೇಲೆ, ಅಜಯ ಜಡೇಜಾ, ರಾಬಿನ್ ಸಿಂಗ್ ಉತ್ತಮ ಬ್ಯಾಟ್ ಮಾಡಿದರೂ ಗೆಲುವಿನ ಹತ್ತಿರವೂ ಬರಲಾಗಲಿಲ್ಲ. ಇದರಿಂದ ಭಾರತ ಸುಲಭವಾಗಿ ಸೆಮಿಫೈನಲ್ ತಲುಪುವ ಅವಕಾಶವಂತೂ ಇಲ್ಲ. ಈಗ ಭಾರತ ಸೂಪರ್ ಸಿಕ್ಸ್‌ನಲ್ಲಿ ಕೊನೆಯ ಸ್ಥಾನ ಪಡೆದಿದೆ.

ಇನ್ನೆರಡೂ ಮ್ಯಾಚು (ಪಾಕಿಸ್ತಾನ ಮತ್ತು ನ್ಯೂಝಿಲೆಂಡ್ ಜತೆಗೆ) ಗೆದ್ದು ಉತ್ತಮ ರನ್‌ರೇಟ್ ಗಳಿಸಿದರೆ ಮತ್ತು ನ್ಯೂಝಿಲೆಂಡ್ ಅಥವಾ ದಕ್ಷಿಣ ಆಫ್ರಿಕಾ ಕೆಟ್ಟದಾಗಿ ಆಡಿದರೆ, ಇಂತಹ ಹಲವು 'ರೆ'ಗಳಾದರೆ ಭಾರತ ಸೆಮಿಫೈನಲ್ ತಲುಪುತ್ತದೆ. ಅದಕ್ಕೆ ಭಗೀರಥ ಪ್ರಯತ್ನವನ್ನೇ ಮಾಡಬೇಕು.

ಒಂದು ರೀತಿಯಲ್ಲಿ ಈ ಸೋಲು ವಿಶ್ವ ಕಪ್‌ನಲ್ಲಿ ಕುತೂಹಲವನ್ನು ಹೆಚ್ಚಿದೆ. ಅನಿಶ್ಚಿತತೆ ಇದ್ದಾಗ ಆಟದಲ್ಲಿ ಕುತೂಹಲ ಇನ್ನೂ ಜಾಸ್ತಿ ಅಲ್ಲವೇ?



ಸೂಪರ್ ಸಿಕ್ಸ್
(ಶನಿವಾರ ಜೂನ್ 5ರ ಬೆಳಿಗ್ಗೆ)

	ಮ್ಯಾಚ್‌ಗಳು	ಗೆದ್ದಿದ್ದು	ಸೋತಿದ್ದು	ಪಾಯಿಂಟ್	ರನ್‌ರೇಟ್
ಪಾಕಿಸ್ತಾನ	2	2	0	4	+ 0.72
ಜಿಂಬಾಬ್ವೆ	2	2	0	4	+ 0.33
ನ್ಯೂಜಿಲೆಂಡ್	2	1	1	2	-0.40
ಆಸ್ಟ್ರೇಲಿಯಾ	3	1	2	2	+ 0.29
ದ.ಆಫ್ರಿಕಾ	2	1	1	2	-0.35
ಭಾರತ	3	0	3	0	-0.51


ವಿ.ಸೂ.: ಮೊದಲ ಸುತ್ತಿನಿಂದ ಸೂಪರ್‌ಸಿಕ್ಸ್ ಹಂತಕ್ಕೆ ಬಂದ ಆಯಾಯ ಗುಂಪಿನ ಇತರ ಎರಡು ತಂಡಗಳೊಂದಿಗೆ ಮೊದಲ ಸುತ್ತಿನಲ್ಲೇ ಆಡಿದ ಪಂದ್ಯಗಳನ್ನು ಇಲ್ಲಿ ಲೆಕ್ಕಕ್ಕೆ ತೆಗೆದುಕೊಳ್ಳಲಾಗುತ್ತದೆ.



ಅದಿಲ್ಲದಿದ್ದರೆ ಆಟದಲ್ಲಿ ಸ್ವಾರಸ್ಯವೇ ಇಲ್ಲ. ಈಗಿನ ಸೂಪರ್ ಸಿಕ್ಸ್ ಪಾಯಿಂಟ್‌ಗಳನ್ನು ನೋಡಿದರೆ (ಕೋಷ್ಟಕ ನೋಡಿ) ಏನೂ ಆಗಬಹುದು. ಸೂಪರ್ ಸಿಕ್ಸ್‌ಗೆ ಬರುವ ಮೊದಲ ಸುತ್ತಿನ ಕೊನೆಯ ಮ್ಯಾಚ್‌ಗಳಲ್ಲಿ ಅಸಾಧ್ಯ ಎನ್ನುವ ಹಲವು ಸಾಧ್ಯವಾದದ್ದು- ದಕ್ಷಿಣ ಆಫ್ರಿಕಾವನ್ನು ಜಿಂಬಾಬ್ವೆ ಸೋಲಿಸಿದ್ದು, ಪಾಕಿಸ್ತಾನವನ್ನು ಬಾಂಗ್ಲಾದೇಶ ಸೋಲಿಸಿದ್ದು - ಇದಕ್ಕೆ ಉದಾಹರಣೆ. ಈ ವಿಶ್ವಕಪ್‌ನಲ್ಲಂತೂ ಪ್ರತಿಯೊಂದು ತಂಡ ಏರು ಪೇರು ಕಂಡಿದೆ.

ಈ ಕುತೂಹಲಕಾರಿ ವಿಶ್ವಕಪ್‌ನ ಮ್ಯಾಚ್‌ಗಳನ್ನು ನೋಡೋಣ. ಭಾರತ ಗೆದ್ದು ಸೆಮಿಫೈನಲ್‌ಗೆ ಹೋಗಲಿ ಎಂದು ಹಾರೈಸೋಣ. ಭಾರತದ್ದು ಮಾತ್ರವಲ್ಲ, ಬೇರೆ ಪ್ರತಿಯೊಂದು ಮ್ಯಾಚನ್ನು ಕುತೂಹಲದಿಂದ ನಿರೀಕ್ಷಿಸೋಣ.

ವಿಳಾಸ ಬಿಟ್ಟು ಹೋದ ಇ.ಎಂ.ಎಸ್.



ಕಿವಿಕಿವುಡಾಗಿಸುವ
ಮಣ ಮಣ ಮಂತ್ರಗಳ ನಡುವೆ
ನಂಬೂದರಿ ಬಾಲಕ
ದೀನರ ಆರ್ತನಾದ ಆಲಿಸಿ ಬಿಟ್ಟ
ಸೀಳಿದ ನೆಲದ ಎದುರು ನಿಂತು
ಕೇಳಿ ಬಿಟ್ಟ
ಇದೆಲ್ಲಾ ಹೀಗೇಕೆ?
ಖಾಲಿ ಬೀದಿ ಕರೆಯಿತು
ನನ್ನನ್ನು ತುಂಬಿ ಬಿಡು
ಬೀದಿಯ ತೆಕ್ಕೆಗೆ ನಂಬೂದರಿ
ನೆಲದ ಎದೆಹಾಲು ಹೀರಿ ಬೆಳೆದ
ಜಗತ್ತು ನಿಬ್ಬೆರಗಾಗಿ ನೋಡಿತು
60 ಸವಂತ್ಸರಗಳಲ್ಲಿ
ಇದೆಲ್ಲಾ ಹೇಗೆ ಸಾಧ್ಯ?
ಹೋರಾಟದ ಮಾಗಿದ ಮುಖ
ನಕ್ಕಿತು
ದೃಢವಾಗಿ ಗುಕ್ಕಿತು
ಇದೆಲ್ಲಾ ಹೀಗೆ ಸಾಧ್ಯ
ಅವರು ಹೋಗಿ ಬಿಟ್ಟರು
ನಮ್ಮನ್ನು
ಜೊತೆಗೆ ತಮ್ಮ ವಿಳಾಸವನ್ನು
ಅವರನ್ನು ಕಾಣಲೇ ಬೇಕನಿಸಿದರೆ
ಅಗೋ ಅಲ್ಲಿದೆ
ಅವರ ಕನ್ನಡಕ
ಅವರ ಮಾತನ್ನು ಕೇಳಲೇ ಬೇಕೆನಿಸಿದರೆ
ಬನ್ನಿ
ಬೀದಿಗೆ, ಹೋರಾಟಗಳಿಗೆ
ಈಗೋ ಇಲ್ಲಿ
ಎಲ್ಲರ ಮಾತನ್ನು ಅವರು ಕೇಳುತ್ತಿದ್ದಾರೆ
ಎಲ್ಲರೂ ಅವರ ಮಾತನ್ನು ಆಡುತ್ತಿದ್ದಾರೆ.

-ಪರುಶುರಾಮ ಕಲಾಲ್
ಹೊಸಪೇಟೆ.

ಹಲವು ಬೋಲಿಗಳ ನಾಡು ಬಿಹಾರ

ಪುಟ 10 ರಿಂದ

ವೈವಿಧ್ಯಮಯವಾದ ಸಾಹಿತ್ಯ ಸೃಷ್ಟಿ ಇನ್ನೂ ಆಗಿಲ್ಲ.

ಜಾರ್‌ಖಂಡ್ ಪ್ರದೇಶದ ಪ್ರಮುಖ ಬೋಲಿಗಳಲ್ಲೊಂದಾದ ಕುರುಮಾಲಿಯಲ್ಲಿ ಸಾಹಿತ್ಯ ಸೃಷ್ಟಿಗಿಂತಲೂ ಭಾಷಾ ಅಧ್ಯಾಯನದ ಕೆಲಸ ಹೆಚ್ಚಿಗೆ ನಡೆದಿದೆ. 1980 ರಲ್ಲಿ ರಾಂಚಿ ವಿ.ವಿ.ಯಲ್ಲಿ ಪ್ರತ್ಯೇಕ ಭಾಷ ವಿಭಾಗ ತೆರೆದಿದ್ದರಿಂದ, ಕುರುಮಾಲಿ ಮತ್ತು ಇತರ ಸಂಬಂಧ ಕುರಿತು ಹೆಚ್ಚಿನ ತೌಲನಿಕ ಅಧ್ಯಾಯನಗಳು ನಡೆಯುವಂತಾಗಿದೆ. ಡಾ.ಹೆಚ್.ಎನ್.ಸಿಂಗ್, ರಾಜ್ ಉಪೇಂದ್ರನಾಥ ಸಿಂಗ್‌ದೇವ್, ಬಿ.ಕೆ. ಮಹತೋ ಮುಂತಾದವರ ಪ್ರಯತ್ನದಿಂದಾಗಿ ಕುರುಮಾಲಿ ಜಾನಪದ ಸಾಹಿತ್ಯ ಸಂಗ್ರಹ ಹಾಗೂ ಸಂಸ್ಕೃತಿ ಅಧ್ಯಾಯನಕ್ಕೆ ಹೆಚ್ಚಿನ ಪ್ರಾಮುಖ್ಯತೆ ದೊರೆತಿದೆ. ಖುಧಿರಾಮ್ ಮಹತೋ ಅವರು ಕುರುಮಾಲಿ ಸಾಹಿತ್ಯ ಚರಿತ್ರೆ ಬರೆದಿರುವರಾದರೂ ಆಕೃತಿಯ ಬಗ್ಗೆ ಹಲವಾರು ವಿದ್ವಾಂಶರು ತಮ್ಮ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಸುರೇಂದ್ರ ನಾಥ ಮಹತೋ, ಅನಂತ ಮಹತೋ, ಡಾ. ನಂದಕುಮಾರ್ ಸಿಂಗ್, ರಾಜೇಂದ್ರ ಪ್ರಸಾದ ಮಹತೋ. ದೇವಕಿ ನುದನ ಪ್ರಸಾದ, ಕಲಿಪದ ಮಹತೋ ಮುಂತಾದವರು ಸೃಜನಶೀಲ ಸಾಹಿತ್ಯವನ್ನು ಸಮೃದ್ಧಗೊಳಿಸುತ್ತಿದ್ದಾರೆ.

ಉತ್ತರ ಹಾಗೂ ಮಧ್ಯ ಬಿಹಾರ ಬೋಲಿಗಳಾದ ಭೋಜಪುರಿ, ಮೈಥಿಲಿ , ಮಗಹಿ, ಬಜ್ಜಿಕಾ, ಅಂಗಿಕಾಗಳಲ್ಲಿ ಮೈಥಿಲಿಗೆ ಮೊದಲ ಸ್ಥಾನವಿದೆ. ಹಿಂದಿಯ ಆದಿಕವಿ ವಿದ್ಯಾಪತಿ ಮೈಥಿಲಿಯಲ್ಲಿ ಸಾಹಿತ್ಯ ಸೃಷ್ಟಿಸಿದ್ದಾರೆ. ಆಧುನಿಕ ಸಾಹಿತ್ಯ ಸಂದರ್ಭದಲ್ಲಿಯಂತೂ ಮೈಥಿಲಿಯ ಕೊಡುಗೆ ಅಪಾರವಾದುದು. ಮಿಥಿಲಾಂಚಲ್ ಪ್ರದೇಶದಲ್ಲಿ ಜನಬಳಕೆಯ ಭಾಷೆಯಾಗಿರುವ ಮೈಥಿಲಿ ಅತ್ಯಂತ ಕೋಮಲ ಹಾಗೂ ಸುಂದರ ಭಾಷೆಯೆಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಚಂದಾಝಾ, ದಿ.ಕವಿವರ್ ಲಾಲದಾಸ್, ಮುನ್ನಿ ರಘುನಂದನ ದಾಸ್, ಪ್ರೋ. ಹರಿಮೊಹನ ಝಾ, ಶ್ರೀಮತಿ ಲೀಲಿರೇ, ಶ್ರೀಮತಿ ಉಷಾಕಿರಣ್ ಖಾನ್ ಮುಂತಾದವರು ಈ ಭಾಷೆಯ ಪ್ರಮುಖ ಲೇಖಕರು ಕವಿವರ ಜೀವನ ಝಾ ಅವರನ್ನು ಆಧುನಿಕ ಮೈಥಿಲಿ ನಾಟಕಗಳ ಪಿತಾಮಹ ಎಂದೇ ಗುರುತ್ತಾರೆ. ಜೀವನ ಝಾ ಅವರು ರಚಿಸಿದ "ಸುಂದರ ಸಂಜೋಗ್", "ಸಾಂಬತಿ ಪುನರ್‌ಜನ್ಮ" ಹಾಗೂ "ನರ್ಮದಾ ಸಾಗರ್" ನಾಟಕಗಳು ವಿಮರ್ಷಕರಿಂದ ಮೆಚ್ಚುಗೆ ಗಳಿಸಿವೆ.

ಪುರಾನಾ ಶಹಾಬಾದ್ ಜಿಲ್ಲೆ, ಕೈಮೂರು, ರೋಹದಾಸ ಬಕ್ಸರ್, ಬೋಜಪುರ, ಶಿವಾನ್ ಚತುರಾರ್, ಗೋಪಾಲಗಂಜ್, ಮೋತಿ ಹರಿ, ಚಂಪಾರಣ್ಯ ಹಾಗೂ ಉತ್ತರ ಪ್ರದೇಶದ ಕೆಲಕಡೆ ಜನಬಳಕೆಯಲ್ಲಿರುವ ಬೋಜಪುರಿ ಬೋಲಿಯಲ್ಲೂ ಅತ್ಯುತ್ತಮ ಸಾಹಿತ್ಯ ಸೃಷ್ಟಿಯಾಗಿದೆ. ಈ ಬೋಲಿಯನ್ನು ಮಾತಾಡುವವರು ಫೀಜಿ, ಮಾರಿಷಸ್‌ನಲ್ಲೂ ಇದ್ದಾರೆ ಎನ್ನುವುದು ಈ ಭಾಷೆಯ ಲೇಖಕರಿಗೆ ಹೆಮ್ಮೆಯ ಸಂಗತಿ. ಸ್ವಾತಂತ್ರ್ಯ ಹೋರಾಟಗಾರ ಕುಂವರಸಿಂಗ್ ಅವರ ಮೇಲೆ ಡಾ. ರಾಕೇಶ ಮಹಾಕಾವ್ಯವೇ ಬರೆದಿದ್ದಾರೆ. ಬೋಜಪುರಿಯಲ್ಲಿ ಸಿಪಾಯಿ ಪಾಂಡೆ, ಮನ್ ಮೋಜ್, ಡಾ.ನಂದಕಿಶೋರ ತಿವಾರಿ, ಡಾ.ರಾಜ್ ನಾರಾಯಣ ರಾಯ್ ಉತ್ತಮ ಕಾವ್ಯ ಸೃಷ್ಟಿಸಿದ್ದಾರೆ. ದಿ.ರಾಮೇಶ್ವರ ಸಿಂಗ್ ಹಾಗೂ ಡಾ. ಶಂಭುಶರಣ ಈ ಭಾಷೆಯ ಪ್ರಮುಖ ನಾಟಕಕಾರರು.

ಮಧ್ಯ ಬಿಹಾರದ ಹಲವಾರು ಜಿಲ್ಲೆಗಳಲ್ಲಿ ಜನಬಳಕೆಯಲ್ಲಿರುವ 'ಮಗಹಿ' ಬೋಲಿಯಲ್ಲೂ ಶ್ರೇಷ್ಠ ದರ್ಜೆಯ ಸಾಹಿತ್ಯ ಸೃಷ್ಟಿಯಾಗುತ್ತದೆ. ಶಾಲೆ, ಕಾಲೇಜುಗಳಲ್ಲಿ ಹಿಂದಿಯಲ್ಲಿ ಅಭ್ಯಾಸ ಮಾಡಿ ವಿ.ವಿ., ಕಾಲೇಜುಗಳಲ್ಲಿ ಹಿಂದಿ ಪಾಠ ಮಾಡುವ ಹಲವಾರು ಜನ ಪ್ರಾಧ್ಯಾಪಕರೂ 'ಮಗಹಿ' ಭಾಷೆಯಲ್ಲಿ ಸಾಹಿತ್ಯ ಸೃಷ್ಟಿಸುತ್ತಿರುವುದು ಗಮನಾರ್ಹ.

ಡಾ. ರಾಮ ಪ್ರಸಾದ ಸಿಂಗ್ ಅವರು ಕತೆ, ಕಾದಂಬರಿ, ಕಾವ್ಯ, ಜಾನಪದ ಸಂಗ್ರಹ ಹೀಗೆ ಹಲವಾರು ಪ್ರಕಾರಗಳಲ್ಲಿ ಕೈಯಾಡಿಸಿ 'ಮಗಹಿ' ಸಾಹಿತ್ಯದ ಸಮೃದ್ಧತೆಯನ್ನು ಹೆಚ್ಚಿಸಿದರು. ಡಾ. ಸಿಂಗ್ ಅವರ 'ನರಕ ಸರಗ ಧರತಿ'(ಕಾದಂಬರಿ), "ಸೋರಹಿ"(ಕಥಾ ಸಂಕಲನ) ವನ್ನು ವಿಮರ್ಶಕರು ವಿಶೇಷವಾಗಿ ಪ್ರಸ್ತಾಪಿಸುತ್ತಾರೆ. ಬಾಬುಲಾಲ್, ಮಧುಕರ್, ರಾಜೇಂದ್ರ ಕುಮಾರ ಯೋದ್ಯೆ, ಡಾ. ರಾಮವಿಲಾಸ ರಾಜಕಾರಣ ಮುಂತಾದದವರನ್ನು 'ಮಗಹಿ' ಭಾಷೆಯ ಉತ್ತಮ ಕಾದಂಬರಿಕಾರರೆಂದು ಗುರುತಿಸಿದರೆ, ಡಾ. ಅಭಿಮನ್ಯು ಪ್ರಸಾದ ಮೌರ್ಯ, ಪ್ರೋ. ದಿಲೀಪಕುಮಾರ ಮುಂತಾದವರನ್ನು ಉತ್ತಮ ನಾಟಕಕಾರರೆಂದು ಪರಿಗಣಿಸಲಾಗುತ್ತದೆ. ರಾಸ್ ಬಿಹಾರಿ ಪಾಂಡೆ, 'ಮಗಹಿ' ಭಾಷೆ ಸಾಹಿತ್ಯ ಚರಿತ್ರೆ ಬರೆದರೆ, ಭುವೇಶ್ವರಿ ಪ್ರಸಾದ ಸಿಂಗ್ ಅವರು 'ಮಗಹಿ' ಶಬ್ದಕೋಶವನ್ನೇ ಸಿದ್ಧಪಡಿಸುತ್ತಿದ್ದಾರೆ. 'ಮಗಹಿ' ಭಾಷೆಯೊಂದರಲ್ಲೇ ಸುಮಾರು 15 ಸಾಹಿತ್ಯಕ ಮಾಸಿಕಗಳು ಪ್ರಕಟವಾಗುತ್ತಿರುವ ಸಂಗತಿ ತಿಳಿದ ನಮಗೆ ಮೊದಮೊದಲು ನಂಬಲಾಗಲಿಲ್ಲ.'ಅಲಕಾ ಮಾಗಾದಿ' ಸಾಹಿತ್ಯಕ ಮಾಸ ಪತ್ರಿಕೆಯ ಸಂಪಾದಕರೂ ಆಗಿರುವ ಡಾ. ಅಭಿಮನ್ಯು ಪ್ರಸಾದ ಮೌರ್ಯ ಅವರು, ತಾವು ಸಂಗ್ರಹಿಸಿದ ವಿವಿಧ ಮಾಸಿಕಗಳನ್ನು ನಮ್ಮೆದುರು ಹಿಡಿದಾಗ, ನಿಜಕ್ಕೂ ದಂಗಾಗಿ ಹೋಗಿದ್ದೆವು. 'ಉತ್ತರ ಭಾರತದ ಹಲವಾರು ಭಾಷೆಗಳಿಗೆ ಮಗಹಿ ತಾಯಿ ಇದ್ದಹಾಗೆ' ಎಂದು ಡಾ.ಗ್ರಿಯರ್ಸನ್ ಅಭಿಪ್ರಾಯ ಪಡುವುದನ್ನು ಅಭಿಮನ್ಯು ಪ್ರಸಾದ ಮೌರ್ಯ ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದರು. ಬುದ್ಧನ ಉಪದೇಶ ಕೂಡ ಮಗಹಿ ಭಾಷೆಯಲ್ಲೇ ನಡೆಯುತ್ತಿತ್ತು. ಎಂದು ವಾದಿಸುವ ವಿದ್ವಾಂಸರು "ತ್ರಿಪಿಟಿಕಾ" ಗಳ ಭಾಷೆ 'ಮಗಹಿ' ಭಾಷೆಗೆ ಹತ್ತಿರವಾಗಿದೆ ಎಂದು ಉದಾರಹಣೆ ಸಹಿತ ವಿವರಿಸುತ್ತಾರೆ.

ಉತ್ತರ ಹಾಗೂ ಮಧ್ಯ ಬಿಹಾರದಲ್ಲಿ ಭಾಷಾ ವರ್ಗೀಕರಣವು ಭೌಗೋಳಿಕ ಆಧಾರದಲ್ಲಿದ್ದರೆ, ದಕ್ಷಿಣ ಬಿಹಾರದಲ್ಲಿ ಜಾತಿಯಾಧಾರಿತ ಭಾಷ ವರ್ಗೀಕರಣ ಇರುವುದನ್ನು ನಮ್ಮ ಗಮನಕ್ಕೆ ಬಂತು.

ಮೈಥಿಲಿ-ಮಿಥಿಲಾಂಚಲ, ಭೋಜಪುರಿ-ಭೋಜಪುರ, ಮಗಹಿ-ಮಗಧ, ಬಜ್ಜಿಕಾ-ಬ್ರಜ್ ಸಂಘ, ಅಂಗಿಕಾ ಪ್ರದೇಶ ಇತ್ಯಾದಿ ನಿದರ್ಶನವಾಗಿ ನೋಡಬಹುದಾಗಿದೆ. ಈ ಮೇಲಿನ ಭಾಷೆಗಳು ಉತ್ತರ ಹಾಗೂ ಮಧ್ಯ ಬಿಹಾರದಲ್ಲಿ ಜನ ಬಳಕೆಯಲ್ಲಿರುವಂತಹವು.

ಆದರೆ ದಕ್ಷಿಣ ಬಿಹಾರದಲ್ಲಿ, ಮುಂಡಾರಿ- ಮುಂಡಾ ಜಾತಿ, ಸಂತಾಲಿ- ಸಂತಾಲ ಜಾತಿ, ಖಡಿಯಾ - ಖಡಿಯಾ ಜಾತಿ, ಹೋ- ಹೋ ಜಾತಿ,ಕುರುಮಾಲಿ- ಕುರ್ಮಿ ಜಾತಿ. ಜಾತಿಗೊಂದು ಭಾಷೆಯಿರುವುದು ನಾನು ಕಂಡದ್ದು ಇಲ್ಲೇ.

ಕೆಲವು ಜನ ಲೇಖಕರು ಖ್ಯಾತಿಗಾಗಿ ಹಿಂದಿಯಲ್ಲಿ, ಪ್ರೀತಿಗಾಗಿ ತಮ್ಮ ತಮ್ಮ ಬೋಲಿಗಳಲ್ಲಿ ಸಾಹಿತ್ಯ ಸೃಷ್ಟಿಸುತ್ತಿದ್ದರೆ, ಇನ್ನೂ ಕೆಲ ಲೇಖಕರು ಹಿಂದಿಯೊಂದಿಗೆ ತಮ್ಮ ಬೋಲಿ ಬೆರಸಿ ಕತೆ, ಕಾವ್ಯ ರಚಿಸುತ್ತಿದ್ದಾರೆ. ಹಿಂದಿಯ ಪರಿಶುದ್ಧತೆಯ ಬಗ್ಗೆ ಕಾಳಜಿ ಹೊಂದಿದವರು ವಿರೋಧಿಸಿದರೆ, ಮುಕ್ತವಾಗಿ ಆಲೋಚಿಸುವವರು ಹಿಂದಿ ಭಾಷೆ ಸಮೃದ್ಧಗೊಳ್ಳುತ್ತದೆ ಎಂದು ಅನುಮೋದಿಸಿದರು. 'ಬಿಹಾರ ಸಾಹಿತ್ಯ' ವೆಂದರೆ ಹಿಂದಿ ಸಾಹಿತ್ಯ ಎಂದು ತಿಳಿದಿದ್ದ ನಾನು ಬೋಲಿಗಳಲ್ಲಿಯ ವೈವಿಧ್ಯಮಯ ಅಭಿವ್ಯಕ್ತಿ ಕಂಡು ಮೂಕ ವಿಸ್ಮಿತನಾದೆ.

Reg. N : 17015/64 KRNM/BGS-405 MAG(2) PRB DECR 319-79/79 AIKYARANGA WEEKLY
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಜಿ.ಎನ್.ನಾಗರಾಜ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ರೆಸೆಂಟ್ ರಸ್ತೆ, ಬೆಂಗಳೂರು-1
Printed & Published by Communist Party of India(Marxist), Karnataka State Committee. Editor : G.N. NAGARAJ